ಕಲ್ಯಾಣ ಕಿರಣ

ಮಾರ್ಚ್ 2008

ಬೆಲೆ-ರೂ.10.00





63ನೆಯ ಹುಟ್ಟು ಹಬ್ಬದಂದು ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ ಮಾತಾಜಿಯವರಿಗೆ ಭಕ್ತಿ ಗೌರವಗಳಿಂದ ಪುಷ್ಪವೃಷ್ಠಿ



63ನೆಯ ಹುಟ್ಟು ಹಬ್ಬದ ಸಂಕೇತವಾಗಿ 63 ಪ್ರಣತೆ ದೀಪಗಳನ್ನುಬೆಳಗಿ.ಪೂಜ್ಯ ಮಾತಾಜಿಯವರು ಶತಾಯುಷಿಗಳಾಗಲೆಂದು ಹಾಡುತ್ತ ಹಾರೈಸುತ್ತಿರುವ ಶರಣ - ಶರಣೆಯರು

ಸಂಪುಟ-38 ಬಸವ ಶಕೆ-874 ಆಜೀವ ಸದಸ್ಯತ್ವ 1000 ರೂ.
ಸಂಚಿಕೆ-3 ಮಾರ್ಚ್-2008 ವಾರ್ಷಿಕ ಚಂದಾ 100/- ರೂ.

ಅಲ್ಲಮ ಪ್ರಭು ಜೋಗುಳ

ಜೋ ಜೋ ಜೋ ಕಂದ ಅಲ್ಲಮ ಪ್ರಭು ಚಂದ್ರ
ಜೋ ಮುತ್ತಿನಾನಂದ ವದನಾರವಿಂದ । ಜೋ ಜೋ । ॥ ಪ ॥

ಭವ ತಿಮಿರ ತೊಲಗಿಸಲು ಭುವಿಗೆ ಮತ್ತವತರಿಸಿ
ಸುವಿವೇಕಯುತ ಮಾತೆ ಸುಜ್ಞಾನಿ ಗರ್ಭದಿ
ಶಿವ ಜ್ಞಾನಿ ನಿರಹಂಕಾರನ ಕಣ್ಮಣಿ ನೀನಾಗಿ
ಭುವಿವೊಡೆದು ಬೆಳಗಿದೆ ಬಾಲ ತರಣಿಯ ತೆರದಿ॥ । ಜೋ ಜೋ ।

ಚೈತ್ರ ಮಾಸದ ಸೊಬಗು ಕುಡಿವೊಡೆದು ನಗುತಿರೆ
ಮಿತ್ರ ಕಳಕಂಠವು ಮಾಮರದಿ ಹಾಡುತಿರೆ। ಏ
ಚಿತ್ರ ವರ್ಣವ ತಳೆವುತ್ತ ಧರೆ ಇರೆ
ಚೈತ್ರ ಯುಗಾದಿ ದಿನದಂದು ಇಳೆಗಿಳಿದೆ॥ । ಜೋ ಜೋ ।

ತಾಯ್ಮಡಿಲ ಸುಮವಾಗಿ ತೊಟ್ಟಿಲ ಚಿಟ್ಟಾಗಿ
ಮಾಯೆಯ ಗೆಲಿದು ವಿರತಿಯ ವಿಭುವಾಗಿ
ಗುರು ಅನುಮಿಷರಿಂದ ದೃಷ್ಟಿ ದೀಕ್ಷೆಯ ಪಡೆದು
ಸ್ವಯ ಜ್ಞಾನಿ ತಾನಾಗಿ ಮೆರೆದಂಥ ಯೋಗಿ ॥ । ಜೋ ಜೋ ।

ಅನುಭವ ಮಂಟಪದ ಆಧಾರ ತಾನಾಗಿ
ಅನುಭಾವ ನಿಧಿಯಾಗಿ ಅಮರ ಕೀರುತಿಯಾಗಿ
ಶೂನ್ಯ ಪೀಠವ ಏರ್ದ ಪ್ರಥಮ ಜಗದ್ಗುರುವಾಗಿ
ಮಾನ್ಯತೆಯ ಪಡೆದ ಜಂಗಮ ಜ್ಯೋತಿ ॥ । ಜೋ ಜೋ ।

ಹರಿನ ನದಿಯೊಲು ಚರಿಸಿ ಬಸವ ಧರ್ಮವ ಬೆಳೆಸಿ
ಕರುಣಾಕರ ನಿಲುವಿನಿಂ ಭಕ್ತರ ಉದ್ಧರಿಸಿ
ವಚನ ವಾಙ್ಮಯ ನಿಧಿಯ ವೃದ್ಧಿಸಿದ ಜ್ಞಾನಿ
ಸಚ್ಚಿದಾನಂದನ ನೆಚ್ಚಿನ ಕಂದಾ ॥ । ಜೋ ಜೋ ।

- ಮಾತಾಜಿ

ಮಾರ್ಚ್ - ಏಪ್ರಿಲ್ ತಿಂಗಳಿನಲ್ಲಿ ಬರುವ ಹಬ್ಬ - ಹುಣ್ಣಿಮೆ - ಉತ್ಸವಗಳು

ಪೂಜ್ಯ ಮಾತಾಜಿಯವರ 63ನೆಯ ವರ್ಧಂತಿ	- 13.3.2008
ಕಲ್ಯಾಣ ಕ್ರಾಂತಿ ಸಂಸ್ಮರಣೆ	- 22.3.2008
ಅಲ್ಲಮಪ್ರಭು ಜಯಂತಿ, ಚೈತ್ರ ಯುಗಾದಿ	- 7. 4.2008
ಮಹಾರಾಷ್ಟ್ರದಲ್ಲಿ ಲಿಂಗಾಯತ ಗಣ ಮೇಳಾವ	- ಏಪ್ರಿಲ್ 6, 7, 8
ತಮಿಳು ನಾಡಿನ ನೀಲಗಿರಿ ಜಿಲ್ಲೆಯ ಸಕಲಟ್ಟಿಯಲ್ಲಿ ಬಸವ ತತ್ವ ಸಮ್ಮೇಳನ	- ಏಪ್ರಿಲ್ 20
ಅಕ್ಕಮಹಾದೇವಿ ಜಯಂತಿ	- ಏಪ್ರಿಲ್ 20

ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರಿಗೆ
63ನೆಯ ಹುಟ್ಟು ಹಬ್ಬದ ಶುಭಾಶಯಗಳು

ಶುಭ ಕೋರುವವರು: ರಾಷ್ಟ್ರೀಯ ಬಸವ ದಳ, ಗಣಾಚಾರ ದಳ,
ಯುವ ರಾಷ್ಟ್ರೀಯ ಬಸವ ದಳ, ಬೆಂಗಳೂರು

KALYANA KIRANA-Reg No.19988/70. Monthly Magazine Edited And Published by Pujya Mate Kasturidevi on behalf of Vishwakalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10,

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ
ವಿಳಾಸಕ್ಕೆ ಬರೆಯಿರಿ :
ದೂರವಾಣಿ: 23325335/23131476

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿ ನಗರ, ಬೆಂಗಳೂರು-560010

- ಮಾತಾಜಿ

ಪಂಚ ಭೂತಗಳು ಪೂಜಾರ್ಹವಲ್ಲ

ಪೃಥ್ವಿ ಜಡನೆಂದರಿದವಂಗೆ ಸ್ಥಾವರಾದಿಗಳಲ್ಲಿ ಎರಗಲೇಕಯ್ಯಾ ?
ಅಪ್ಪು ಜಡನೆಂದರಿದವಂಗೆ ತೀರ್ಥ ಸ್ನಾನಂಗಳಲ್ಲಿ ಅತಿಶಯವೇಕಯ್ಯಾ ?
ತೇಜ ಜಡನೆಂದರಿದವಂಗೆ ಹೋಮ ಸಮಾಧಿಗಳೇಕಯ್ಯಾ ?
ವಾಯು ಜಡನೆಂದರಿದವಂಗೆ ಧ್ಯಾನಮೌನಂಗಳ ಹಿಡಿಯಲೇಕಯ್ಯಾ ?
ಆಕಾಶ ಜಡನೆಂದರಿದವಂಗೆ ಮಂತ್ರಾರೂಢಿಯೇಕಯ್ಯಾ ?
ಇನಿತು ಜಡನೆಂದರಿದವಂಗೆ ವಿಧಿ ಕಿಂಕರತೆಯಿಲ್ಲವಯ್ಯಾ,
ಗುಹೇಶ್ವರನೆಂಬ ನಿಜವು ಇದು ತಾನೆಂದರಿದ ಮಹಾತ್ಮಂಗೆ !

- ಅಲ್ಲಮ ಪ್ರಭುದೇವರ ವಚನ

ವೈದಿಕ ಹಿಂದು ಧರ್ಮದಲ್ಲಿ ಪೂಜಿಸಿದಂತೆ ಲಿಂಗಾಯತ ಧರ್ಮದಲ್ಲಿ ಪಂಚಭೂತಗಳನ್ನು ಸೂರ್ಯ, ನಕ್ಷತ್ರ ತಾರೆ ಮುಂತಾದುವನ್ನು ಪೂಜಿಸಲಾಗುವುದಿಲ್ಲ. ಗುರು -ಲಿಂಗ-ಜಂಗಮ ಮಾತ್ರ ಪೂಜಾರ್ಹ ವಸ್ತುಗಳು. ಪೃಥ್ವಿ ಜಡ ಎಂದು ಭಾವಿಸುವ ಕಾರಣ ತನ್ನಂಗದ ಇಷ್ಟಲಿಂಗ ಹೊರತಾಗಿ ಅನ್ಯ ಸ್ಥಾವರ ವಸ್ತುಗಳಿಗೆ ಎರಗಲಾಗುವುದಿಲ್ಲ.

(ಏಕ ದೇವೋಪಾಸಕ ಲಿಂಗಾಯತ ಧರ್ಮದಲ್ಲಿ ಮೂರ್ತಿ ಪೂಜೆಗೆ ಅವಕಾಶ ಇಲ್ಲವಾದರೂ ಅದನ್ನು ಬಿಡಲಾರದ ಮನೋಭಾವ ಇರುವುದರಿಂದ ಧರ್ಮ - ಸಂಸ್ಕೃತಿಗಳ ರಕ್ಷಣೆಯ ದೃಷ್ಟಿಯಿಂದ ಗುರು ಬಸವಣ್ಣನವರ ಮೂರ್ತಿಯ ಪ್ರತಿಷ್ಠಾಪನೆ - ಪೂಜೆಗಳನ್ನು ಅನುಷ್ಠಾನಕ್ಕೆ ತರಲಾಗಿದೆ.)

ಈ ಹಿನ್ನೆಲೆಯಲ್ಲಿ ಭೂಮಿ ಪೂಜೆ, ಗುದ್ದಲಿ ಪೂಜೆ, ವಾಹನ ಪೂಜೆ ಎಂಬ ಪದಗಳನ್ನು ಬಳಸಬಾರದು. ಅವನ್ನು ನಾವು ಪೂಜಿಸುವುದಿಲ್ಲ. ಪದಾರ್ಥ ರೂಪದಲ್ಲಿರುವ ಅವನ್ನು ಶುದ್ಧೀಕರಿಸಿ, ದೈವೀಕರಿಸಲಾಗುವುದು. ಯಾವುದೇ ಒಂದು ಭೌತಿಕ ಕ್ಷೇತ್ರಕ್ಕೆ ಹೋದರೆ ಪುಣ್ಯ ಪ್ರಾಪ್ತಿಯಾಗುತ್ತದೆ ಎಂಬ ನಂಬಿಕೆಯೂ ಲಿಂಗಾಯತ ಧರ್ಮದಲ್ಲಿ ಇಲ್ಲ.

ಅದೇ ರೀತಿ ಅಪ್ಪು ಅಂದರೆ ನೀರು ಜಡವಸ್ತು ಎಂದಾಗ ಯಾವುದೇ ನದಿ, ಸರೋವರಗಳ ಭೌತಿಕ ಜಲವು ಅತಿಶಯ ಅಥವಾ ಶ್ರೇಷ್ಠ ಎಂದು ಭಾವಿಸಬೇಕಾಗಿಲ್ಲ. ಗಂಗೆಯ ನೀರು ಪವಿತ್ರ, ತುಂಗೆಯ ನೀರು ಪಾವನ ಎಂಬ ನಂಬಿಕೆ ಹೊಂದಬೇಕಾಗಿಲ್ಲ .ತೀರ್ಥ ಕ್ಷೇತ್ರದ ನೀರಿನಲ್ಲಿ ಸ್ನಾನ ಮಾಡಿದ ಮಾತ್ರಕ್ಕೆ ಪಾಪಕ್ಷಯವಾಗಿ ಪುಣ್ಯ ಪ್ರಾಪ್ತಿಯಾಗುತ್ತದೆ ಎಂಬ ನಂಬಿಕೆ ಸಲ್ಲ. ಒಬ್ಬ ಪ್ರಾಮಾಣಿಕ ಕಾಯಕ ಜೀವಿ ಹೆಚ್ಚು ಗಳಿಸಲಾರದೆ ತೀರ್ಥ ಕ್ಷೇತ್ರಕ್ಕೆ ಹೋಗಲು ಅಸಮರ್ಥನಾಗುತ್ತಾನೆ. ಯಾವ್ಯಾವುದೋ ದಾರಿಯಲ್ಲಿ ಗಳಿಸಿದ ವ್ಯಕ್ತಿ ತೀರ್ಥ ಕ್ಷೇತ್ರ ದರ್ಶನಕ್ಕೆ ಹೋಗಲು ಸಮರ್ಥನಾಗುತ್ತಾನೆ ಅಂದಾಗ ನೈತಿಕ ಮೌಲ್ಯಕ್ಕಿಂತಲೂ ಹಣವೇ ಪ್ರಧಾನವಾಗುವುದಲ್ಲವೆ? ಅದಕ್ಕಾಗಿಯೇ ಶರಣ ಸಿದ್ಧರಾಮೇಶ್ವರರು ಹೇಳುತ್ತಾರೆ.

ಒಬ್ಬರ ಮನವ ನೋಯಿಸಿ ಒಬ್ಬರ ಮನೆಯ ಘಾತವ ಮಾಡಿ
ಗಂಗೆಯಲ್ಲಿ ಮುಳುಗಿದಡೆ ಏನಾಗುವುದಯ್ಯ ?

ತೇಜ ಜಡನೆಂದರಿದವಂಗೆ ಹೋಮ ಸಮಾಧಿಗಳೇತಕಯ್ಯ? ಅಗ್ನಿಯು ದೇವರಲ್ಲ; ಅದೊಂದು ಜಡ ವಸ್ತು. ಅಗ್ನಿ ದೇವರೆಂದು ಅದರೊಳಕ್ಕೆ ಹವಿಸ್ಸು ಹಾಕುವುದು ಒಂದು ಅರ್ಥದಲ್ಲಾದರೆ ಇನ್ನೊಂದು ಅರ್ಥದಲ್ಲಿ ದೇವತೆಗಳಿಗೆ ಅಗ್ನಿಯ ಮೂಲಕ ಹವಿಸ್ಸು ಅರ್ಪಿಸುವುದು. ತುಪ್ಪ-ಮೋದಕ (ಕಡುಬು) ಮುಂತಾದ ಆಪ್ಯಾಯನ ಪ್ರಸಾದವನ್ನು ಅಂದರೆ ತಿನ್ನುಣ್ಣುವ ವಸ್ತುಗಳನ್ನು, ರೇಷ್ಮೆ ಪೀತಾಂಬರ ಮುಂತಾದ ಉಡುವ ವಸ್ತುಗಳನ್ನು, ಚಂದನ -ಬಂಗಾರ ಮುಂತಾದ ಬೆಲೆ ಬಾಳುವ ವಸ್ತುಗಳನ್ನು ಅಗ್ನಿಗೆ ಮಂತ್ರ ಸಹಿತವಾಗಿ ಅರ್ಪಿಸಲಾಗುವುದು. ಇದನ್ನು ಗುರು ಬಸವಣ್ಣನವರು ಆದಿಯಾಗಿ ಎಲ್ಲ ಶರಣರು ತೀವ್ರವಾಗಿ ಟೀಕಿಸುವರು.

ವಾಯು ಜಡ ಎಂದು ತಿಳಿದವರು ಕೇವಲ ಧ್ಯಾನಮೌನಂಗಳನ್ನು ಅವಲಂಬಿಸಬೇಕಾಗಿಲ್ಲ. ಇದರ ಅರ್ಥ ಶರಣರು ಆಸನ, ಪ್ರಾಣಾಯಾಮ, ಧ್ಯಾನವನ್ನು ಮಾಡಬಾರದು ಎಂದೇನು ಅಭಿಪ್ರಾಯ ತಳೆದಿಲ್ಲ. ಆಸನವು ಆರೋಗ್ಯ ರಕ್ಷಣೆಗೆ ಸಹಕಾರಿ; ಪ್ರಾಣಾಯಮವು ಆರೋಗ್ಯ ರಕ್ಷಣೆ ಜೊತೆಗೆ ಕೆಲವು

ಶಾರೀರಿಕ ಸಿದ್ಧಿಗಳನ್ನು ಪಡೆಯಲು ನೆರವಾಗುವುದು. ಆದರೆ ಇವು ಭಕ್ತಿವಿರಹಿತವಾದ ಯಾಂತ್ರಿಕ ಕ್ರಿಯೆಗಳಾಗಿ ಬಿಡಬಾರದು. ಭಕ್ತಿ ಮತ್ತು ದೇವ ಶ್ರದ್ಧೆ ಇಲ್ಲದ ಪ್ರಾಣಾಯಾಮ, ಧ್ಯಾನಗಳು ಹಠಯೋಗಕ್ಕೆ ಅನುಕೂಲವಾಗುತ್ತವೆಯೇ ವಿನಾ ದೇವ ಕಾರುಣ್ಯವನ್ನು ಹೊಂದಲು ಅಲ್ಲ. ಮತ್ತು ಕೆಲವರು ಮೌನವೇ ಬಹಳ ಶ್ರೇಷ್ಟ ಎಂದು ಮೌನವಾಗಿ ಸಾಧನೆ ಮಾಡುವುದುಂಟು. ಅಲ್ಲಮ ಪ್ರಭುದೇವರು ಹೇಳುತ್ತಾರೆ. "ಮಾತು ಜ್ಯೋತಿರ್ಲಿಂಗ." ಮೌನದಿಂದ ಅಂತಃಕರಣ ಶುದ್ಧಿಯಾದರೆ, ಕೆಲವೊಮ್ಮೆ ಮೌನವಾಗಿದ್ದರೂ ಅಂತರಂಗದಲ್ಲಿ ಕೋಪ, ಮತ್ಸರ, ಅಸಹನೆ ತುಂಬಿದ್ದರೆ ಅಂತರಂಗವೂ ಮತ್ತಷ್ಟು ಬಗ್ಗಡಗೊಂಡಿರುತ್ತದೆ. ಜ್ಞಾನಾತ್ಮಕ ಮಾತಿನಿಂದ ತನ್ನ ಅಂತರಂಗ ಮಾತ್ರವಲ್ಲ ಇತರ ಕೇಳುಗರ ಅಂತಃಕರಣ ಸಹ ಶುದ್ಧಗೊಳ್ಳುತ್ತವೆ.

ಭಾರತದಲ್ಲಿ ಬಹುಪಾಲು ಯೋಗಗಳು ಪತಂಜಲಿಯ ಅಷ್ಟಾಂಗ ಯೋಗ ಸಹಿತವಾಗಿ ನಿರೀಶ್ವರ ಯೋಗಗಳು. ಪತಂಜಲಿಯ ಯೋಗದಲ್ಲಿ ಈಶ್ವರ ಪ್ರಣಿಧಾನ ಎಂಬ ಒಂದು ವಿಷಯವಿದ್ದರೂ ದೇವರು ಇಡೀ ಯೋಗದಲ್ಲಿ ಹಾಸುಹೊಕ್ಕಾಗಿರದೆ "ಆಹ್ವಾನವಿಲ್ಲದ ಅತಿಥಿ"ಯಾಗಿ ಆಗಂತುಕನಾಗಿ ಕುಳಿತುಕೊಳ್ಳುತ್ತಾನೆ. ಲಿಂಗಾಂಗ ಯೋಗವು ಅನುಭಾವ (*Mysticism*) ಪ್ರಧಾನವಾದ ಸೇಶ್ವರವಾದ. ಇಲ್ಲಿ ದೇವರು ಹಾಸುಹೊಕ್ಕಾಗಿ ಇರುತ್ತಾನೆ.

"ಆಕಾಶವು ಜಡನೆಂದರಿದವಂಗೆ ಮಂತ್ರದ ರೂಢಿ ಏತಕಯ್ಯ?" ಎನ್ನುತ್ತಾರೆ ಅಲ್ಲಮ ಪ್ರಭುದೇವರು. ದೇವರನ್ನು ಸ್ತುತಿಸಲಿಕ್ಕೆ, ಅಂತರಾತ್ಮವನ್ನು ಜಾಗೃತಿಸಲಿಕ್ಕೆ ಮಂತ್ರವು ಬೇಕೇ ಬೇಕು. ಆದರೆ ಅನೇಕರು ಮಂತ್ರ ಜಪವನ್ನು ಒಂದು ಯಾಂತ್ರಿಕ ಕ್ರಿಯೆಯನ್ನಾಗಿ ಮಾಡಿಕೊಳ್ಳುತ್ತಾರೆ.

1. ಆಚಾರವೇ ಇಲ್ಲದ ಅನಾಚಾರಿಗಳಾಗಿ ಮಂತ್ರದ ಭಜನೆಯನ್ನು ಯಾಂತ್ರಿಕವಾಗಿ ಮಾಡುತ್ತಾರೆ. ಮದ್ಯಪಾನ ಮಾಡಿ, ಭಂಗಿ, ಅಫೀಮು ಸೇದಿ ಅದೇ ಮತ್ತಿನಲ್ಲಿ ಮಂತ್ರದ ಭಜನೆ, ಜಪ ಮಾಡುತ್ತಾರೆ.

2. ಜ್ಞಾನವೂ ಇಲ್ಲದೆ ಯಾಂತ್ರಿಕವಾಗಿ ಮಂತ್ರ ಜಪ ಮಾಡುತ್ತಾರೆ. ಇದು ಕತ್ತಲೆಯಲ್ಲಿ ಕನ್ನಡಿಯನ್ನು ನೋಡಿದಂತೆ.

3. ದೇವರಲ್ಲಿ ಶ್ರದ್ಧೆ, ಶರಣಾಗತಿ, ಭಕ್ತಿ ಪರವಶತೆಯಿಲ್ಲದೆ ಮಂತ್ರ ಜಪ ಮಾಡುವರು. ಸಹಸ್ರ, ಲಕ್ಷ, ಕೋಟಿ ಬಿಲ್ವಾರ್ಚನೆ ಎಂದು ವಟವಟ ಮಂತ್ರ ಹೇಳಿ ಪತ್ರೆ, ಪುಷ್ಪಗಳನ್ನು ಎಸೆಯುವರು.

ಇಂತಹ ಯಾಂತ್ರಿಕ ಪೂಜೆಯಿಂದ ಏನೂ ಸಾಧಿಸಲು ಸಾಧ್ಯವಾಗದು ಎನ್ನುವ ಅಲ್ಲಮ ಪ್ರಭುದೇವರು ಈ ಪಂಚಭೂತಗಳೆಲ್ಲವೂ ಜಡ ಎಂದರಿದವನು ವಿಧಿಗೆ ಅಂಜುವುದಿಲ್ಲ, ಶರಣಾಗುವುದಿಲ್ಲ ಎನ್ನುತ್ತಾರೆ. ಕೆಲವರು ಮಾತೆತ್ತಿದರೆ, "ನಮ್ಮ ಗ್ರಹಚಾರ, ದುರಾದೃಷ್ಟ, ಕರ್ಮ, ಹಣೆ ಬರಹ" ಎಂದು ಶಪಿಸಿಕೊಳ್ಳುವುದುಂಟು. ಗುಹೇಶ್ವರನು ಅಂದರೆ ಸೃಷ್ಟಿಕರ್ತನಾದ ದೇವರು ಸರ್ವಶಕ್ತನು ಭಕ್ತ ರಕ್ಷಕ ಎಂದು ನಂಬಿದ ಮೇಲೆ ಆ ಕರ್ತನ ನಿಯಂತ್ರಣದಲ್ಲಿರುವ ವಿಧಿಗೆ ಭಕ್ತನು ಏಕೆ ಅಂಜಬೇಕು ? ದೇವನ ಅನುಗ್ರಹವು ಹಿಂದಿನ ಜನ್ಮದ ಕರ್ಮಗಳ ಫಲವಾದ ಹಣೆಯ ಬರಹವನ್ನೇ ತೊಡೆದು ಹಾಕುವುದೆಂಬ ಆತ್ಮವಿಶ್ವಾಸ ಶರಣರಲ್ಲಿ ಇರಬೇಕು.

ಬಹಿರಂಗದ ಕ್ಷೇತ್ರ ಯಾತ್ರೆ ಸಲ್ಲದು.

ಹಾಲು ಹಿಡಿದು ಬೆಣ್ಣೆಯನರಸಲುಂಟೆ?
ಲಿಂಗವ ಹಿಡಿದು ಪುಣ್ಯ ಕ್ಷೇತ್ರಕ್ಕೆ ಹೋಗಲುಂಟೆ?
ಲಿಂಗದ ಪಾದ ತೀರ್ಥ ಪ್ರಸಾದವ ಕೊಂಡು
ಅನ್ಯಬೋಧೆ ಅನ್ಯ ಶಾಸ್ತ್ರಕ್ಕೆ ಹಾರೈಸಲೇತಕೆ ?
ಇಷ್ಟಲಿಂಗವಿದ್ದಂತೆ ಸ್ಥಾವರ ಲಿಂಗಕ್ಕೆ ಶರಣೆಂದನಾದಡೆ
ತಡೆಯದೆ ಹುಟ್ಟಿಸುವನು ಶ್ವಾನನ ಗರ್ಭದಲ್ಲಿ
ಇದನರಿದು ಗುರುಕೊಟ್ಟ ಲಿಂಗದಲ್ಲಿಯೇ ಎಲ್ಲಾ ತೀರ್ಥಂಗಳು
ಎಲ್ಲಾ ಕ್ಷೇತ್ರಂಗಳು ಇಹವೆಂದು ಭಾವಿಸಿ ಮುಕ್ತರಪ್ಪುದಯ್ಯಾ
ಇಂತಲ್ಲದೆ ಗುರುಕೊಟ್ಟ ಲಿಂಗವ ಕಿರಿದು ಮಾಡಿ
ತೀರ್ಥಲಿಂಗವ ಹಿರಿದು ಮಾಡಿ ಹೋದಾತಂಗೆ
ಅಘೋರನರಕ ತಪ್ಪದು ಕಾಣಾ ಚೆನ್ನಮಲ್ಲಿಕಾರ್ಜುನಾ.

– ಜಗನ್ಮಾತಾ ಅಕ್ಕಮಹಾದೇವಿ

ಲಿಂಗಾಯತರು ಹಿಂದುಗಳಲ್ಲ

- ಎಂ.ಆರ್.ಪಂಪನಗೌಡ,
ಮುನಿರಾಬಾದ್

ಹಿಂದೂ ಧರ್ಮ - ಕಲ್ಯಾಣ ಕಿರಣ (ಫೆಬ್ರವರಿ ಸಂಚಿಕೆ)ದ ಲೇಖನಕ್ಕೆ ಪ್ರತಿಕ್ರಿಯೆ :

ಲೇಖನ ಓದಿದಾಗ ಶ್ರೀಯುತ ಎಲ್ಲಪ್ಪ ಅವರಿಗೆ ಹಿಂದೂ ಧರ್ಮದ ಮೇಲಿನ ಪ್ರೀತಿ ಹಾಗೂ ಕಾಳಜಿಯ ಬಗ್ಗೆ ಹೆಮ್ಮೆಯಾಯಿತು. ಆದರೆ ಅವರು ಸುತ್ತಿ ಬಳಸಿ ಹೇಳುವ ರೀತಿ ಯಾವ ಅಂಶವನ್ನು ಸಮರ್ಥಿಸುತ್ತಿದ್ದಾರೆ ಹಾಗೂ ಯಾವುದನ್ನು ತಿರಸ್ಕರಿಸುತ್ತಿದ್ದಾರೆ ಎನ್ನುವುದೇ ಗೊತ್ತಾಗಲಿಲ್ಲ. ನಾನೂ ಇವರಂತೆಯೇ ಹಿಂದೂ ಧರ್ಮ - ಸನಾತನ ಧರ್ಮದ ಬಗ್ಗೆ ಅತೀವ ಆಸಕ್ತಿ ಉಳ್ಳವನಾಗಿದ್ದು, ಸ್ವಾಮಿ ದಯಾನಂದ ಸರಸ್ವತಿಯವರ "ಸತ್ಯಾರ್ಥ ಪ್ರಕಾಶ"ವನ್ನು ಹಲವು ಬಾರಿ ಓದಿದ್ದೇನೆ. ಅದು ಎಲ್ಲಾ ಧರ್ಮಗಳ ವಿಮರ್ಶೆಯನ್ನು ಒಳಗೊಂಡಿದೆ. ಹಿಂದೂ ಧರ್ಮಕ್ಕೆ ವೇದ, ಉಪನಿಷತ್, ಭಗವದ್ಗೀತೆಗಳೇ ಆಧಾರವೆಂದರೂ ಅಪ್ಪ ಬಸವಣ್ಣನವರು ಅವುಗಳನ್ನೇ ಅನುಷ್ಠಾನಕ್ಕೆ ತಂದರಲ್ಲವೇ ಎಂದಿದ್ದಾರೆ. ಅದು ತಪ್ಪು.

ವೇದಗಳೆಂದರೆ 'ವೇದ್ಯ' - ಎಂದರೆ 'ತಿಳಿದದ್ದು' ಎಂದರ್ಥ. ಅವುಗಳನ್ನು ನಮ್ಮ ಋಷಿ ಮುನಿಗಳೇ ರಚಿಸಿದ್ದು. ಅವರಿಗೆ ತಿಳಿದ ವಿಷಯಗಳನ್ನು ಕ್ರೋಢೀಕರಿಸಿದ ಗ್ರಂಥಗಳಷ್ಟೇ ? ಅಪ್ಪ ಬಸವಣ್ಣನವರು ಒಂದೆಡೆ ಸ್ಪಷ್ಟವಾಗಿ ಹೇಳಿದ್ದಾರೆ. ವೇದಗಳ ಹಿಂದೆ ಹರಿಯದಿರು, ಆಗಮದ ಮೂಗ ಕೊಯ್ದೆ - ಎಂಬುದಾಗಿ. ಅಲ್ಲಿಯೂ ಕೆಲವು ದೋಷಗಳಿವೆ. ಇಸ್ಲಾಂ, ಕ್ರಿಶ್ಚಿಯನ್, ಸಿಖ್ - ಇತ್ಯಾದಿ ಧರ್ಮಗಳಲ್ಲಿ, ನಿರೀಶ್ವರವಾದಿಗಳಾದ ಬೌದ್ಧ, ಜೈನ ಚಾರ್ವಾಕರಲ್ಲಿ ಪೂಜೆ ಇಲ್ಲ. ದೇವರು ಇದ್ದಾನೆಂದ ಮೇಲೆ ಅವನನ್ನು ಕೇವಲ ಪ್ರಾರ್ಥಿಸಿದರೆ ಒಲಿಯುವುದಿಲ್ಲ. ಉದಾ: ಶ್ರೀಯುತ ಎಲ್ಲಪ್ಪನವರೆ ದೇವರೆಂದು ಭಾವಿಸಿ ದಿನಾಲೂ ಪ್ರಾರ್ಥಿಸಿ, ಭಜನೆ ಮಾಡಿ ಅವರೆದುರಿಗೆ ಅವರ ಗುಣಗಾನ ಮಾಡಿ ಎದ್ದು ಹೋದರೆ ಒಂದೆರಡು ದಿನ ಮಾತ್ರ ಶ್ರೀಯುತ ಎಲ್ಲಪ್ಪನವರು ಬದುಕಿದ್ದು ನಂತರ ಅನ್ನ ನೀರಿಲ್ಲದೆ ಸಾಯಬೇಕಾಗುತ್ತದೆ. ಅದಕ್ಕಾಗಿ ಅರ್ಚನೆಗಾಗಿ ನಿರಾಕಾರವಾದ ದೇವರ ಪ್ರತಿನಿಧಿಯಾಗಿ ಗುರು, ಲಿಂಗ, ಜಂಗಮ ತತ್ವಗಳನ್ನು ವಿಶ್ವಗುರು ಬಸವಣ್ಣನವರು ನೀಡಿದ್ದಾರೆ. ಒಬ್ಬ ವ್ಯಕ್ತಿ ಗುರುವೂ, ಜಂಗಮವೂ ಆಗಬಲ್ಲ. ಇವು ನಿರಾಕಾರ ದೇವನನ್ನು ಸಾಕಾರ ರೂಪದಲ್ಲಿ ಅರ್ಚಿಸುವ ವಿಧಾನವು. ಮರಕ್ಕೆ ಬಾಯಿ ಬೇರೆಂದು (ಬ.ವ.ದೀ - ವ.ಸಂ -421) ನೀರೆರೆದರೆ ಮೇಲೆ ಪಲ್ಲವಿಸುವ ಹಾಗೆ, ಲಿಂಗದ (ದೇವರ) ಮುಖ ಜಂಗಮವೆಂದು ಬಸವಣ್ಣನವರು ಹೇಳಿದ್ದಾರೆ. ಜಂಗಮದ ಅರ್ಥ ವಚನ ಸಾಹಿತ್ಯದಲ್ಲಿ ಬಹು ವ್ಯಾಪಕವಾದದ್ದು. ಅದನ್ನು ನಮ್ಮ ವೀರಶೈವ ವಾದಿಗಳು ಶಿವಯೋಗ ಮಂದಿರದ ಕೆಲ ಶಕ್ತಿಗಳು ಜಾತಿಯಾಗಿ ಮಾರ್ಪಡಿಸಿದವು. ಅದರ ವಿರುದ್ಧ ಸಿಡಿದೆದ್ದ ಪೂಜ್ಯ ಮಾತಾಜಿ ಹಾಗೂ ಬಸವ ಧರ್ಮ ಪೀಠವನ್ನು ಹಲವಾರು ಶ್ರೀಮಂತ ವೀರಶೈವವಾದಿ ಮಠಾಧಿಪತಿಗಳು ಟೀಕಿಸಿ ಇಲ್ಲ ಸಲ್ಲದ ಬೊಬ್ಬೆ ಹೊಡೆಯುತ್ತಾ ಚಿದಾನಂದ ಮೂರ್ತಿಗಳಂಥ 'ಆಗಮವಾದಿ ಲಿಂಗಾಯತ'ರನ್ನು ಮುಂದಿಟ್ಟುಕೊಂಡು, ಹಿಂದೂ ಧರ್ಮದ ಅಂಗ ಲಿಂಗಾಯತ ಧರ್ಮವೆಂದೂ ಸಾಧಿಸಲು ತಿಣುಕುತ್ತಿದ್ದಾರೆ. ಅದಕ್ಕೆ ತಕ್ಕಂತೆಯೇ ಇಸ್ಲಾಂ, ಕ್ರಿಶ್ಚಿಯನ್ ಮತಾಂಧತೆಯ ನೆರಳಿನಲ್ಲಿ ಬದುಕುತ್ತಿರುವ ಹಿಂದೂಗಳು ಖಂಡಿತವಾಗಿಯೂ ಲಿಂಗಾಯತರನ್ನು ಅಹಿಂದುಗಳೆನಿಸಿಕೊಳ್ಳಲು ನಡೆಸುವ ಪ್ರಯತ್ನಕ್ಕೆ ಕಲ್ಲು ಹಾಕುತ್ತಿದ್ದಾರೆ. ಆದರೆ ಇದೆಲ್ಲವೂ ಬಹಳ ದಿನ ನಡೆಯದು. ಏಕೆಂದರೆ ಇಸ್ಲಾಮ, ಕ್ರಿಶ್ಚಿಯನ್, ಬೌದ್ಧ ಇತ್ಯಾದಿ ಜಾಗತಿಕ ಧರ್ಮಗಳ ತೆಕ್ಕೆಗೆ ಹಿಂದುಗಳನ್ನು ಸೆಳೆಯಲು ಬಿಡದೆ ಕಾಪಾಡಿದ್ದು ಉತ್ತರ ಭಾರತದಲ್ಲಿ ಸಿಖ್ಖರು ಹಾಗೂ ದಕ್ಷಿಣದಲ್ಲಿ ಲಿಂಗಾಯತರು. ತಮ್ಮೆದುರೇ ತನ್ನ ಮಕ್ಕಳ ಕಣ್ಣು, ಕಿವಿ - ಚರ್ಮ ಸುಲಿದರೂ ಗುರುಗೋವಿಂದರು ಅನ್ಯ ಮತವನ್ನು ಒಪ್ಪಲಿಲ್ಲ. ಅದೇ ರೀತಿ ಇಸ್ಲಾಂನ ಜೈತ್ರ ಯಾತ್ರೆಗೆ ತಡೆಯೊಡ್ಡಿದ ವಿಜಯ ನಗರದ ಮೂಲಿಗರು ಸಂಗಮರು ಹಾಗೂ ಕಾಕತೀಯರು ಲಿಂಗಾಯತರೇ. ಅದೇ ರೀತಿ ಶೂದ್ರ, ಲಿಂಗಾಯತ - ಗೌಳಿಗನಾದ ಶಿವಾಜಿಯನ್ನು ಪಟ್ಟಾಭಿಷೇಕಕ್ಕೆ ತಡೆಯೊಡ್ಡಿ ಅವಮಾನ ಮಾಡಿದರೂ, ಹಿಂದೂ ಧರ್ಮದ ರಕ್ಷಕನಾಗಿ ಕೆಲಸ ಮಾಡಿದನು. ಇದನ್ನು ಉದಾಹರಿಸಲು ಕಾರಣವೇನೆಂದರೆ ಏಕದೇವ ಪ್ರಾರ್ಥಕರಿಗಿಂತ, ಪೂಜಕರಲ್ಲಿ ಶಕ್ತಿ ಬಹಳ. ಆದ್ದರಿಂದಲೇ ಶಿವಾಜಿಯ ನಂತರದ ಮರಾಠ ಸಾಮ್ರಾಜ್ಯವೂ ಸಂಗಮರ ನಂತರದ ವಿಜಯನಗರವೂ ವೈದಿಕ ಪರಂಪರೆಗೆ ಒತ್ತು ಕೊಟ್ಟಿದ್ದರಿಂದ ಅವನತಿಯ ಹಾದಿ ಹಿಡಿದವು. ಇಂದಿಗೂ ರೋಮನ್ ಕ್ಯಾಥೋಲಿಕ್ ವೆಬ್‌ಸೈಟೊಂದು ಭಾರತದಲ್ಲಿ ಕ್ರಿಶ್ಚಿಯನ್ ಧರ್ಮಕ್ಕೆ, ಪ್ರಚಾರಕ್ಕೆ ಲಿಂಗಾಯತ

ಧರ್ಮದಿಂದ, ವಚನ ಸಾಹಿತ್ಯದಿಂದ ಅಡ್ಡಿಯಾಗಿದೆ ಎಂದು ಹೇಳುತ್ತಿದೆ. ಎಷ್ಟಾದರೂ ಫ.ಗು.ಹಳಕಟ್ಟಿಯವರು ಕೊಟ್ಟ ವಚನ ಸಾಹಿತ್ಯವನ್ನು ಅವರು ಇಂಗ್ಲೀಷಿಗೆ ಮುದ್ರಿಸಲು ಒಪ್ಪದೆ ಇದ್ದುದು, ಭಾಷಾಂತರಿಸದಿರಲೂ ಇದೇ ಕಾರಣವಲ್ಲವೇ ?

ಇನ್ನು ಮುಖ್ಯ ವಿಷಯಕ್ಕೆ ಬರೋಣ. ಸಂವಿಧಾನದ ಪ್ರಕಾರ ಹಿಂದು ಧರ್ಮವೆಂಬುದೇ ಇಲ್ಲ. ರಾಷ್ಟ್ರೀಯ ಸ್ವಯಂ ಸೇವಕ ಸಂಘವನ್ನು ಅದೆಷ್ಟು ಬಾರಿ ನಿರ್ಬಂಧಿಸಲು ಯತ್ನಿಸಿದ ಕೇಂದ್ರ ಸರಕಾರ ಹಿಂದು ಧರ್ಮದ ವ್ಯಾಖ್ಯೆಯನ್ನು ಒಂದು ಸಾಂಸ್ಕೃತಿಕ ಚಳುವಳಿ, ಪರಂಪರೆ ಎಂದೂ, ಅದು ಧರ್ಮವಲ್ಲವೆಂದೂ ವಾದಿಸಿ ಆರ್.ಎಸ್.ಎಸ್. ಸುಪ್ರೀಂ ಕೋರ್ಟಿನಲ್ಲಿ ಜಯಶಾಲಿಯಾಗಿದೆ. ಅಲ್ಲದೆ ಹಿಂದೂ ಧರ್ಮದ ವ್ಯಾಖ್ಯೆಯನ್ನು ಪೂಜ್ಯ ಲಿಂಗೈಕ್ಯ ಜಗದ್ಗುರು ಲಿಂಗಾನಂದರೂ, ಪೂಜ್ಯ ಮಾತಾಜಿಯವರು ನೀಡಿದ ಹಾಗೆ ಯಾರೂ ನೀಡಿಲ್ಲ. ಇದನ್ನು ಆರ್.ಎಸ್.ಎಸ್. ಮುಖ್ಯಸ್ಥರಾದ ಹೊ.ವೆ.ಶೇಷಾದ್ರಿಯವರೇ ಒಪ್ಪಿದ್ದಾರೆ. ಲಿಂಗಾಯತ ಬಲಗೊಂಡರೆ ಹಿಂದೂಧರ್ಮಗಳೂ (ಬೌದ್ಧ, ಜೈನ, ಸಿಖ್, ವೀರಶೈವ, ರಾಮಕೃಷ್ಣ ಮಿಷನ್) ಇಸ್ಲಾಂ ಹಾಗೂ ಕ್ರಿಶ್ಚಿಯನ್ ಧರ್ಮಗಳೂ ಉದಾತ್ತೀಕರಣಗೊಳ್ಳುವವು. ಅದು ಹೇಗೆಂದರೆ ಲಿಂಗವು ಸಾಕಾರವೂ ಅಹುದು ಹಾಗೂ ಅದನ್ನು ಪೂಜಿಸಿದರೆ ಮೂರ್ತಿ ಪೂಜೆಯ ಲೋಪ ಬರದು. ಆದ್ದರಿಂದ ''ಏಕವೇವ ಪ್ರಾರ್ಥಕರೂ'' ಹಾಗೂ ನಿರೀಶ್ವರವಾದಿ ಧರ್ಮಗಳ ಅನುಯಾಯಿಗಳು ಮಾನಸಿಕ ನೆಮ್ಮದಿಗೆ, ಸಮತೋಲನಕ್ಕೆ, ಏಕಾಗ್ರತೆಗೆ ಸಾಧನವಾಗಿ ಬಳಸಬಹುದು. ಆದ್ದರಿಂದಲೇ ಜಾನಪದರು ಹಾಡುವ ಶಿವನೇ ಬಸವಾ, ಬಸವಾ ಶಿವನು ಎನ್ನುವ ಮಾತನ್ನು ಮುಂದುವರಿಸಿ ಬಸವನೇ ಕೊನೆಯ ಪ್ರವಾದಿ ಎನ್ನುವ ವಾಕ್ಯ ಬರುವ ದಿನಗಳು ದೂರವಿಲ್ಲ.

ವಿಶ್ವದ ಎಲ್ಲಾ ಧರ್ಮಗಳಿಗೆ, ನಾಗರಿಕತೆಗಳಿಗೆ, ಭಾಷೆಗಳಿಗೆ ಶಿವ ಹಾಗೂ ಆತನ ಪರಂಪರೆಯನ್ನು ಅನುಸರಿಸಿಕೊಂಡು ಬಂದ ಜನಾಂಗಗಳು, ಜಾತಿಯ ಮೂಲ. ಸಿಂಧೂ ನದೀ ತೀರದ ಆಚೆಗಿನ ಜನ ಅವರ ಭಾಷೆಗಳೂ ದ್ರಾವಿಡ ಮೂಲವೇ ಅಹುದು. ಕನ್ನಡದ ''ಭರಮ'' ಅರಬ್ಬರ ''ಅಬ್ರಹಾಂ'' ಆದ ಹಾಗೆ ಪರಸಾಪೆನ್ - ಫೆರೋನ್ ಶಕ್ತಿಶಾಲಿಯಾದ ರಾಜ, ದೇವ ಈಜಿಪ್ಟಿನ ಸಂಸ್ಕೃತಿಗೆ ಮೂಲಿಗನಾದ. ಇಂದಿಗೂ ಅಫಗಾನಿಸ್ಥಾನದ ಭಾಷೆ ಕನ್ನಡದ ವ್ಯಾಕರಣ ಹೋಲುತ್ತದೆ. ಅದರ ರಾಜಧಾನಿ ಕೋಂದಹರ - ಕೋಂದಾಹರ- ಕಂದಹಾರ ಆಗಿದೆ. ಅಂದರೆ ಈಶ್ವರನ ಮುಂದಿನ ಭಾಗದಲ್ಲಿ, ಎದುರಿಗೆ ಇರುವ ದೇವಸ್ಥಾನ ಎಂದು ಅರ್ಥ. ಇದೆ ತೆಲುಗರ ಕೊಂಡ ಆಗಿದೆ. ಹಾಗೆಯೇ ಜೈನರ ವೃಷಭದೇವ, ಸಿಖ್ಖರ ಅಕಾಲ ತಖ್ತ ಇರುವ ಹರಮಂದಿರ ಸಾಹೆಬ ಇವೆಲ್ಲವೂ ''ಶಿವ'' ನ ಐತಿಹಾಸಿಕತೆಯನ್ನೂ, ಪರಂಪರೆಯನ್ನೂ ಸಂಕೇತಿಸುತ್ತಿವೆ. ಆದ್ದರಿಂದಲೇ ಎಲ್ಲಾ ವಚನಕಾರರು ಶಿವನನ್ನು ಒಂದು ಪರಂಪರೆಯ ಮೂಲಿಗನಾಗಿ ಗೌರವಿಸಿದರೆ ದೇವರ ಕಲ್ಪನೆ ವ್ಯಾಖ್ಯಾನಕ್ಕೆ ಬಂದಾಗ ಕೇವಲ ಒಬ್ಬ ವ್ಯಕ್ತಿಯಾಗಿ ಆತನನ್ನು ಚಿತ್ರಿಸಿದ್ದಾರೆ. ಎಲ್ಲಾ ದೇವತೆಗಳಲ್ಲಿರುವ ದೌರ್ಬಲ್ಯವನ್ನೂ, ಸೀಮಿತತೆಯನ್ನೂ ಈತನಲ್ಲಿಯೂ ಗುರುತಿಸಿದ್ದಾರೆ. ವಚನ ಸಾಹಿತ್ಯವನ್ನು ಅರ್ಥೈಸಲು ಕೇವಲ ಧಾರ್ಮಿಕ ಭಾವನೆಯೊಂದೇ ಪೂರಕವಲ್ಲ. ಅದರ ಜೊತೆಗೆ ಪುರಾಣ, ಇತಿಹಾಸ, ಅರ್ಥಶಾಸ್ತ್ರ, ಬುಡಕಟ್ಟು ಜನಾಂಗೀಯ ಅಧ್ಯಯನವನ್ನೊಳಗೊಂಡ ಸಮಾಜಶಾಸ್ತ್ರ ಮುಖ್ಯವಾಗಿರಬೇಕು. ಪ್ರವಾದಿಗಳಾದ ಬುದ್ಧನ ಔದಾರ್ಯ, ಮಹಾವೀರನ ಅಹಿಂಸೆ, ಏಸುವಿನ ದಯೆ, ಮಹ್ಮದನ ಧೈರ್ಯ, ಸಿಖ್ಖರ ಧರ್ಮನಿಷ್ಠೆ ಇವೆಲ್ಲವುಗಳ ಸಂಗಮದಂತಿರುವ ಅಪ್ಪ ಬಸವಣ್ಣನವರ, ಸಮಕಾಲೀನರ ವಚನಗಳನ್ನು ಅಳವಡಿಸಿಕೊಂಡರೆ ಜಗತ್ತಿಗಷ್ಟೇ ಏಕೆ? ಬ್ರಹ್ಮಾಂಡದಲ್ಲಿರುವ ಅನ್ಯ ಗ್ರಹ ಜೀವಿಗಳಿಗೂ ಕಲ್ಯಾಣವಾಗುತ್ತದೆ.

ಸೃಷ್ಟಿಕರ್ತನ ಪೂಜೆ

ದೇಹವೆಂಬ ದೇಗುಲದೊಳಗೆ ಭಾವ ಸಿಂಹಾಸನವ ಮಾಡಿ
ಜೀವದೊಡೆಯನ ಪೂಜಿಸಬಲ್ಲಡೆ
ದೇವರಿಗೆ ದೇವರೆಂಬೆನಯ್ಯಾ ಅಖಂಡೇಶ್ವರ

- ಷಣ್ಮುಖ ಶಿವಯೋಗಿಗಳು

ಮುಂದಿನ ಸಂಚಿಕೆಯಲ್ಲಿ ವಿಮರ್ಶೆ: ಫೆಬ್ರವರಿ ಸಂಚಿಕೆಯಲ್ಲಿ ಮುದ್ರಣಗೊಂಡಿರುವ ಶ್ರೀ ಎಲ್ಲಪ್ಪನವರ ''ಹಿಂದೂ ಧರ್ಮ'' ಲೇಖನದ ಸಮಗ್ರ ವಿಮರ್ಶೆಯನ್ನು ಮುಂದಿನ ಅಂದರೆ ಏಪ್ರಿಲ್ ಸಂಚಿಕೆಯಲ್ಲಿ ಕೊಡಲಾಗುವುದು.

- ಮಾತಾಜಿ

1. ಅಡ್ಡ ಪಲ್ಲಕ್ಕಿ ಶೋಷಣೆಯ ಕುರುಹು
ರಂಭಾಪುರಿ ಶ್ರೀಗಳಿಗೆ ಉತ್ತರ

- ಮಾತಾಜಿ

ಪ್ರಜಾವಾಣಿ ಪತ್ರಿಕೆಯ ದಿ. 7-3-2008ರ ಸಂಚಿಕೆಯಲ್ಲಿ ರಂಭಾಪುರಿ ಶ್ರೀಗಳ ಕೆಲವು ಹೇಳಿಕೆಗಳು ಗದಗಿನಿಂದ ನೀಡಿದವು ಪ್ರಕಟವಾಗಿವೆ.

1. ಪಂಚ ಪೀಠಾಧೀಶರು ಅಡ್ಡಪಲ್ಲಕ್ಕಿ ಉತ್ಸವಗಳಲ್ಲಿ ಪಾಲ್ಗೊಳ್ಳುವುದು ಭಕ್ತರ ಇಚ್ಛೆಯೇ ಹೊರತು ಸ್ವಾಮಿಗಳ ಇಚ್ಛೆಯಲ್ಲ. ಕೆಲವು ವಿರಕ್ತ ಮಠಾಧೀಶರು ಅಡ್ಡ ಪಲ್ಲಕ್ಕಿ ಉತ್ಸವ ಭಕ್ತರ ಇಚ್ಛೆಯಲ್ಲ ಬದಲಿಗೆ, ಸ್ವಾಮಿಗಳು ಭಕ್ತರ ಮೇಲೆ ದಬ್ಬಾಳಿಕೆ, ದೌರ್ಜನ್ಯ ನಡೆಸುವ ಪ್ರಕ್ರಿಯೆ ಎಂದು ಅಪಪ್ರಚಾರ ಮಾಡುವುದು ಸರಿಯಲ್ಲ.

2. ಬಸವಣ್ಣನವರು ಒಬ್ಬ ಶ್ರೇಷ್ಠ ಸಮಾಜ ಸುಧಾರಕ, ಅವರು ವಚನಗಳಲ್ಲಿ ತಿಳಿಸಿದ ಅನೇಕ ವಿಷಯಗಳನ್ನು ಅನೇಕ ಪೀಠಾಧೀಶರು ಸಂಸ್ಕೃತದಲ್ಲಿಯೇ ಹೇಳಿದ್ದಾರೆ. ಅವರು ಸಂಸಾರಿಯಾಗಿದ್ದರಿಂದ ಗುರು ವರ್ಗದ ಪೀಠ ಪರಂಪರೆ ಅವರನ್ನು ಗುರು ಎಂದು ಒಪ್ಪಿಕೊಳ್ಳುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿಯುತ್ತ ತಾನು ಕುಡಿಯುವುದನ್ನು ಯಾರೂ ನೋಡುತ್ತಿಲ್ಲ ಎಂದುಕೊಂಡಂತೆ, ಆಧುನಿಕ ಶಿಕ್ಷಣ ಹೊಂದಿದ ಜಗತ್ತು ಪಂಚ ಪೀಠಾ(ಡಾ)ಧೀಶರ ಚಲನವಲನಗಳನ್ನು ಗಮನಿಸುತ್ತಿದೆ. ಕೆಲವು ಮೂಢ ಭ (ಭು)ಕ್ತರು ಪಲ್ಲಕ್ಕಿ ಹೊರುತ್ತಿರಬಹುದಾದರೂ ಬಹಳ ಜನಕ್ಕೆ ತಿರಸ್ಕಾರ ಹುಟ್ಟುತ್ತಿದೆ. ಕೆಲವಾರು ದಶಕಗಳ ಹಿಂದೆ ಹಲವಾರು ವಿರಕ್ತ ಮಠಾಧೀಶರು ಬೆಳ್ಳಿ ಬಂಗಾರದ ಸಿಂಹಾಸನವೇರಿ, ಬಂಗಾರದ ಕಿರೀಟ ಧರಿಸಿ, ಅಡ್ಡ ಪಲ್ಲಕ್ಕಿಯಲ್ಲಿ ಮೆರೆಯುತ್ತಿದ್ದರಾದರೂ ಸಮಾಜದ ಚಿಂತನೆಯಲ್ಲಿ ಆಗುತ್ತಿರುವ ಬದಲಾವಣೆ ಗಮನಿಸಿ ಒಬ್ಬೊಬ್ಬರೇ ಬಿಡುತ್ತ ಬಂದರು. ಪಂಚ ಪೀಠಾಧೀಶರು ಮಾತ್ರ ಶತಾಯಗತಾಯ ಹಠವನ್ನು ಸಾಧಿಸುತ್ತ ಹೊರಟಿದ್ದಾರೆ.

ಹಿಂದಿನ ಕಾಲದಲ್ಲಿ ಜನರು ಬಳಸುತ್ತಿದ್ದ ವಾಹನಗಳೆಂದರೆ ಎತ್ತಿನಗಾಡಿ, ಕುದುರೆ, ಎತ್ತು, ಮೇನೆ ಇತ್ಯಾದಿ. ಗುರುಗಳು, ಮಹಾತ್ಮರು ಬಂದಾಗ ದರ್ಶನವು ಲಭ್ಯವಾಗಲೆಂದು ಅಡ್ಡಪಲ್ಲಕ್ಕಿಯಲ್ಲಿ ಕೂರಿಸಿ ಭಕ್ತಿಯಿಂದ ತಾವೇ ಸ್ವತಃ ಭಕ್ತರು ಹೊರುತ್ತಿದ್ದರು. ಈಗಿನ ಉತ್ಸವ ಸಮಿತಿಯ ಭುಕ್ತರು (ಅಂದರೆ ತಿಂದು ಹಾಕುವವರು) ತಾವಂತೂ ಹೊರದೆ ಕೂಲಿಕೊಟ್ಟು ಹೊರಿಸುವರು, ಮೆರವಣಿಗೆ ಮಾಡಿಸಿಕೊಳ್ಳಲು ಜೀಪು, ವ್ಯಾನ್ ಟ್ರಾಕ್ಟರ್ ಇತ್ಯಾದಿ ಇರುವಾಗ ಮನುಷ್ಯರಿಂದ ಹೊರಿಸಿಕೊಳ್ಳುವ ಚಪಲವೇಕೆ? ಸತ್ತಾಗ ವ್ಯಕ್ತಿಗೆ ಹೊರಿಸಿಕೊಳ್ಳುವ ಹಕ್ಕು ಸ್ವಾಭಾವಿಕವಾಗಿ ಬರುತ್ತದೆ. ಜೀವಂತವಿರುವಾಗಲೇ ಸತ್ತವರಂತೆ ಹೊರಿಸಿಕೊಳ್ಳುವುದೇಕೆ? ಇದು ಅಮಾನವೀಯವಲ್ಲವೆ? ಮಾನವ ಧರ್ಮಕ್ಕೆ ಜಯವಾಗಲಿ ಎಂದು ಘೋಷಣೆ ಮಾಡುತ್ತಲೇ ಮಾನವರ ಹೆಗಲೇರಿ ಅವರು ಬೆವರು ಹರಿಸುವಂತೆ ಮಾಡುವುದು ಯಾವ ಮಾನವೀಯತೆ?

ಪಂಚ ಪೀಠಾಧೀಶರ ಬಣ್ಣ ಬಣ್ಣದ ರೇಷ್ಮೆಯ ಜರಿಯ ಪೀತಾಂಬರ ಧಾರಣೆ, ಹತ್ತೂ ಬೆರಳನ್ನು ಅಲಂಕರಿಸಿದ ಉಂಗುರಗಳು, ತಲೆಯ ಮೇಲಿನ ಬಂಗಾರದ ಕಿರೀಟಗಳು ಅವರಿಗೆ ನಾಚಿಕೆ ಹುಟ್ಟಿಸದಿದ್ದರೂ ಪ್ರಜ್ಞಾವಂತರಿಗೆ ನಾಚಿಕೆ ಹುಟ್ಟಿಸುತ್ತವೆ. ಉಷ್ಟ್ರ ಪಕ್ಷಿ ತನ್ನ ಶತ್ರುವಿನಿಂದ ತಪ್ಪಿಸಿಕೊಂಡೆ ಎಂದು ಮುಖವನ್ನು ಪೊದೆಯೊಳಗೆ ಹುದುಗಿಸಿಕೊಂಡು ಬೃಹತ್ ಶರೀರವನ್ನು ಹೊರಗೇ ಇಟ್ಟುಕೊಂಡಂತೆ ಈ ಪೀಠಾಧೀಶರು ಬದಲಾಗುತ್ತಿರುವ ಜಗತ್ತನ್ನು ಗಮನಿಸುತ್ತಿಲ್ಲ. ಇವರ ಇಂಥ ಜಡ ಭರತತ್ವಕ್ಕೆ ಮೊದಲ ಏಟು ಪಂಚಮಸಾಲಿ ಸಮಾಜದವರಿಂದ ಬಿದ್ದಿದೆ. ಈ ಪಂಚ ಪೀಠಾಧೀಶರು ಕಾಲಲ್ಲಿ ತೋರಿಸಿದ್ದನ್ನು ತಲೆಯ ಮೇಲೆ ಇಟ್ಟುಕೊಳ್ಳುತ್ತಿದ್ದ ಪಂಚಮಸಾಲಿ ಜನರು ಬಂಡಾಯದ ಕಹಳೆ ಊದಿದ ಕಾರಣವೇನು? ವಿರಕ್ತ ಪರಂಪರೆಯ ಚಿತ್ರದುರ್ಗದ ಮುರುಘಾಮಠದವರ ಕೃಪಾ ಪೋಷಿತರಾದ ಪೂಜ್ಯ ಶ್ರೀ ಜಗದ್ಗುರು ಜಯಮೃತ್ಯುಂಜಯ ಸ್ವಾಮಿಗಳು ಪಂಚಮಸಾಲಿ ಲಿಂಗಾಯತ ಜಗದ್ಗುರು ಪೀಠಾಧಿಕಾರಿಯಾಗಿ ಬಸವ ಪಥಿಕರಾಗಿ ಹೊರಟುದಲ್ಲದೆ ರುದ್ರಾಕ್ಷಿ ಮುಕುಟ ಧರಿಸಿ, ಶುದ್ಧ ಕಾವಿಯ ವಸ್ತ್ರದಲ್ಲಿ ಶೋಭಿಸಿದರು. ಧರ್ಮಗುರುವೆಂದು ಬಸವಣ್ಣನವರನ್ನು ಒಪ್ಪದ, ಪಂಚ ಪೀಠಾಧೀಶರೊಡನೆ ಪಂಚಮಸಾಲಿ ಸಮಾಜಕ್ಕೆ ವಿವಾಹ ವಿಚ್ಛೇದನ ಕೊಡಿಸಲು ಶತಾಯಗತಾಯ ಪ್ರಯತ್ನ ಮಾಡಿದ ಶ್ರೀ ಭಾವಿ ಬೆಟ್ಟಪ್ಪನವರ ಕೃಪಾಪೋಷಿತ ಸ್ಥಿರ ಮತ್ತು ಚರ ಜಗದ್ಗುರುಗಳು ಸಹ ಬಂಗಾರದ ಕಿರೀಟ, ಅಡ್ಡ ಪಲ್ಲಕ್ಕಿ ನಿಷೇಧಿಸಿದ್ದು, ಶುದ್ಧ ಕಾವಿ, ರುದ್ರಾಕ್ಷಿ ಮಾತ್ರ ಧರಿಸಿದ್ದು ಏನನ್ನು ಸ್ಪಷ್ಟಪಡಿಸುತ್ತದೆ? ಪಂಚ ಪೀಠಾಧೀಶರ ಅಡ್ಡ ಪಲ್ಲಕ್ಕಿ,

ಬಂಗಾರದ ಕಿರೀಟ, ಪಿತಾಂಬರ, ಉಂಗುರಗಳು ಆಗಲೇ ಪಂಚಮ ಸಾಲಿಯವರಿಗೆ ಸಹ ವಾಕರಿಕೆ ತರಿಸಿದ್ದವು ಎಂದು ಸ್ಪಷ್ಟ ಪಡಿಸುವುದಿಲ್ಲವೆ? ಇವೇ ಆದರ್ಶವಾಗಿದ್ದರೆ, ಭಕ್ತರಿಗೆ ಇಷ್ಟವಿದ್ದಿದ್ದರೆ ಶ್ರೀಮಂತ ಸಮಾಜವಾಗಿರುವ ಪಂಚಮಸಾಲಿಯವರು ತಮ್ಮ ನೂತನ ಜಗದ್ಗುರುಗಳಿಗೆ ಜರಿ ಸೀರೆ ಉಡಿಸುತ್ತಿರಲಿಲ್ಲವೆ?

ಭಕ್ತರ ಇಷ್ಟದಂತೆ ಅಡ್ಡಪಲ್ಲಕ್ಕಿ ನಡೆಯುತ್ತದಂತೆ! ಹೀಗೆಂದು ರಂಭಾಪುರಿ ಶ್ರೀಗಳ ಹೇಳಿಕೆ. ಭಕ್ತರು ದಾರಿ ತಪ್ಪಿದಾಗ ತಿದ್ದಬೇಕಾದುದು ಗುರುಗಳ ಕರ್ತವ್ಯ; ಭಕ್ತರು ಹೇಳಿದಂತೆ ಕೇಳುವುದಲ್ಲ. ಭಕ್ತರನ್ನು ತೃಪ್ತಿ ಪಡಿಸಲು ಗುರುಗಳು ಸಿದ್ಧರಾದರೆ ಅವರು ತಮ್ಮ ಸ್ವಾರ್ಥ ಸಾಧನೆಗಾಗಿ ಹೆಣ್ಣು, ಹೊನ್ನು, ಮಣ್ಣು ಮದಿರೆ - ಇವೆಲ್ಲವನ್ನೂ ಗುರುಗಳ ಮುಂದೆ ತಂದು ಹರಡಬಹುದು. ಈಗಾಗಲೇ ಲಿಂಗಾಯತ ಸಮಾಜ ಅಂಥ ಒಬ್ಬಿಬ್ಬರನ್ನು ಕಂಡು ಬಿಟ್ಟಿದೆ. ಕರ್ನಾಟಕ, ಆಂಧ್ರಗಳಲ್ಲಿ ಅತ್ಯಂತ ಪ್ರಭಾವಶಾಲಿಯಾದ ಒಂದು ವಿರಕ್ತ ಮಠ, ನೂರಾರು ಶಾಖಾ ಮಠಗಳನ್ನು ಹೊಂದಿದ್ದು ಕೆಟ್ಟ ಹೆಸರನ್ನು ಪಡೆದುದು ಮದಿರೆ, ಮಾನಿನಿಯ ಸೇವೆಗೆ ಸಿಕ್ಕ ಒಬ್ಬ ಸ್ವಾಮಿಗಳಿಂದ. ಅವರ ಅಭಿರುಚಿಯನ್ನು ಕೆಡಿಸಿದವರೂ ಭ(ಭು)ಕ್ತರೆ! ಆದ್ದರಿಂದ ಪಂಚ ಪೀಠಾಧೀಶರು ಭಕ್ತರಿಗಾಗಿ ತಮ್ಮ ಆದರ್ಶಗಳನ್ನು ಗಾಳಿಗೆ ತೂರಿಕೊಳ್ಳದೆ ಭಕ್ತರನ್ನು ಮೂಢಾವಸ್ಥೆಯಿಂದ ವೈಚಾರಿಕತೆಗೆ ತರುವ ಪ್ರಯತ್ನ ಮಾಡಿ, ತಾವು ಅಡ್ಡಪಲ್ಲಕ್ಕಿ- ಬಂಗಾರದ ಕಿರೀಟ -ಪಟ್ಟೆ ಪೀತಾಂಬರ -ಆಬರಣ ಧಾರಣೆ ಎಂಬ ನಾಲ್ಕು ಮೌಢ್ಯ ಆಡಂಬರಗಳನ್ನು ಬಿಡುವುದು ಒಳ್ಳೆಯದು. ಇಲ್ಲವಾದರೆ ಅವರೇ ಹೇಳಿರುವಂತೆ ಜನರು ಮಠಗಳಿಂದ ದೂರವಾಗುವರು.

ಪರ (ಬಸವ)ಚಿಂತೆ ನಿಮಗೇಕೆ ಅಯ್ಯಾ ?

ಗುರು ಬಸವಣ್ಣನವರು ಸಂಸಾರಿಗಳಂತೆ; ಆದ್ದರಿಂದ ಗುರು ವರ್ಗದವರು ಅವರನ್ನು ಗುರುವೆಂದು ಒಪ್ಪುವುದಿಲ್ಲವಂತೆ ! ಪಂಚ ಪೀಠಾಧೀಶರು ವೀರಶೈವ ಮತದವರು; ಲಿಂಗಾಯತ ಧರ್ಮ, ಇದರ ಧರ್ಮಗುರು ಮುಂತಾದುವುಗಳ ಬಗ್ಗೆ ಮಾತನಾಡುವ ಅಗತ್ಯವೇ ಇಲ್ಲ. ತಮ್ಮದೇನಿದೆಯೋ ಅದನ್ನು ಹೇಳಿಕೊಂಡರೆ ಸಾಕು. ಈ ಪಂಚಪೀಠಾಧೀಶರು ಧರ್ಮಗುರು ಬಸವಣ್ಣನವರನ್ನು ಗೌರವಿಸಿದರೆಷ್ಟು, ಬಿಟ್ಟರೆಷ್ಟು ಇವರ ಸರ್ಟಿಫಿಕೇಟ್ ಗುರು ಬಸವಣ್ಣನವರಿಗೆ ಬೇಕಾಗಿಲ್ಲ. ಭಾರತ ಸರ್ಕಾರ ನಾಣ್ಯ ಮುದ್ರಿಸಿತು; ಅಂಚೆ ಚೀಟಿಗಳಾದವು, ಅಂತರರಾಷ್ಟ್ರೀಯ ಜರ್ಮನ್ ಸಂಸ್ಥೆಯೊಂದು ಬಸವಣ್ಣನವರ ಚಿನ್ನದ ನಾಣ್ಯವನ್ನು ಬಿಡುಗಡೆ ಮಾಡಿದೆ. ಕರ್ನಾಟಕ ಸರ್ಕಾರ, ಮಹಾರಾಷ್ಟ್ರ ಸರ್ಕಾರಗಳು ಸರ್ಕಾರದ ವತಿಯಿಂದಲೇ ಬಸವ ಜಯಂತಿ ಆಚರಿಸುತ್ತಿವೆ; ಕರ್ನಾಟಕ ಸರ್ಕಾರವು ಬಸವ ಪ್ರಶಸ್ತಿಯನ್ನು ನೀಡುತ್ತಲಿದೆ. ಇದರಿಂದ ರಂಭೆಯ ಪುರದ ಜಗದ್ಗುರುಗಳಿಗೆ ಅದೆಷ್ಟು ಹೊಟ್ಟೆ ಉರಿಯೊ !!

ಜಗನ್ಮಾತಾ ಅಕ್ಕಮಹಾದೇವಿಯವರು ಹೀಗೆ ಹೇಳುತ್ತಾರೆ :

ಗೂಗೆ ಕಣ್ಣ ಕಾಣಲರಿಯದೆ ರವಿಯ ಬೈಯ್ವುದು
ಕಾಗೆ ಕಣ್ಣ ಕಾಣಲರಿಯದೆ ಶಶಿಯ ಬೈಯ್ದುದು.

ವಿಶ್ವಗುರು ಬಸವಣ್ಣನವರೆಂಬ ರವಿಯ ವ್ಯಕ್ತಿತ್ವದ ಆಳ ಅಗಲಗಳನ್ನು ಅರಿಯದ ರಂಭೆಯ ಪುರದ ಜಗದ್ಗುರುಗಳ ಕ್ಷುಲ್ಲಕ ದೃಷ್ಟಿಗೆ ಧರ್ಮಪಿತರ ಔನ್ನತ್ಯ ಹೇಗೆ ತಿಳಿಯಲು ಸಾಧ್ಯ ? ಅವರು ಲೋಕದ ವ್ಯವಹಾರದಂತೆ ಗೃಹಸ್ಥರು ಆದರೆ ಸಂಸಾರಿಯಲ್ಲ; ಶ್ರೀಮಂತ ಮಹಿಳೆಯರನ್ನು ಮೀರಿಸುವ ಬಂಗಾರದ, ಪೀತಾಂಬರದ ಮೋಹ ಹೊಂದಿರುವ ಪಂಚ ಪೀಠಾಧೀಶರು ಲೋಕದ ಕಣ್ಣಿಗೆ ಗೃಹಸ್ಥರಿರಲಿಕ್ಕಿಲ್ಲ, ಆಡಂಬರದ ಪ್ರತಿರೂಪವಾಗಿರುವ ಸಂಸಾರಿಗಳು. ಸಂಸಾರ ಎಂದರೆ ನಾನು, ನನ್ನದು, ನನ್ನಿಂದ, ನನಗೆ, ನನಗಾಗಿ ಎಂಬ ವ್ಯಾಮೋಹ ಹೊಂದಿರುವುದು. ವಿರಕ್ತ ಸಾಮ್ರಾಟ ಅಲ್ಲಮ ಪ್ರಭು ದೇವರ ವಚನ ನೋಡಿರಿ.

ಕುಲದೊಳಗೆ ಹುಟ್ಟಿ ಕುಲವ ಬೆರೆಸದೆ
ತನ್ನ ನಿಲವ ಬಲಿದಿಪ್ಪವರು ಇನ್ನಾರು ಹೇಳಾ ನೀವಲ್ಲದೆ?
ಹಬ್ಬಿದ ಮೂರು ಬೆಟ್ಟಕ್ಕೆ ತನ್ನ ಮನವ ಹಬ್ಬಲೀಯದೆ
ಗುರು ಲಿಂಗ ಜಂಗಮಕ್ಕೆ ಸವೆಸಿ ಸ್ವಯಂಲಿಂಗವಾದವರು ಇನ್ನಾರು ?

ಈ ವಚನದಲ್ಲಿ ಹೇಳಿದ್ದಾರೆ, "ಬ್ರಾಹ್ಮಣ ಕುಲದಲ್ಲಿ ಹುಟ್ಟಿದರೂ ಸಹ ಕುಲಮದ ಹೊಂದದೆ, ಅದರಲ್ಲಿ ಬೆರೆಸದೆ ತನ್ನ ವ್ಯಕ್ತಿತ್ವವನ್ನು ವಿಶೇಷವಾಗಿ ಬೆಳೆಸಿಕೊಂಡವರು ಬಸವಣ್ಣನವರು. ಹೆಣ್ಣು -ಹೊನ್ನು -ಮಣ್ಣು ಎಂಬ ಮೂರು ಬೆಟ್ಟಗಳಿಗೆ ತಮ್ಮ ಮನಸ್ಸನ್ನು ಹಬ್ಬಿಸದೆ, ತನು ಮನ ಧನಗಳನ್ನು ಗುರು

ಲಿಂಗ ಜಂಗಮಕ್ಕೆ ಸಲ್ಲಿಸಿದ ನಿರ್ವಿಕಾರ, ನಿಸ್ವಾರ್ಥಿಗಳು ಧರ್ಮಪಿತ ಬಸವಣ್ಣನವರು.

ರಂಭೆಯ ಪುರದ ಜಗದ್ಗುರುಗಳು ತಮ್ಮ (ಜಂಗಮ) ಜಾತಿಯ ಅಭಿಮಾನದಿಂದ ಪ್ರಧಾನಿ ವಾಜಪೇಯಿಗೆ ಮನವಿ ಸಲ್ಲಿಸಿ ಅಯ್ಯನವರಿಗೆ ವಿಶೇಷ ಮೀಸಲಾತಿಗೆ ಬೇಡಿಕೆ ಸಲ್ಲಿಸಿದರು. ಜೋ ಕುಚ್ ಹುವಾ ಅಚ್ಛಾ ಕೆಲಿಯೆ ಹುವಾ ಎಂಬಂತೆ ಇದೇ ನಡವಳಿಕೆಯು ಪಂಚಮಸಾಲಿ ಜನರ ಕಣ್ತೆರೆಸಿತು. ಇಷ್ಟು ದಿನ ಪಲ್ಲಕ್ಕಿ ಹೊತ್ತು ಹೆಗಲು ನೋಯಿಸಿಕೊಂಡುದು ವ್ಯರ್ಥವಾಯಿತೆಂಬ ಅರಿವು ಅವರಲ್ಲಿ ಮೂಡಿತು. "ತಾಯ ಮಾರಿ ತೊತ್ತು ಕೊಂಡಂತೆ" ಗುರು ಬಸವಣ್ಣನವರನ್ನು ಬಿಟ್ಟು ಪಂಚ ಪೀಠಾಧೀಶರನ್ನು ಹಿಡಿದುಕೊಂಡುದಕ್ಕೆ ಪಶ್ಚಾತ್ತಾಪವಾಗಿ ಕೂಡಲ ಸಂಗಮದಲ್ಲಿ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠಕ್ಕೆ ನಾಂದಿ ಹಾಡಿತು. ಕುಲದ ಮೋಹವಳಿಯದ ಪಂಚಪೀಠಾಧೀಶರಿಗೆ ವಿಶ್ವವಿಭೂತಿ ಬಸವಣ್ಣನವರನ್ನು ಅಳೆಯುವುದಿರಲಿ ಅರಿಯುವ ಸಾಮರ್ಥ್ಯವಾದರೂ ಇದೆಯೆ?

ಅಲ್ಲಮ ಪ್ರಭುದೇವರ ಇನ್ನೊಂದು ವಚನ ಹೀಗಿದೆ:

ಸತಿಯ ಕಂಡು ವ್ರತಿಯಾದ ಬಸವಣ್ಣ
ವ್ರತಿಯಾಗಿ ಬ್ರಹ್ಮಚಾರಿಯಾದ ಬಸವಣ್ಣ
ಬ್ರಹ್ಮಚಾರಿಯಾಗಿ ಭವಗೆಟ್ಟ ಬಸವಣ್ಣ
ಗುಹೇಶ್ವರ ಲಿಂಗದಲ್ಲಿ ಬ್ರಹ್ಮಚಾರಿ ಬಸವಣ್ಣನೊಬ್ಬನೆ।

ಪೃಥ್ವಿಗೆ ಅಗ್ಗಳ ಚೆಲುವೆಯಾದ ನೀಲಲೋಚನೆಯಂತಹ ಅಪೂರ್ವ ಸುಂದರಿಯನ್ನು ಪತ್ನಿಯನ್ನಾಗಿ ಹೊಂದಿದ್ದರೂ ಬಸವಣ್ಣನವರು ಶರಣ ಸ್ಥಲಕ್ಕೆ ಬರುತ್ತಲೇ ವೈರಾಗ್ಯದ ವ್ರತ ತೊಟ್ಟರು. ಪತ್ನಿಯನ್ನು ತಾಯಿಯ ಸ್ವರೂಪದಲ್ಲಿ ಕಂಡರು.

ಮಡದಿ ಎನ್ನಲಾಗದು ಬಸವಂಗೆ ಎನ್ನನು
ಪುರುಷ ಎನ್ನಲಾಗದು ಬಸವಣ್ಣನ ಎನಗೆ
ಉಭಯ ಕುಳವ ಹರಿದು ಬಸವಂಗೆ ಶಿಶುವಾನಾದೆನು
ಬಸವಣ್ಣ ಎನ್ನ ಶಿಶುವಾದನು

ಅಲ್ಲಮ ಪ್ರಭುದೇವರು ಹೇಳಿದ ಮಾತನ್ನು ಸ್ವತಃ ತಾಯಿ ನೀಲಾಂಬಿಕೆಯವರೇ ದೃಢಪಡಿಸಿ ತಮ್ಮಿಬ್ಬರದು ತಾಯಿ ಮಗನ, ತಂದೆ ಮಗಳ ಸಂಬಂಧ. ಸ್ತ್ರೀ -ಪುರುಷ ಭಾವವನ್ನು ತೊರೆದು ವೈರಾಗ್ಯಭಾವ ತಳೆದಿರುವುದನ್ನು ಖಾತ್ರಿಪಡಿಸುತ್ತಾರೆ. ಸಾಮಾನ್ಯವಾಗಿ ಸನ್ಯಾಸಿಗಳಿಗೆ ತಾವು ವೈರಾಗ್ಯ ಮೂರ್ತಿಗಳು, ಗೃಹಸ್ಥರು ಕೀಳು ಎಂಬ ಹಮ್ಮು ಜಾಸ್ತಿ. ವಿರಕ್ತ ಚಕ್ರವರ್ತಿಗಳಾದ ಅಲ್ಲಮ ಪ್ರಭುದೇವರು, ಸಿದ್ಧರಾಮೇಶ್ವರ, ಅಕ್ಕಮಹಾದೇವಿಯಂಥವರೇ ಗುರು ಬಸವಣ್ಣನವರ ನಿಲುವನ್ನು ಕೊಂಡಾಡಿ,

ಮಹಾಮಹಿಮ ಸಂಗನ ಬಸವಣ್ಣನು
ಎನಗೆಯೂ ಗುರು ನಿನಗೆಯೂ ಗುರು
ಜಗಕ್ಕೆಲ್ಲಕ್ಕೆಯೂ ಗುರು ಕಾಣಾ ಗುಹೇಶ್ವರ

ಎಂದು ಕೊಂಡಾಡಿರುವಾಗ ರಂಭಾಪುರಿಯ ಈ ಕೀಳು ಮನಸ್ಸಿನ ಗುರುಗಳಿಂದ ಧರ್ಮಪಿತ ಬಸವಣ್ಣನವರಿಗೆ ಗುರುತ್ವದ ಸರ್ಟಿಫಿಕೇಟ್ ಅಗತ್ಯವಿದೆಯೆ? ಪಂಚಪೀಠಾಧೀಶರಿಗೂ ಮತ್ತು ಅವರ ಅಭಿಮಾನಿಗಳಿಗೂ ನಮ್ಮ ಶರಣರಿಗೂ ಯಾವುದೇ ಭಾವನಾತ್ಮಕ ಸಂಬಂಧವಿಲ್ಲ. ಆದ್ದರಿಂದ ಇವರು ಶರಣರ ಹೊಗಳಿಕೆ, ತೆಗಳಿಕೆ ಎರಡನ್ನೂ ಬಿಟ್ಟು ತೆಪ್ಪಗೆ ಇರಲಿ.

ಬಸವಾದಿ ಶರಣರು ಹೇಳಿದ ವಿಚಾರಗಳನ್ನೆಲ್ಲ ಹಿಂದಿನ ಪೀಠಾಧೀಶರು ಸಂಸ್ಕೃತದಲ್ಲಿ ಹೇಳಿದ್ದಾರೆಂದು ಶ್ರೀಗಳು ನುಡಿದಿದ್ದಾರೆ. ಕಾಲ್ಪನಿಕ ಆದಿ ಪಂಚಾಚಾರ್ಯರು ಬರೆದ ಸಾಹಿತ್ಯವೇ ಇಲ್ಲ, ಸಾಹಿತ್ಯವೇ ಇಲ್ಲದಾಗ ಸಂದೇಶವು ಎಲ್ಲಿರಲು ಸಾಧ್ಯ? 12ನೆಯ ಶತಮಾನದ ಶರಣರ ಕೆಲವು ವಿಚಾರ ಇಡೀ ಭಾರತದಲ್ಲಿಯೇ ಪ್ರಪ್ರಥಮ (ಉದಾ: ಸಮಾನತೆ, ಏಕದೇವೋಪಾಸನೆ) ಮತ್ತೆ ಕೆಲವು ಇಡೀ ವಿಶ್ವದಲ್ಲಿಯೇ ಪ್ರಪ್ರಥಮ (ಸ್ತ್ರೀ ಸಮಾನತೆ, ಸಮಾಜವಾದ) ಎಂದು ಜಗತ್ತೇ ಒಕ್ಕೊರಲಿನಿಂದ ನುಡಿಯುವಾಗ ರಂಭೆಯ ಪುರದ ಶ್ರೀಗಳ ಬೊಗಳೆ ಮಾತಿಗೆ ಬೆಲೆ ಬರುವುದಾದರೂ ಹೇಗೆ? ★

ಹಿರಿದು ಕರ್ಮವ ಮಾಡಿ ಹರಿವ ನೀರೊಳು ಮುಳುಗೆ
ಕರಗುವುದೆ ಪಾಪ? ತಾ ಮುನ್ನ ಮಾಡಿದ್ದು
ಎರೆಯ ಕಲ್ಲಂತೆ ಸರ್ವಜ್ಞ ॥

2. ಪಂಚಮಸಾಲಿ ಗುರುಪೀಠ ಸ್ಥಾಪನೆ

- ಮಾತಾಜಿ

ಲಿಂಗಾಯತ ಸಮಾಜದಲ್ಲಿ ಪರಸ್ಪರ ಒಳಪಂಗಡಗಳ ಭೇದ ಮಾಡುವ ಆಚರಣೆಯಿದ್ದರೂ ಪ್ರತ್ಯೇಕ ಸಂಘಟನೆಗಳನ್ನು ಹುಟ್ಟು ಹಾಕುವ ಹವ್ಯಾಸವಿರಲಿಲ್ಲ. ಸಾಂಪ್ರದಾಯಿಕವಾಗಿ ಜಂಗಮರು (ಅಯ್ಯನವರು), ಬಣಜಿಗರು ಮತ್ತು ಪಂಚಾಚಾರದವರು ಬೃಹತ್ ಮಠಗಳ ಪರಮ ಭಕ್ತರಾಗಿದ್ದರು. ಉಳಿದಂತೆ ಎಲ್ಲರೂ ಗುರು ಮಠಗಳಲ್ಲಿ ಭಕ್ತಿಯನ್ನು ಇಟ್ಟುಕೊಂಡಿದ್ದರು. ಸಾಂಪ್ರದಾಯಿಕ ಹಿಂದು ಸಮಾಜದಲ್ಲಿ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ದ್ವಿಜ ಶ್ರೇಷ್ಠರೆನಿಸಿಕೊಂಡಂತೆ ಈ ಮೇಲಿನ ಮೂರು ಲಿಂಗಾಯತ ಒಳಪಂಡಗಳವರು ತಾವೇ ಶ್ರೇಷ್ಠರೆಂಬ ಭಾವದಿಂದ ಉಳಿದ ಲಿಂಗಾಯತರೊಡನೆ ವರ್ತಿಸಲು ತೊಡಗಿದ್ದರಿಂದ ನಾವೇಕೆ ಕೀಳು? ಎಂಬ 'ನೋವು' ಹೊಂದಿ ಉಳಿದ ಒಳಜಾತಿಗಳವರು ಸಂಘಟನೆಗಳನ್ನು ಆರಂಭಿಸಿಕೊಂಡರು. ಸಜ್ಜನ (ಗಾಣಿಗ) ರು, ಸಾದರು, ನೊಳಂಬರು, ಕುರುಹಿನ ಶೆಟ್ಟಿ, ರೆಡ್ಡಿ ಲಿಂಗಾಯತರು ಇತ್ಯಾದಿ ಇತ್ಯಾದಿ. ಗಾಯಕ್ಕೆ ಉಪ್ಪು ಎರಚಿದಂತೆ ಪಂಚ ಪೀಠದ ಮಠಗಳವರು ಲಿಂಗಾಯತ ಸಮಾಜವನ್ನು ಚತುರ್ವರ್ಣಗಳ ಆಧಾರದ ಮೇಲೆ ವರ್ಗೀಕರಿಸಿ ಪಟ್ಟಿ ಮಾಡಿದರು. ಈವರೆಗೂ ಸಂಘಗಳನ್ನು ಮಾಡುತ್ತಿದ್ದ ವಿವಿಧ ಒಳಪಂಗಡಗಳವರು ಈಗ ತಮಗಾಗಿ ಗುರು ಪೀಠಗಳನ್ನು ಮಾಡಿಕೊಳ್ಳಲಾರಂಭಿಸಿದರು ಉದಾ : ಸಾದರು, ನೊಳಂಬರು, ಕುರುಹಿನ ಶೆಟ್ಟರು, ಪಟ್ಟಸಾಲಿ ಇತ್ಯಾದಿ. ಒಬ್ಬರಾದ ಮೇಲೆ ಒಬ್ಬರು ಗುರುಪೀಠ ಮಾಡಿಕೊಳ್ಳಲಾರಂಭಿಸಿದ ಮೇಲೆ ಪಂಚಮಸಾಲಿ ಅವರಿಗೆ ಉತ್ಸಾಹ ಚಿಮ್ಮಿತು. ಗುರುವಿನ ಮುಖ್ಯ ಅರ್ಹತೆ ಎಂದರೆ ತನ್ನ ಜಾತಿಯ, ಕುಲದ, ಪೂರ್ವಾಶ್ರಮದ ಮಮಕಾರ (ಮೇಲ್ಜಾತಿಯವರಾಗಿದ್ದರೆ ಕುಲಮದ) ಹರಿದೊಗೆಯುವುದು. ಆದರೆ ಈಗೆಲ್ಲ ತಿರುಗಾಮುರುಗಾ. ಮೊದಲು ಕುಡುಕರು ಕದ್ದು ಮುಚ್ಚಿ ಅಂಜಿ ಕುಡಿಯುತ್ತಿದ್ದರು. ಈಗ ಕುಡಿಯದೆ ಇರುವವ ನಾಲಾಯಕ್. ಗೂಂಡಾಗಳು ಸಮಾಜದಲ್ಲಿ ತಿರಸ್ಕೃತರಾಗಿದ್ದರು. ಈಗ ಅವರು ರಾಜಕಾರಣಿಗಳೆಂಬ ಬಿಳಿಯಾನೆಗಳ ಕೋಳಿ ಕಾವಿನಲ್ಲಿ ಆಶ್ರಯ ಪಡೆದು 'ಅಗತ್ಯ' ಬಿದ್ದಾಗ ಬಳಕೆಯಾಗುತ್ತಾರೆ. ಇನ್ನೂ ಮುಂಬರುವ ವರ್ಷಗಳಲ್ಲಿ ಅವರೇ ನೇರವಾಗಿ ಚುನಾವಣೆಗೆ ಇಳಿಯುತ್ತಾರೆ. ಅಧಿಕಾರದ ಚುಕ್ಕಾಣಿ ಹಿಡಿಯುತ್ತಾರೆ. ಹಾಗೆ ಗುರುವಿನ ಲಕ್ಷಣ ಹೇಳುವಾಗ ಜಂಗಮನಿಗೆ ಜಾತಿಕುಲಗೋತ್ರಗಳ ಹಂಗಿಲ್ಲ ಎನ್ನುವ ವಚನ ಶಾಸ್ತ್ರೀಯ ಸೂತ್ರ ಪಲಾಯನಗೈದು ''ಜಂಗಮನು ಇಂಥ ಜಾತಿಯವನು'' ಎಂದು ವ್ಯಾಖ್ಯಾನಿಸುವಂತಿವೆ ಈ ಜಾತಿ ಆಧಾರಿತ ಪೀಠಗಳು. ಇವರ ಆಹ್ವಾನ ಪತ್ರಿಕೆಯ ಮೇಲೆ ಭಾವೈಕ್ಯತೆಯ, ಸಹ ಬಾಳ್ವೆಯ ಸಂದೇಶ! ಪಂಚಾಚಾರ್ಯರು ಮಾನವ ಧರ್ಮಕ್ಕೆ ಜಯವಾಗಲಿ ಎಂಬ ಘೋಷಣೆಯನ್ನು - ಮಾನವರ ಹೆಗಲ ಮೇಲೆ ಮಣ (ಹೆಣ) ಭಾರದ ಅಡ್ಡಪಲ್ಲಕ್ಕಿಯಲ್ಲಿ ಕುಳಿತು ಮಾಡುವಂತೆ ಜಾತಿ ಪೀಠಗಳ ಅಧ್ವರ್ಯುಗಳು ಸಹಬಾಳ್ವೆಯ ಸಂದೇಶ ಸಾರುತ್ತಾರೆ. ಇದೇ ಉದ್ದೇಶವಾಗಿದ್ದರೆ ಅಖಂಡ ಸಮಾಜದಿಂದ ಪ್ರತ್ಯೇಕಗೊಳ್ಳುವ ಅವಶ್ಯಕತೆ ಏನಿತ್ತು?

ಕೆಲವೇ ದಶಕಗಳ ಹಿಂದೆ ಪಂಚಮಸಾಲಿಯವರು ಪಂಚಪೀಠಾಧೀಶರ ಬೆನ್ನು ಹತ್ತಿದರು. ಯಾವ ಸಮ್ಮೋಹಿನಿ ವಿದ್ಯೆಯನ್ನು ಪ್ರಯೋಗಿಸಿದರೋ?! ಸದಾಚಾರದವರು (ಸಾದರು) ಸಿರಿಗೆರೆ ಪೀಠಕ್ಕೆ ನಡೆದುಕೊಳ್ಳುವಂತೆ, ನೊಳಂಬರು ತಮ್ಮ ಜಾತಿಯ ಗುರುಪೀಠಗಳನ್ನು ಅವಲಂಬಿಸಿದಂತೆ ಪಂಚಾಚಾರದವರು ಪಂಚಪೀಠಾಧೀಶರಿಗೆ ನಡೆದುಕೊಳ್ಳಬೇಕು ಎಂಬ ಸೂತ್ರವನ್ನು ಪಂಚಪೀಠಾಧೀಶರು ಬಿತ್ತಿದರು. ಇದು ಪಾದರಸದಂತೆ ಚುರುಕಾಗಿ ಕೆಲಸ ಮಾಡಿತು. ಯಾಂತ್ರಿಕವಾಗಿ ಬಾಯಿಪಾಠ ಮಾಡಿ, ನೀವು ಯಾರು? (ಯಾವ ಪಂಗಡದವರು) ಎಂದು ಯಾರಾದರೂ ಪ್ರಶ್ನಿಸಿದರೆ, ಕೆಲವರು, ನಾವು ಪಂಚಪೀಠದವರು ಎಂದು ಹೇಳತೊಡಗಿದರು. ನಾನು ಬರೆದ ಲಿಂಗಾಯತರು ಹಿಂದುಗಳಲ್ಲ ಎಂಬ ಪುಸ್ತಕದಲ್ಲಿ ಬಹಳ ಹಿಂದಿನ ಜನಗಣತಿಯ ದಾಖಲೆ ಸಂಗ್ರಹಿಸಲಾಗಿದೆಯಷ್ಟೆ. ಅದರಲ್ಲಿ ಪಂಚಮಸಾಲಿ ಎಂದು ಮುಂಬೈ ಪ್ರಾಂತ್ಯದಲ್ಲಿ, ಪಂಚಾಚಾರದವರು ಎಂದು ಮೈಸೂರು ಪ್ರಾಂತ್ಯದಲ್ಲಿದೆ. ಒಬ್ಬ ಬ್ರಿಟಿಷ್ ಅಧಿಕಾರಿ ಬರೆದ ವರದಿಯಲ್ಲಿ ಲಿಂಗಾಯತ ಧರ್ಮವು ಸಂಸ್ಥಾಪಕ ಗುರು ಬಸವಣ್ಣನವರ ನಂತರ ಕೇವಲ 60 ವರ್ಷಗಳಲ್ಲಿ ಬಾಳೇ ಹೊನ್ನೂರಿನ ವರೆಗೂ ಹಬ್ಬಿತು ಎಂದು ಬರೆಯಲಾಗಿದೆ.

ಲಿಂಗಾಯತ ಧರ್ಮಕ್ಕೆ ವಿವಿಧ ಮೂಲಗಳಿಂದ ವಿವಿಧ ಜನಾಂಗಗಳವರು ಸೇರ್ಪಡೆಯಾದಂತೆ, ಶೈವಬ್ರಾಹ್ಮಣ ಮೂಲದಿಂದ ಸೇರ್ಪಡೆಯಾದ ಅನೇಕರು ಲಿಂಗಾಯತ ಧರ್ಮದ ಶುಚಿತ್ವವನ್ನು ಕೆಡಿಸುತ್ತ ಬಂದರು. ಇದು ವ್ಯಾಪಕಗೊಂಡುದು 20ನೆಯ ಶತಮಾನದ ಆದಿ ಭಾಗದಲ್ಲಿ, ಪಂಚಪೀಠಾಧೀಶರಿಂದ. ಇತಿಹಾಸ ಕೆಡಿಸಿದರು, ಶರಣ ಸಂಸ್ಕೃತಿಯನ್ನು ನಾಶ ಮಾಡಿದರು. ಕೃತಕ ಉಪಗ್ರಹಗಳನ್ನು ಹಾರಿ ಬಿಡುವಂತೆ ಆದಿ ಪಂಚಾಚಾರ್ಯರ ಕಲ್ಪನೆಯನ್ನು ತೂರಿ ಬಿಟ್ಟರು. ಈ ಬೆಂಕಿಗೆ ಗಾಳಿ ಬೀಸಿದವರು ಹಾನಗಲ್

ಕುಮಾರ ಸ್ವಾಮಿಗಳು, ಅಖಿಲ ಭಾರತ ವೀರಶೈವ ಮಹಾಸಭಾ/ಮತ್ತು ಶಿವಯೋಗ ಮಂದಿರಗಳ ಮೂಲಕ. ಅವರೆಗೆ ನಿಶ್ಯಕ್ತವಾಗಿದ್ದ ಪುರೋಹಿತ ಶಾಹಿ ಈಗ ಬಲಗೊಂಡು ನಿಂತಿತು. ಜಂಗಮ ಜಾತಿಯಾಯಿತು; ಲಿಂಗಾಯತವು ವೀರಶೈವ ಪದದ ಬುರಖಾ (ಮುಸುಕು) ಹಾಕಿಕೊಂಡಿತು. ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಪುರೋಹಿತ ಶಾಹಿಯ ವಿರುದ್ಧ ವಚನ ಸಾಹಿತ್ಯ ಶಸ್ತ್ರವನ್ನು ಹಿಡಿದು ಕಲಿಯಾಗಿ ಹೋರಾಟಕ್ಕಿಳಿದರು. ಅವರು ಜಂಗಮದೀಕ್ಷೆ ಕೇಳಿದಾಗ ನವಿಲು ಗುಂದದ ಗವಿಮಠದ ಬಸವಲಿಂಗ ಸ್ವಾಮಿಗಳು, ಸಿಂದಗಿ ಸಾರಂಗ ಮಠದ ಪಟ್ಟಾಧ್ಯಕ್ಷರು, ಭಾಲ್ಕಿಯ ಹಿರೇಮಠದ ಪೂಜ್ಯ ಶ್ರೀ ಚನ್ನಬಸವ ಪಟ್ಟದೇವರು - ಮೂವರು ಪಂಚಮಸಾಲಿ ಜನಾಂಗದವರು ಮಾತ್ರ ಮಠಾಧಿಕಾರಿಗಳಾಗಿದ್ದರು. ಪೂಜ್ಯ ಅಪ್ಪಾಜಿಯವರಿಗೆ ಭಕ್ತವರ್ಗದಲ್ಲಿ ಹುಟ್ಟಿದವರು ಎಂಬ ಕಾರಣಕ್ಕೆ ಜಂಗಮದೀಕ್ಷೆ ಸಂಪ್ರದಾಯ ಮಠಾಧೀಶರಿಂದ ಸಿಗಲಿಲ್ಲ. ಪೂಜ್ಯರು ಹೆದರಲಿಲ್ಲ. ಲಿಂಗಾಯತ ಧರ್ಮ ಬಿಟ್ಟು ಅನ್ಯ ಆರೂಢ ಪಂಥವನ್ನು ಹಿಡಿಯಲಿಲ್ಲ ಅಥವಾ ಪಂಚಮಸಾಲಿ ಜಾತಿಪೀಠವನ್ನು ಮಾಡಲೂ ಪ್ರಯತ್ನಿಸಲಿಲ್ಲ. ಜಂಗಮ ತತ್ತ್ವದ ಮಹತ್ವವನ್ನು ಜನರಿಗೆ ತಿಳಿಸಿದರು, ವ್ಯಾಪಕವಾಗಿ ಸಂಚರಿಸಿದರು, ಪ್ರವಚನದ ಮೂಲಕ ಅಪ್ರತಿಮ ಜಾಗೃತಿ ಮಾಡಿ, ಹೊಸ ಜನಾಂಗ ನಿರ್ಮಾಣ ಮಾಡಿದರು ಒಂದು ಜಾತಿಗೆ ಜಗದ್ಗುರುವಾಗದೆ ಇಡೀ ಬಸವ ತತ್ತ್ವಾನುಯಾಯಿಗಳಿಗೆ ಜಗದ್ಗುರುವಾದರು. ಈ ಜಾಗೃತಿಯ ಫಲವೇ ಮಹಿಳಾ ಜಗದ್ಗುರು ಪೀಠವಾದ ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ ಮತ್ತು ಕೂಡಲ ಸಂಗಮದ ಬಸವ ಧರ್ಮದ ಮಹಾಜಗದ್ಗುರು ಪೀಠ. ಇವು ಜಾತಿ ಆಧಾರಿತ ಪೀಠಗಳಲ್ಲ ಜ್ಯೋತಿ ಆಧಾರಿತ ಪೀಠಗಳು.

ಪಂಚಮಸಾಲಿಯವರಿಗೆ ಇದ್ದಕ್ಕಿದ್ದಂತೆಯೇ ಜ್ಞಾನೋದಯವಾಯಿತು. ಪಂಚಪೀಠಾಧೀಶರ ಪರಮ ಭಕ್ತರಾಗಿದ್ದ ಅವರಲ್ಲಿ ಕೆಲವರು ಸ್ವತಂತ್ರ ವಿಚಾರ ಮಾಡತೊಡಗಿದರು. ಅಸಮಾನತೆಯ ಪ್ರತಿಪಾದಕರಾದ ಪಂಚಪೀಠಾಧೀಶರು ತಮ್ಮ ಪರಮಭಕ್ತರಾದ ಪಂಚಮಸಾಲಿ ಜನಾಂಗದ ಯುವಕರಿಗೆ ತಮ್ಮ ಪೀಠಕ್ಕೆ ಅಧಿಕಾರಿಯನ್ನಾಗಿ ಮಾಡಲು ಸಿದ್ಧರಿರುವರೆ? ಹೀಗೊಂದು ಪ್ರಶ್ನೆಯನ್ನು ಅವರಿಗೆ ಕೇಳಿರಿ ಎಂದು ನಾನು ಧಾರವಾಡದಲ್ಲಿ ಒಂದು ಸಮ್ಮೇಳನ ನಡೆದಾಗ ಸವಾಲು ಹಾಕಿದ್ದೆ. ಅದು ಎಲ್ಲ ಪ್ರಮುಖ ಪತ್ರಿಕೆಗಳಲ್ಲೂ ಪ್ರಕಟವಾಯಿತು.

ಈ ಪ್ರಶ್ನೆಗೆ ನಕಾರಾತ್ಮಕ ಉತ್ತರ ಬಂದಾಗ ಅಡ್ಡಪಲ್ಲಕ್ಕಿ ಹೊರುತ್ತಿದ್ದ ಅನೇಕರಿಗೆ ಆಘಾತವಾಯಿತು. ಗುರುಗಳ ಸೇವೆ ಭಕ್ತನ ಕರ್ತವ್ಯವಾದರೆ ಭಕ್ತರ ಹಿತರಕ್ಷಣೆ ಗುರುಗಳ ಕರ್ತವ್ಯವಷ್ಟೆ. ಆದರೆ ಶ್ರೀ ವಾಜಪೇಯಿ ಪ್ರಧಾನಿಯಾಗಿದ್ದಾಗ ಈ ಐವರು ಪೀಠಾಧೀಶರು ವಿಶೇಷ ಮನವಿ ನೀಡಿ ಜಂಗಮರಿಗೆ ವಿಶೇಷ ಸವಲತ್ತು ನೀಡಲು ಕೋರಿದ್ದರು. ಇದು ತಿಳಿದಾಗ ಅನೇಕ ಪಂಚಮಸಾಲಿ ಭಕ್ತರು ಅಲ್ಲಿಗಾಗಲೇ ಅಡ್ಡಪಲ್ಲಕ್ಕಿ ಹೊತ್ತು ದಣಿದಿದ್ದವರು ಮತ್ತಷ್ಟು ಆಘಾತಕ್ಕೆ ಒಳಗಾಗಿ ತಮ್ಮದೇ ಆದ ಗುರುಪೀಠ ಮಾಡಿಕೊಳ್ಳಲು ಸನ್ನದ್ಧರಾದರು. ಅಂತೂ ವರ್ಷಗಟ್ಟಳೆ ತಿಂಗಳು ಗಟ್ಟಳೆ ವರಾನ್ವೇಷಣೆ ಮಾಡಿದ ಮಾವನಂತೆ ಪೀಠಾಧಿಕಾರಿಗಳಿಗಾಗಿ ಹುಡುಕಾಡಿದರು, ತಡಕಾಡಿದರು. ಈ ಅವಧಿಯಲ್ಲಿ 2 ಪೀಠಗಳು ಆಗಿಯೇ ಬಿಟ್ಟವು. ಮೊದಲವೆರಡು ತತ್ವಾಧಾರಿತ ಪೀಠಗಳು, ದಿ. 17-18 ರಂದು ಆಗಿರುವುದು ತತ್ತ್ವರಹಿತ ಜಾತಿಪೀಠ.

1. ಬೆಳಗಾವಿಯಲ್ಲಿ ಪೂಜ್ಯ ಶ್ರೀ 1118 ಜಗದ್ಗುರು ಬಸವ ಪ್ರಭು ಸ್ವಾಮಿಗಳು ಧರ್ಮಗುರು ಬಸವಣ್ಣನವರು ಎಂಬುದನ್ನು ನಂಬಿ, ವಚನ ಸಾಹಿತ್ಯವನ್ನು ಧರ್ಮಸಂಹಿತೆ ಎಂದು ಭಾವಿಸಿದವರು. ಸ್ವಯಂ ಪ್ರೇರಣೆಯಿಂದ ಅಧ್ಯಾತ್ಮ ಜೀವನಕ್ಕೆ ಬಂದು, ಬಸವ ಗುರುಕುಲ ನಡೆಸುತ್ತ ಪಂಚಪೀಠದವರ ನೆರಳಿನಿಂದ ಪಂಚಮಸಾಲಿಯವರನ್ನು ಹೊರತರಲು ಪಂಚಮಸಾಲಿ ಲಿಂಗಾಯತ ಜಗದ್ಗುರು ಪೀಠವನ್ನು ಮೊಟ್ಟ ಮೊದಲು ಸುಮಾರು ಒಂದು ವರ್ಷದ ಹಿಂದೆಯೇ ಘೋಷಿಸಿದರು.

2. ಶ್ರೀ ಭಾವಿ ಬೆಟ್ಟಪ್ಪನವರ ಸಾರಥ್ಯದಲ್ಲಿ ಪಂಚಮಸಾಲಿ ಗುರುಗಳಾಗುವವರಿಗಾಗಿ ಹುಡುಕಾಟ ನಡೆದು ಪೀಠಾರೋಹಣ ಫೆಬ್ರವರಿ 17-18 ಎಂದು ಘೋಷಿತವಾಗುತ್ತಲೇ ಚಿತ್ರದುರ್ಗದ ಮುರುಘಾ ಶರಣರು ಚಂಗನೆ ಎದ್ದರು. ಅವರ ನಿದ್ದೆ ಕೆಟ್ಟಿತು. ಏಕೆಂದರೆ ಪಂಚಮಸಾಲಿ ಜನ ಭೂಮಾಲಿಕರು, ಶ್ರೀಮಂತರು, ರಾಜಕೀಯದಲ್ಲಿ ಪ್ರಭಾವ ಶಾಲಿಗಳು ಲಿಂಗಾಯತ ಸಮಾಜದ ''ಕೆನೆ ಪದರ.'' ಶ್ರೀ ಭಾವಿ ಬೆಟ್ಟಪ್ಪನವರ ಅನುಯಾಯಿಗಳಾಗಿ, ವೀರಶೈವ ವಾದಿಗಳಾಗಿ, ತಮ್ಮ ಜಾತಿ ಪೀಠಕ್ಕೆ ಬದ್ಧರಾದರೆ ಹೇಗೆ? ಬಹುಪಾಲು ಪಂಚಮಸಾಲಿಯವರು ಉತ್ತರ ಕರ್ನಾಟಕದಲ್ಲಿ ಬಸವ ಭಕ್ತರು. ಪೂಜ್ಯ ಲಿಂಗಾನಂದ ಅಪ್ಪಾಜಿ ಹೇಳುತ್ತಿದ್ದರು, ''ಲಿಂಗಾಯತರು ಒಳಪಂಗಡ ಹೇಳುವಾಗ ಬೇರೆಯವರು ಒಳಜಾತಿ ಹೇಳಿದರೆ ಪಂಚಮ ಸಾಲಿಯವರು 'ನಾವು ಲಿಂಗಾಯತರು' ಎನ್ನುತ್ತಾರೆ, ಏಕಿರಬಹುದು? ಬಹುಶಃ ಧರ್ಮಗುರು ಬಸವಣ್ಣನವರ ಕಾಲದಲ್ಲೇ ಈ ಸಮುದಾಯ ಲಿಂಗಾಯತರಾಗಿರಬಹುದು. ಬೇರೆ ಲಿಂಗಾಯತರು

ಉದಾ: ರೆಡ್ಡಿ ಲಿಂಗಾಯತ, ಗೌಡ ಲಿಂಗಾಯತರು ಇರುವಂತೆ ಲಿಂಗಾಯತೇತರ ರೆಡ್ಡಿ, ಲಿಂಗಾಯತೇತರ ಗೌಡರು (ಒಕ್ಕಲಿಗರು) ಇದ್ದಾರೆ. ಆ ರೀತಿ ಲಿಂಗಾಯತೇತರ ಪಂಚಮಸಾಲಿ ಇಲ್ಲ. ಅಂದರೆ ಇಡೀ ಸಮುದಾಯ ದೀಕ್ಷಾವಂತರಾಗಿದ್ದಾರೆ. ಇವರಿಗಿದ್ದ ಇನ್ನೊಂದು ಅನ್ವರ್ಥನಾಮ ಪಂಚಾಚಾರದವರು. ಧರ್ಮಗುರು ಬಸವಣ್ಣನವರು ಬೋಧಿಸಿದ ಪಂಚ ಆಚಾರಗಳನ್ನು ತಪ್ಪದೆ ಪಾಲಿಸುವ ಬಸವ ನಿಷ್ಠೆ ಮತ್ತು ಲಿಂಗನಿಷ್ಠೆಯುಳ್ಳವರಾಗಿದ್ದಾರೆ. ಇತ್ತೀಚೆಗೆ ದಾರಿ ತಪ್ಪಿ ಯಾವುದೇ ಬಾದರಾಯಣ ಸಂಬಂಧವಿಲ್ಲದಿದ್ದರೂ ಪಂಚಪೀಠದವರತ್ತ ವಾಲುತ್ತಿದ್ದಾರೆ.'' ಎಂದು ಪೂಜ್ಯ ಅಪ್ಪಾಜಿ ವಿಷಾದಿಸುತ್ತಿದ್ದರು.

ಪರಿಸ್ಥಿತಿ ಹೀಗಿರುವಾಗ, ವಿರಕ್ತರು ಜಾಗೃತಗೊಂಡರು. ಚಿತ್ರದುರ್ಗದ ಮುರುಘಾ ಶರಣರು ವಿರಕ್ತ ಸ್ವಾಮಿಗಳವರನ್ನು ಜಾಗೃತಿಸಿದರು, ಸಂಘಟಿಸಿದರು. ಬಹಳ ತರಾತುರಿಯಿಂದ ಫೆಬ್ರವರಿ 12 ರಂದು ಲಿಂಗಾಯತ ಪಂಚಮಸಾಲಿ ಜನಾಂಗದ 2ನೇ ಪೀಠ ಸ್ಥಾಪನೆಯಾಯಿತು. ಪೂಜ್ಯ ಬಸವ ಜಯ ಮೃತ್ಯುಂಜಯ ಸ್ವಾಮಿಗಳನ್ನು ಪ್ರಥಮ ಜಗದ್ಗುರುವನ್ನಾಗಿ ಪೀಠಾರೋಹಣ ಮಾಡಿಸಲಾಯಿತು. ಇದು ಸಕಾಲದಲ್ಲಿ ತೆಗೆದುಕೊಂಡ ಅಭಿನಂದನಾರ್ಹ ನಿರ್ಧಾರ. ಅಭಿನಂದನೆಗೆ ಕಾರಣಗಳೇನೆಂದರೆ:

1. ಗುರು ಬಸವಣ್ಣನವರನ್ನು ಧರ್ಮಗುರುವೆಂದು ಒಪ್ಪಿ, ವಚನ ಸಾಹಿತ್ಯವನ್ನು ಧಾರ್ಮಿಕ ಸಂಹಿತೆ ಎಂದು ಘೋಷಿಸಿದ್ದು.
2. ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠ ಎಂದು ಹೆಸರಿಟ್ಟಿದ್ದು.
3. ಕೂಡಲ ಸಂಗಮವನ್ನು ಧರ್ಮಕ್ಷೇತ್ರ ಎಂದು ಗುರುತಿಸಿದ್ದು.
4. ಪೂಜ್ಯ ಶ್ರೀ ಜಗದ್ಗುರು ಬಸವ ಜಯ ಮೃತ್ಯುಂಜಯ ಸ್ವಾಮಿಗಳು ಸ್ವಯಂ ಪ್ರೇರಣೆಯಿಂದ ಅಧ್ಯಾತ್ಮಿಕ ಜೀವನಕ್ಕೆ ಬಂದವರು, ಸಾತ್ವಿಕರು, ತ್ಯಾಗಿಗಳು, ಪ್ರತಿಭಾವಂತರು, ಸ್ವತಂತ್ರ ವ್ಯಕ್ತಿತ್ವ ಉಳ್ಳವರು ಆಗಿರುವುದು.

ಈ ಪೀಠವು ಪಂಚಮಸಾಲಿ ಜನಾಂಗಕ್ಕೆ ಸೂಕ್ತ ದಿಕ್ಕನ್ನು ತೋರಿಸುವಂತಾಯಿತಲ್ಲದೆ ಒಂದು ತಾತ್ವಿಕ ನೆಲೆಯನ್ನು ಕಲ್ಪಿಸಿತು. ಇಲ್ಲದಿದ್ದರೆ ಭಾವಿ ಬೆಟ್ಟಪ್ಪನವರ ಪೀಠ ಒಂದೇ ಆಗಿದ್ದರೆ ಪಂಚಮಸಾಲಿ ಜನಾಂಗವು ತಪ್ಪು ದಿಕ್ಕಿನಲ್ಲಿ ಸಾಗುತ್ತಿತ್ತು. ಮುರುಘಾ ಶರಣರ ಈ ತರಾತುರಿಯ ಕಾರ್ಯವನ್ನು ಸಿರಿಗೆರೆಯ ಶ್ರೀಗಳು ಟೀಕಿಸಿದ್ದಾರೆ.

ವಿಜಯ ಕರ್ನಾಟಕ, ದಿ. 19-02-2008, ಪುಟ 6.

ಜಾತಿ, ಧರ್ಮಗಳ ನಡುವೆ ಸಾಮರಸ್ಯ ಉಂಟುಮಾಡಬೇಕಾದ ಧಾರ್ಮಿಕ ಮುಖಂಡರೇ ಕೂಡಲ ಸಂಗಮದಲ್ಲಿ ಪ್ರತ್ಯೇಕ ಪೀಠ ಸ್ಥಾಪಿಸಿ ಜಾತಿ ವಿಭಜಿಸಲು ಮುಂದಾಗಿದ್ದಾರೆ ಎಂದು ಸಿರಿಗೆರೆ ತರಳ ಬಾಳು ಮಠದ ಶಿವಮೂರ್ತಿ ಸ್ವಾಮೀಜಿ ಅಸಮಾಧಾನ ವ್ಯಕ್ತಪಡಿಸಿದರು.

ಬಸವತತ್ವ ಪ್ರತಿಪಾದಕರೆಂದು ಹೇಳಿಕೊಳ್ಳುವವರೇ ಇಂದು ಅದಕ್ಕೆ ವಿರುದ್ಧ ದಿಕ್ಕಿನಲ್ಲಿ ಕಾರ್ಯೋನ್ಮುಖರಾಗಿರುವುದು ವಿಷಾದನೀಯ. ಜಾತಿಯೊಂದರಲ್ಲೇ ಎರಡನೇ ಪೀಠ ಹುಟ್ಟುಹಾಕಿ ಬಸವ ತತ್ವಕ್ಕೆ ಧಕ್ಕೆ ತಂದಿದ್ದಾರೆ. ಬಸವಣ್ಣ ಜಾತಿ ಮೀರಿದ ಸಮಾಜ ನಿರ್ಮಾಣಕ್ಕೆ ಪ್ರಯತ್ನಿಸಿದ. ಬಸವಣ್ಣನ ಹೆಸರು ಹೇಳಿಕೊಂಡು ಸಮುದಾಯದ ದಾರಿ ತಪ್ಪಿಸುವ ಕೆಲಸ ಮಾಡಬಾರದು ಎಂದ ಸ್ವಾಮೀಜಿ, ಕೂಡಲ ಸಂಗಮದಲ್ಲಿ ಸ್ಥಾಪನೆಯಾದ ಲಿಂಗಾಯತ ಪಂಚಮಸಾಲಿ ಪೀಠ ಕುರಿತು ಆಕ್ಷೇಪ ವ್ಯಕ್ತಪಡಿಸಿದರು.

ಸಿರಿಗೆರೆ ಸ್ವಾಮೀಜಿಯವರ ಮಾತುಗಳು ಹಾಸ್ಯಾಸ್ಪದವಾಗಿ ತೋರುತ್ತಿವೆ. ಪಂಚಮಸಾಲಿಯವರಿಗೆ ಪ್ರತ್ಯೇಕ ಪೀಠ ಸ್ಥಾಪಿಸಿ ಲಿಂಗಾಯತ ಸಮಾಜದಲ್ಲಿ ಪ್ರತ್ಯೇಕವಾಗಿರಲು ಪ್ರಯತ್ನಿಸಿದವರು, ಶ್ರೀ ಸಿರಿಗೆರೆ ಸ್ವಾಮಿಗಳು ಉದ್ಘಾಟಿಸಿದ ಕಾರ್ಯಕ್ರಮದ ಮುಂದಾಳುಗಳಾದ ಭಾವಿ ಬೆಟ್ಟಪ್ಪ, ಬಸವರಾಜ ದಿಂಡೂರು ಮುಂತಾದವರು. ಇವರು ಧರ್ಮಗುರು ಬಸವಣ್ಣನವರಿಂದ, ಶರಣ ಪಥದಿಂದ, ಲಿಂಗಾಯತ ಸಮಾಜದಿಂದ ಪಂಚಮಸಾಲಿ ಜನರನ್ನು ದೂರ ಒಯ್ಯುತ್ತಾರೆ ಎಂಬ ಆತಂಕ, ಕಳವಳದಿಂದ ವಿರಕ್ತರ ಸಮೂಹ ಲಿಂಗಾಯತ ಪಂಚಮಸಾಲಿ ಪೀಠಕ್ಕೆ ಪ್ರೇರಣೆ ನೀಡಿದೆ. ಭಾವಿ ಬೆಟ್ಟಪ್ಪನವರ ದುರುದ್ದೇಶಕ್ಕೆ ಪ್ರತಿ ತಂತ್ರ ಹೂಡಿರುವುದರಲ್ಲಿ ವಿರಕ್ತ ವರ್ಗದವರಲ್ಲಿ ಸದುದ್ದೇಶವಿದೆ ಎಂಬುದು ಅತ್ಯಂತ ಸ್ಪಷ್ಟವಾಗಿದೆ. ಜಾತಿ ಪೀಠ ಮಾಡುವವರಿಗೆ ಬುದ್ಧಿ ಹೇಳುವ ನೈತಿಕ ಹಕ್ಕನ್ನು ಸಿರಿಗೆರೆ ಶ್ರೀಗಳು ಕಳೆದುಕೊಂಡಿದ್ದಾರೆ. ಏಕೆಂದರೆ ಮೊಟ್ಟ ಮೊದಲ ಅಂಥ ಪೀಠ ಆದುದೇ ಸಿರಿಗೆರೆ ಮಠದಿಂದ, 20ನೆಯ ಶತಮಾನದ ಲಿಂಗಾಯತ ಪುರೋಹಿತ ಶಾಹಿಯ ಕೈವಾಡದ ಅಧ್ಯಯನ ಮಾಡಿದರೆ 'ಜಂಗಮ' ವರ್ಗದವರು ಉಳಿದ ಲಿಂಗಾಯತರನ್ನು ಕೀಳಾಗಿ ಕಂಡುದು ಅಂಥದೊಂದು ಪ್ರಯತ್ನಕ್ಕೆ ಕಾರಣವಾದುದು ಸತ್ಯ. ಆದರೆ ಪ್ರತಿಭಟನೆಯ ವಿಧಾನ ವಿಘಟನೆಗೆ ಕಾರಣವಾಯಿತು. ಮಾತ್ರವಲ್ಲ ಮಹಾಮಹಿಮರಾದ ಶರಣರನ್ನು ವಿಶಿಷ್ಟ ಜಾತಿಯ ಸಂಕೇತಗಳನ್ನಾಗಿ ಮಾಡಿತು. ವಿಶ್ವ ಬಂಧು ಮರುಳುಸಿದ್ಧರು ಸಾದು ಲಿಂಗಾಯತ ಸಮಾಜದ ಶ್ರದ್ಧಾಕೇಂದ್ರವಾದರೆ ಲಿಂಗಾಂಗಯೋಗಿ, ವಚನ ಸಂವಿಧಾನ ಕರ್ತೃ ಸಿದ್ಧರಾಮೇಶ್ವರರು ನೊಳಂಬ ಸಮಾಜದ ಶ್ರದ್ಧಾಕೇಂದ್ರವಾದರು. ಹೇಮರೆಡ್ಡಿ ಮಲ್ಲಮ್ಮ - ವೇಮನರು ರೆಡ್ಡಿ ಲಿಂಗಾಯತರ

ಶ್ರದ್ಧಾಕೇಂದ್ರವಾದರೆ, ಅಂಬಿಗರ ಚೌಡಯ್ಯನವರು ಅಂಬಿಗರ ಸಮಾಜದ ಶ್ರದ್ಧಾಕೇಂದ್ರವಾದರು. ವಿವಿಧ ಶರಣರನ್ನು ಬರಮಾಡಿಕೊಂಡು ಧರ್ಮಗುರು ಬಸವಣ್ಣನವರು ಅಖಂಡ ಶರಣ ಸಮಾಜ ಕಟ್ಟಿದರೆ ಆಧುನಿಕ ವಿದ್ಯಾವಂತ ಮಠಾಧೀಶರು ಆ ಶರಣರನ್ನು ಪ್ರತ್ಯೇಕಿಸಿ ಲಿಂಗಾಯತ ಸಮಾಜವನ್ನು ಒಡೆಯುವ ಕೆಲಸ ಮಾಡಿದರು, ದಿನಕ್ಕೊಬ್ಬರಂತೆ ಮಾಡುತ್ತಿದ್ದಾರೆ. ಇದಕ್ಕೆ ಸೂತ್ರಧಾರರು ರಾಜಕೀಯ ಮುಂದಾಳುಗಳು, ಪಾತ್ರಧಾರಿಗಳು ಪೀಠದ ಅಧಿಕಾರಿಗಳು.

''ಬಸವ ತತ್ತ್ವ ಪ್ರತಿಪಾದಕರೆಂದು ಹೇಳಿ ಕೊಳ್ಳುವವರೇ ಇಂದು ಅದಕ್ಕೆ ವಿರುದ್ಧ ದಿಕ್ಕಿನಲ್ಲಿ ಕಾರ್ಯೋನ್ಮುಖವಾಗಿರುವುದು ವಿಷಾದನೀಯ'' ಎಂದು ಸಿರಿಗೆರೆ ಶ್ರೀಗಳು ಪ್ರಲಾಪಿಸಿದ್ದಾರೆ. ಈ ಮಾತನ್ನು ಶ್ರೀಗಳು ಮೊದಲು ಭಾವಿ ಬೆಟ್ಟಪ್ಪನವರಿಗೆ ಹೇಳ ಬೇಕಾಗಿತ್ತು. ಕೈ ಮುರಿದ ವ್ಯಕ್ತಿಗೆ ತಿಳಿ ಹೇಳುವುದು ಬಿಟ್ಟು, ಮುರಿದ ಕೈಗೆ ಪ್ಲಾಸ್ಟರ್ ಹಾಕಲು ಹೊರಟವರಿಗೆ ಹಿತೋಪದೇಶ ಮಾಡ ಹೊರಟಿರುವುದು ಹಾಸ್ಯಾಸ್ಪದ. ಪಂಚಮಸಾಲಿಯವರು ಲಿಂಗಾಯತ ಧರ್ಮ, ಶರಣ ಸಂಸ್ಕೃತಿ, ಬಸವ ಪಥವನ್ನು ಬಿಟ್ಟು ಹೋಗದಿರಲೆಂದು ಬಸವ ತತ್ತ್ವ ಪ್ರತಿಪಾದಕರು ಮಾಡಿರುವ ಪ್ರಯತ್ನದ ಹಿಂದಿನ ಆಶಯವನ್ನು ಸಿರಿಗೆರೆ ಶ್ರೀಗಳು ಅರಿಯದೆ ಹೋದುದು ನಿಜಕ್ಕೂ ವಿಷಾದನೀಯ.

''ಬಸವಣ್ಣ ಜಾತಿ ಮೀರಿದ ಸಮಾಜ ನಿರ್ಮಾಣಕ್ಕೆ ಪ್ರಯತ್ನಿಸಿದ. ಬಸವಣ್ಣನ ಹೆಸರು ಹೇಳಿಕೊಂಡು ಸಮುದಾಯದ ದಾರಿ ತಪ್ಪಿಸುವ ಕೆಲಸ ಮಾಡಬಾರದು'' ಎಂದು ಸಿರಿಗೆರೆ ಶ್ರೀಗಳು ಉಪದೇಶ ಮಾಡಿದ್ದಾರೆ. ತಮಗೇ ನಂಬಿಕೆ ಇಲ್ಲದಿರುವ ಆದರ್ಶಗಳ ಬಗ್ಗೆ ಯಾಕೆ ಶ್ರೀಗಳು ಉಪದೇಶ ಮಾಡ ಹೋಗುತ್ತಾರೆ? ಎಂಬುದೇ ನಮಗೆ ಅರ್ಥವಾಗದ ಸಂಗತಿ. ತಾವೇಕೆ ಅಂಥ ಪೀಠಕ್ಕೆ ಅಧಿ ಕಾರಿಯಾಗಿದ್ದಾರೆ, ಅದನ್ನು ಮುಂದುವರಿಸುತ್ತಿದ್ದಾರೆ. ಲಿಂಗಾಯತ ಸಮಾಜದೊಳಗಣ ಎಲ್ಲ ಉಪಪಂಗಡಗಳನ್ನು ಪ್ರತ್ಯೇಕಿಸುತ್ತ, ಪ್ರತಿ ಪಂಗಡಕ್ಕೊಂದು ಗುರುಪೀಠ ಮಾಡುತ್ತಾ, ಅದೇ ಜನರ ಪ್ರತ್ಯೇಕ ವಾರ್ಷಿಕ ಸಮಾವೇಶಗಳನ್ನು ಮಾಡುತ್ತ ಮನಸ್ಸುಗಳನ್ನು ಜಾತಿ ಪ್ರಜ್ಞೆ ಉದ್ರೇಕಿಸಿ ಒಡೆಯುತ್ತ ಎಲ್ಲರೂ ಸಮಾಜ ಧರ್ಮಗಳನ್ನು ಎತ್ತ ಒಯ್ಯುತ್ತಿದ್ದಾರೆಂದು ಪ್ರಜ್ಞಾವಂತರಿಗೆ ಬಹಳ ದುಃಖವಾಗುತ್ತಲಿದೆ. ಎಲ್ಲರನ್ನು ಬೆಸೆಯುವ ಸೂತ್ರ ಧರ್ಮನಿಷ್ಠೆಯಾಗಬೇಕೇ ವಿನಾ ಜಾತಿಯಲ್ಲ. ಇದನ್ನೇಕೆ ಮಠಾಧೀಶರು ಅರ್ಥಮಾಡಿಕೊಳ್ಳುತ್ತಿಲ್ಲವೋ?!

ಇವರ ಆಹ್ವಾನ ಪತ್ರ ಭಾರಿ ದೊಡ್ಡದು. ಅದರಲ್ಲಿ ಪಂಚಮಸಾಲಿ ಜಾತಿಯಲ್ಲಿ ಹುಟ್ಟಿದ ಮಠಾಧೀಶರು, ರಾಜಕೀಯ ಮುಂದಾಳುಗಳು ಮುಂತಾದವರದು ಪ್ರತ್ಯೇಕ ಪಟ್ಟಿ ಮುದ್ರಣಗೊಂಡಿವೆ. ಎಲ್ಲ ಜನಾಂಗದವರ ಸಹಕಾರದಿಂದ ಆರಿಸಿ ಬಂದಿರುವ ರಾಜಕೀಯ ನೇತಾರರು, ಎಲ್ಲರ ಗೌರವ ಆದರ ಕಾಣಿಕೆಗೆ ಬಾಧ್ಯರಾಗಿರುವ ಮಠಾಧೀಶರು - ಇವರ ಜಾತಿಯನ್ನು ಎತ್ತಿ ತೋರಿಸಿದ್ದು ಅವರುಗಳಿಗೆ ಮುಜುಗರ ತರಿಸುವ ಸಂಗತಿಯಾಗದೆ?

ಗುರು-ವಿರಕ್ತರ ಸಮನ್ವಯ?

ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠಕ್ಕೆ ಒಮ್ಮೆಗೇ ಇಬ್ಬರು ಗುರುಗಳು ಪಟ್ಟಕ್ಕೇರಿದರು. ಒಬ್ಬರು ಸ್ಥಿರ ಪಟ್ಟಾಧ್ಯಕ್ಷರಂತೆ, ಇನ್ನೊಬ್ಬರು ಚರಪಟ್ಟಾಧ್ಯಕ್ಷರಂತೆ! ಮೊದಲನೆಯವರು ಜಗದ್ಗುರು ಡಾ|| ಮಹಾಂತ ಸ್ವಾಮಿಗಳು, ಎರಡನೆಯವರು ಜಗದ್ಗುರು ಸಿದ್ಧಲಿಂಗಸ್ವಾಮಿಗಳು, ಒಬ್ಬರು ಗುರು ವರ್ಗದವರಂತೆ, ಇನ್ನೊಬ್ಬರು ವಿರಕ್ತ ವರ್ಗದವರಂತೆ. ಒಂದಕ್ಕಿಂತ ಒಂದು ಹಾಸ್ಯಾಸ್ಪದ. ಪಂಚಪೀಠದವರ ನೆರಳಿನಿಂದ ಹೊರಬರುವ ಛಲ ಭಾವಿ ಬೆಟ್ಟಪ್ಪನವರಿಗೆ ಇದ್ದರೂ ಅವರ ''ಬಸವ ದ್ವೇಷ'' ಅಳಿಯ ಅಲ್ಲ ಮಗಳ ಗಂಡ ಎಂಬಂತೆ ವೀರಶೈವ ಪದದ ಮೂಲಕ ತೂರಿ ಬಂದಿದೆ. ಮತ್ತು ಕಾಲ್ಪನಿಕ ರೇಣುಕಾಚಾರ್ಯರನ್ನು ಗಂಟು ಹಾಕಿ ಕೊಂಡಿರುವುದಲ್ಲದೆ ಪಂಚಾಚಾರ್ಯವಾದದ ಬಣ್ಣದಲ್ಲಿ ಅದ್ದಲ್ಪಟ್ಟಿರುವ ಡಾ|| ಮಹಾಂತ ಶಿವಾಚಾರ್ಯರನ್ನು ಆಯ್ಕೆ ಮಾಡಿದ್ದಾರೆ.

ಆಚಾರ್ಯ ಪರಂಪರೆ

1. ರೇಣುಕಾದಿ ಪಂಚಾಚಾರ್ಯರು ಕಾಲ್ಪನಿಕ ಸೃಷ್ಟಿ. ಅವರನ್ನೇ ಆದ್ಯರು ಎನ್ನುವರು.
2. ಯಾವ ಸಾಹಿತ್ಯ, ಸಂದೇಶವನ್ನೂ ಕೊಟ್ಟಿಲ್ಲ.
3. ಪಂಚ ಪೀಠಾಧೀಶರು ವೀರಶೈವ ಮತಾವಲಂಬಿಗಳು.
4. ವೇದಾಗಮ ಅನುಸಾರಿಗಳು.
5. ಬಹುದೇವತಾ ಉಪಾಸಕರು.
6. ಜಂಗಮ - ಭಕ್ತ ಎಂಬ ಭೇದ ಮಾಡುವವರು.
7. ಆಡಂಬರ, ವೈಭವಗಳಿಂದ ಕೂಡಿದ ಪೂಜೆ.
8. ಅಡ್ಡ ಪಲ್ಲಕ್ಕಿ, ಪೀತಾಂಬರ, ಬಂಗಾರ ಕಿರೀಟ, ಉಂಗುರ ಧಾರಣೆ.

9. ಗೋತ್ರ ಸೂತ್ರಗಳಿವೆ.
10. ವೇದಿಕೆಯ ಮೇಲೆ ಭೇದ.

ವಿರಕ್ತರ ಶರಣ ಪರಂಪರೆ

1. ಗುರು ಬಸವಣ್ಣನವರು ಮತ್ತು ಸಮಕಾಲೀನರು ಐತಿಹಾಸಿಕ ಮಹಾಪುರುಷರು.
2. ಗುರು ಬಸವಣ್ಣನವರೇ ಆದ್ಯರು.
3. ವಚನ ಸಾಹಿತ್ಯವೆಂಬ ಶ್ರೇಷ್ಠ ಕೊಡುಗೆ ನೀಡಿದ್ದಾರೆ.
4. ಲಿಂಗಾಯತ ಧರ್ಮಾವಲಂಬಿಗಳು.
5. ವೇದಾಗಮ ತಿರಸ್ಕರಿಸಿದವರು.
6 ಏಕದೇವೋಪಾಸಕರು.
7. ಈ ಯಾವ ಬೇದ ಮಾಡದವರು.
8. ಸರಳತೆಯಿಂದ ಕೂಡಿದ ಅಷ್ಟವಿಧಾರ್ಚನೆ.
9. ವಿರಕ್ತರಿಗೆ ಕಾಷಾಯ ವಸ್ತ್ರ, ಗೃಹಸ್ಥರಿಗೆ ಧವಳ ವಸ್ತ್ರ
10. ವೇದಿಕೆಯ ಮೇಲೆ ಎಲ್ಲರಿಗೂ ಸಮಾನಸ್ಥಾನ.

ಹೀಗೆಲ್ಲ ಗುರು-ವಿರಕ್ತರಲ್ಲಿ ಭೇದವಿರುವಾಗ, ಇವೆರಡೂ ರೇಲ್ವೆ ಹಳಿಗಳಂತೆ ಸಮಾನಾಂತರವಾಗಿ ಸಾಗುವಾಗ ಹೇಗೆ ತಾನೆ ಸಮನ್ವಯ ಸಾಧಿಸಲು ಸಾಧ್ಯ? ಗುರು-ವಿರಕ್ತರು ಒಂದು ವೇದಿಕೆಯ ಮೇಲೆ ಬರುತ್ತೇವೆ (ಬೆಳಗಾವಿಯಲ್ಲಿ ಆದ ವೀರಶೈವ ಮಹಾಸಭೆಯ ಸಮ್ಮೇಳನವೇ ಉದಾಹರಣೆ) ಘರ್ಷಣೆ ಶುರುವಾಯಿತೆಂದೇ ಅರ್ಥ. ಹೀಗಿರುವಾಗ ಪಂಚಮಸಾಲಿ ಗುರುದ್ವಯರಲ್ಲಿ ವಿಚಾರ ಸಮನ್ವಯತೆ ಹೇಗೆ ಸಾಧ್ಯ? ಸಾಧ್ಯವಿದೆ, ಹೇಗೆಂದರೆ ಭಾವಿ ಬೆಟ್ಟಪ್ಪನವರ ಆದೇಶಕ್ಕೆ ಉಭಯ ಜಗದ್ಗುರುಗಳು ಸಮ್ಮತಿ ಸೂಚಿಸುವುದು; ಶ್ರೀ ಸಿದ್ಧಲಿಂಗ ಸ್ವಾಮಿಗಳು ಮೌನವಾಗಿ ಹಿರಿಯ ಶ್ರೀಗಳ ಮಾತಿಗೆ ನನ್ದೂ ಅದೇ, ನನ್ದೂ ಅದೆ! ಎಂದು ಗೋಣು ಆಡಿಸುವುದು.

ಅಂತೂ ಒಂದು ದೊಡ್ಡ ನಾಟಕ ಆರಂಭವಾಗಿದೆ. ಶ್ರೀ ಭಾವಿ ಬೆಟ್ಟಪ್ಪ ಎಂಬ ನಾಟಕದ ನಿರ್ದೇಶಕರು ಇನ್ನೂ ಏನೇನು ರಂಜನೀಯ ದೃಶ್ಯಗಳನ್ನು ತೋರಿಸುವರೋ ಕಾಯ್ದು ನೋಡೋಣವಂತೆ!

ಶ್ರೀ ಮಹದೇಶ್ವರ ಸ್ವಾಮಿ ದೇವಾಲಯಗಲ್ಲಿ ಬಲಿ ಪೀಠ ಸ್ಥಾಪನೆ – ಖಂಡನಾರ್ಹ

(ದೇವಾಲಯದ ಆಡಳಿತ ಮಂಡಳಿಗೆ ಮಾತಾಜಿ ಬರೆದ ಪತ್ರ)

ಚಾಮರಾಜ ನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೋಕಿನ ಶ್ರೀ ಮಹದೇಶ್ವರ ಸ್ವಾಮಿ ದೇವಾಲಯವು ಪ್ರಸಿದ್ಧ ಜಂಗಮ ಕ್ಷೇತ್ರ. ಶ್ರೀ ಮಲೈಮಹದೇಶ್ವರರು ಶೂನ್ಯ ಪೀಠದ ಆರನೆಯ ಗುರು, ಸಿದ್ಧ ಪುರುಷರಷ್ಟೆ ಅಲ್ಲ, ಸಾಮಾಜಿಕ ಪರಿವರ್ತನೆ ತರಬಯಸಿದ ಕ್ರಾಂತಿ ಪುರುಷರು. ಕ್ರಾಂತಿ ಪುರುಷ ಬಸವಣ್ಣನವರ ಶಾಂತಿ ಪಥದಲ್ಲಿ ನಡೆದು ಬಂದವರು. ಇಂಥ ಮಹಾಮಹಿಮರ ದೇವಾಲಯದ ರಾಜಗೋಪುರದ ಮುಂಭಾಗದಲ್ಲಿ ದಿ.11-2-2008, ಸೋಮವಾರ ನೂತನ ದೀಪ ಸ್ತಂಭ ಮತ್ತು ಬಲಿ ಪೀಠ ಪ್ರತಿಷ್ಠಾಪನೆಯಾದ ಸಂಗತಿ ಆಘಾತವನ್ನುಂಟುಮಾಡಿದೆ.

ದೀಪ ಸ್ತಂಭವು ತತ್ವಕ್ಕೆ ವಿರುದ್ಧವಾದುದೇನಲ್ಲ; ಆದರೆ "ಬಲಿ ಪೀಠ"ದ ಸ್ಥಾಪನೆ ತತ್ವಕ್ಕೆ ವಿರುದ್ಧವಾದುದು. ಶ್ರೀ ಮಹದೇಶ್ವರರು ಶರಣ ಪರಂಪರೆಯವರು, ಅಹಿಂಸಾ ಮಾರ್ಗಿಗಳು. ಅವರ ದೇವಾಲಯ ಆವರಣದಲ್ಲಿ "ಬಲಿ ಪೀಠ" ಇರುವುದೇ ಪ್ರಮಾದ. ಇದು ಮುಂದೆ ಪ್ರಾಣಿಗಳ ಬಲಿಗೂ ಅವಕಾಶ ಮಾಡಿಕೊಡಬಹುದು. ಆದ್ದರಿಂದ ಈ ಪದವನ್ನು ತೆಗೆದು ಹಾಕಿ, ಅಲ್ಲಿ ಪ್ರತಿಷ್ಠಾಪಿಸುತ್ತಿರುವ ಸ್ಥಾನಕ್ಕೆ "ಮೋಕ್ಷ ಪೀಠ" ಅಥವಾ "ಧ್ಯಾನ ಪೀಠ" ಎಂದು ನಾಮಕರಣ ಮಾಡಬೇಕೆಂದು ಆಗ್ರಹಿಸುತ್ತೇವೆ. ಈ ಸ್ಥಳದಲ್ಲಿ ಶ್ರೀ ಮಹದೇಶ್ವರರು ಧ್ಯಾನಕ್ಕೆ ಕುಳಿತುಕೊಳ್ಳುತ್ತಿದ್ದರು ಎಂದು ಜನರಿಗೆ ತಿಳಿಸಬಹುದು.

ಶ್ರೀ ಮಹದೇಶ್ವರ ದರ್ಶನಮ್ ಎಂಬ ಧಾರ್ಮಿಕ ಮಾಸ ಪತ್ರಿಕೆಯ ಜನವರಿ 2008ರ ಸಂಚಿಕೆ ನಮ್ಮ ಗಮನಕ್ಕೆ ಬಂದಿತು. ಮುಖ ಪುಟದಲ್ಲಿ ಶ್ರೀ ಮಹದೇಶ್ವರ ಸ್ವಾಮಿಯವರ ಚಿತ್ರವಿದೆ. ಅದರಲ್ಲಿ ಅವರ ಹಣೆಯಲ್ಲಿ ವಿಭೂತಿಯ ಎಳೆಗಳ ಮೇಲೆ ಕೆಂಪು ಕುಂಕುಮ ಇಡಲಾಗಿದೆ. ಶರಣರು ಕುಂಕುಮ ಧರಿಸುವುದಿಲ್ಲ. ಶಕ್ತಿಯ ಆರಾಧಕರು ಮಾತ್ರ ಕುಂಕುಮ ಧರಿಸುತ್ತಾರೆ. ಶ್ರೀ ಮಹದೇಶ್ವರರು ಶಾಕ್ತ ಸಂಪ್ರದಾಯದವರಲ್ಲ, ಆದ್ದರಿಂದ ಅವರ ಚಿತ್ರದಲ್ಲಿ ಕುಂಕುಮವನ್ನು ಇಡಬಾರದೆಂದು ಸೂಚಿಸುತ್ತೇವೆ.

ಈ ಎರಡೂ ವಿಷಯಗಳಲ್ಲಿ ತಕ್ಷಣವೇ ಬದಲಾವಣೆ ತರಲು ಆಗ್ರಹಿಸುತ್ತೇವೆ.

3. ಮಹದೇಶ್ವರ ಸ್ವಾಮಿ ದೇವಾಲಯದಲ್ಲಿ ಬಲಿಪೀಠ ಮತ್ತು ಮಹದೇಶ್ವರರಿಗೆ ಕುಂಕುಮಧಾರಣೆ

- ಮಾತಾಜಿ

ಪ್ರಜಾವಾಣಿ ಪತ್ರಿಕೆಯ ವಾಚಕರ ವಾಣಿ ವಿಭಾಗದಲ್ಲಿ ಒಂದೆರಡು ಪತ್ರಗಳು ಪ್ರಕಟಗೊಂಡು ಮಲೈ ಮಹದೇಶ್ವರ ಸ್ವಾಮಿ ದೇವಾಲಯದಲ್ಲಿ ಬಲಿಪೀಠವನ್ನು ಸ್ಥಾಪಿಸುವುದು ಸೂಕ್ತವಲ್ಲ ಎಂದು ಆಕ್ಷೇಪಿಸಿದ್ದರು. ನಾನು ಕುತೂಹಲಗೊಂಡು ಕೊಳ್ಳೇಗಾಲ ತಾಲ್ಲೋಕು ಮತ್ತೀಪುರದ ಶರಣ. ಸು. ಮಲ್ಲಿಕಾರ್ಜುನಪ್ಪನವರಿಗೆ ಫೋನ್ ಮಾಡಿದೆ. ಅವರೂ ಗಮನಿಸಿರಲಿಲ್ಲ. ಹೋಗಿ ವಿಚಾರಿಸಿಕೊಂಡು ಬರಲು ಹೇಳಿದೆ. ಮಾದೇಶ್ವರಬೆಟ್ಟಕ್ಕೆ ದಿ. 13-02-2008ರಂದು ಅವರು ಹೋಗಿ ವಿಚಾರಿಸಿದರು. ಮಾದೇಶ್ವರ ದೇವಸ್ಥಾನದೊಳಗೆ ಮೊದಲೇ ಒಂದು ಸಂಭವಿತ್ತೆಂದೂ, 2003ರಲ್ಲಿ ದೇವಸ್ಥಾನದ ರಾಜಗೋಪುರ ಕಟ್ಟಿಸುವಾಗ, ಸದ್ರಿ ಸ್ತಂಭವನ್ನು ಹೊರಗಡೆಗೆ ಸ್ಥಳಾಂತರಿಸಿ, ಈಗ ಆ ರಾಜಗೋಪುರದ ಮುಂಭಾಗದಲ್ಲಿ ಒಂದು ಕಂಬವನ್ನು ನಿಲ್ಲಿಸಲಾಗಿದೆ. ಇದೇ 11-02-2008ರಂದು ಪ್ರತಿಷ್ಠಾಪಿಸಿರುವ ದೀಪಸ್ತಂಭ ಎಂದು ಕೆಲವರು ಹೇಳಿದರು. ಇದೇನೆಂದು ಕೇಳಿದಾಗ, ಅದು ದೇವಸ್ಥಾನಗಳಿಗೆ ಗರುಡಗಂಭ ಇದ್ದ ಹಾಗೆ ಎನ್ನುವರು.

ದೇವಸ್ಥಾನದೊಳಗೆ ಗರ್ಭಗುಡಿಗೆ ಎದುರು ಗಾಳಿ ಬಸವೇಶ್ವರ ದೇವಸ್ಥಾನವಿದ್ದು, (ಇದರ ಮುಂಭಾಗ ಕಾಯಿ ಒಡೆಯುವ ಸ್ಥಳ) ಇದರ ಹಿಂಭಾಗದಲ್ಲಿ ಕಲ್ಲಿನ ಒಂದು ಪೀಠ ಹಿಂದಿನಿಂದಲೂ ಇರುವುದೆಂದು, ಈ ಪೀಠದ ಪಕ್ಕ ನಿಂತು, ಈ ಗಾಳಿ ಬಸವೇಶ್ವರ ದೇವಸ್ಥಾನದ ಗೋಡೆಯಲ್ಲಿರುವ ಕಿಂಡಿಯ ಮೂಲಕ ನೋಡಿದರೆ ಗರ್ಭಗುಡಿಯಲ್ಲಿರುವ ದೇವರು ಕಾಣುವುದೆಂದು, ಈಗ ಸದರಿ ಪೀಠವನ್ನು ಬದಲಾಯಿಸಿ, ಹೊಸದಾಗಿ ಸುಮಾರು 3 ಅಡಿ ಎತ್ತರದ ಚೌಕಾಕಾರದ ಪೀಠವನ್ನು ಇಡಲಾಗಿದೆ. ಇದೇ 11-02-2008ರಂದು ಪ್ರತಿಷ್ಠಾಪಿಸಿರುವ ಬಲಿಪೀಠ ಎನ್ನಲಾಗಿದೆ. ಇನ್ನೂ ಕೆಲವರನ್ನು ಕೇಳಿದಾಗ ಹಿಂದೆ ಬಲಿಪೀಠವಿರಲಿಲ್ಲ ಎನ್ನುವರು. ಕಾರ್ಯನಿರ್ವಾಹಕ ಅಧಿಕಾರಿಯವರನ್ನು ಕೇಳಿದಾಗ ಅವರು ಆಗಮಿಕರನ್ನು ವಿಚಾರಿಸಬೇಕು ಎಂದು ಹೇಳಿ ಹೋದರಂತೆ.

ಹಿಂದೆ ಬಲಿಪೀಠ ಇರಲಿಲ್ಲ ಎಂಬುದು ಸ್ಪಷ್ಟವಾಗಿದೆ. ಅದನ್ನು ಈಗ ಸೃಷ್ಟಿಸಿರುವುದು ನಿಜ. ಪ್ರಾಣಿ ಬಲಿ ಕೊಡದೇ ಇದ್ದರೂ 'ಬಲಿ' ಪದ ಬಳಸಿರುವುದು ತಪ್ಪು" ಎಂದು ಅವರು ಪತ್ರ ಬರೆದು ತಿಳಿಸಿದರು. ನಾನು ದಿ. 20-02-2008 ರಂದು ಒಂದು ಪತ್ರವನ್ನು ಸಾಲೂರು ಮಠದ ಪೂಜ್ಯರಿಗೆ, ಚಾಮರಾಜನಗರ ಜಿಲ್ಲಾಧಿಕಾರಿಗಳಿಗೆ ಮುಂತಾಗಿ ಬರೆದಿದ್ದೇನೆ. ಆ ಪುತ್ರವನ್ನು ಈ ಸಂಚಿಕೆಯಲ್ಲೇ ಮುದ್ರಿಸಲಾಗಿದೆ. ಶ್ರೀ ಮಹದೇಶ್ವರರು ಶುದ್ಧ ಶರಣ ಮಾರ್ಗಿಗಳು, ಅಹಿಂಸಾ ತತ್ವ ಪ್ರತಿಪಾದಕರು ಅವರ ದೇವಾಲಯದ ಆವರಣದಲ್ಲಿ "ಬಲಿಪೀಠ" ಎಂಬ ಹೆಸರು ಇರಲೇ ಕೂಡದು. ಅಲ್ಲಿ ಬಲಿಕೊಡದೇ ಇರಬಹುದು ಆದರೆ ಈ ಪದವು ಮುಂದೆ ಬಲಿಯಂತಹ ಕ್ರೂರ ಸಂಪ್ರದಾಯಕ್ಕೆ ನಾಂದಿ ಹಾಡಬಹುದು. ಎಲ್ಲ ನೈತಿಕ ಮೌಲ್ಯಗಳು ಕುಸಿಯುತ್ತಿರುವ ವಾತಾವರಣದಲ್ಲಿ ಕೆಲವು ಜನರು, "ಹಿಂದೆ ಬಲಿ ಇರುತ್ತಿತ್ತು, ಮಧ್ಯೆ ನಿಂತು ಹೋಗಿದೆ. ಆದ್ದರಿಂದ ಪ್ರಾರಂಭಿಸಬೇಕು" ಎಂಬ ಕಾಲ್ಪನಿಕ ಕಥೆ ಹೆಣೆಯಬಹುದು. ಮಹದೇಶ್ವರರು ವಿರಕ್ತ ಪರಂಪರೆಯ ಬಸವ ಪಥಿಕರು. ಕೇವಲ ಪವಾಡ ಪುರುಷರಷ್ಟೇ ಅಲ್ಲ ಆದಿವಾಸಿಗಳು, ಗುಡ್ಡಗಾಡು ಜನರಿಗೆ ಧರ್ಮಬೋಧೆ ಮಾಡಿ ಸಾಮಾಜಿಕ ಪರಿವರ್ತನೆ ತಂದ ಕ್ರಾಂತಿಪುರುಷ. ಈ ಧರ್ಮಪ್ರಚಾರಕ್ಕಾಗಿ ಅವರು ಮಠದ ಅಧಿಕಾರವನ್ನು ಶಿಷ್ಯನಿಗೆ ವಹಿಸಿಕೊಟ್ಟು ಕಾಡಿನೊಳಗೆ ಪ್ರವೇಶಿಸಿದರು. ಯಾವುದೇ ಶಿವ ದೇವಾಲಯದಲ್ಲಿ ಸಹ ಬಲಿಪೀಠ ಇರದು. ಅಂದಾಗ ಶರಣರ ಜಂಗಮ ಕ್ಷೇತ್ರವಾದ ಮಹದೇಶ್ವರರ ದೇವಾಲಯದಲ್ಲಿ ಅದಿರುವುದು ಉಚಿತವೆ?

ಮುಜರಾಯಿ ಇಲಾಖೆ ಐತಿಹಾಸಿಕ ದೇವಸ್ಥಾನಗಳ ರಕ್ಷಣೆಗಾಗಿ ಇರುವುದೇ ವಿನಾ ಆಯಾ ದೇವಾಲಯಗಳ ಆಚರಣೆ, ವಿಧಿ - ವಿಧಾನಗಳಲ್ಲಿ ಹಸ್ತಕ್ಷೇಪ ಮಾಡಲು ಮುಜರಾಯಿ ಇಲಾಖೆಗೆ ಸ್ವಾತಂತ್ರ್ಯವಿಲ್ಲ. ಆದರೆ ಸರ್ಕಾರಿ ಅಧಿಕಾರಿಗಳು ಮೆಲ್ಲನೆ ತಮ್ಮ ಸಂಪ್ರದಾಯಗಳನ್ನು ತೂರಿಸಿ ಬಿಡುವರು ಉದಾಹರಣೆಗೆ ಎಡೆಯೂರಿನ ಸಿದ್ಧಲಿಂಗೇಶ್ವರ ದೇವಾಲಯ. ಇದು ಶುದ್ಧ ಶರಣ ಜಂಗಮ ಕ್ಷೇತ್ರ. ಸಿದ್ಧಲಿಂಗೇಶ್ವರರು ಕಟ್ಟಾ ಏಕದೇವೋಪಾಸಕರು. ಮೂರು ಕಣ್ಣುಳ್ಳ ಈಶ್ವರನಿದ್ದರೂ ಅಂಗದ ಮೇಲೆ ಲಿಂಗವಿಲ್ಲದಿದ್ದರೆ ಶರಣನು ಪೂಜಿಸಬಾರದು ಎಂದು ಕಟ್ಟಪ್ಪಣೆ ನೀಡಿದ್ದಾರೆ. ಆದರೆ ಅಲ್ಲಿ ವೀರಶೈವ ಪುರೋಹಿತಶಾಹಿ ಗಣಪತಿ ಇತ್ಯಾದಿ ಸ್ಥಾಪಿಸಿ ಬಿಟ್ಟಿತು. ಮುಜರಾಯಿ ಇಲಾಖೆಗೆ ಸೇರಿದ ಆ ಗುಡಿಯಲ್ಲಿ ಅಧಿಕಾರದಲ್ಲಿದ್ದ ಓರ್ವ ವೈಷ್ಣವರು ವಿಷ್ಣುವಿನ ಮೂರ್ತಿಯನ್ನು ಸಹ ಇಟ್ಟರು.

ಲಿಂಗಾಯತ ಮುಖಂಡರು, ಸಮಾಜ ಮತ್ತು ಸ್ವಾಮಿಗಳು ಎಷ್ಟು ನಿಸ್ತೇಜರಾಗಿದ್ದಾರೆಂದರೆ ತಮ್ಮ ಧರ್ಮ - ಸಂಸ್ಕೃತಿಗೆ ಚ್ಯುತಿ ಬಂದರೆ ಚಕಾರ ಸಹ ಎತುವುದಿಲ್ಲ. ಅತ್ಯಂತ ಮೆತನೆಯ ಸ್ವಭಾವದ ಮತ್ತು

ಅಲ್ಪಸಂಖ್ಯೆಯಲ್ಲಿರುವ ಜೈನರಿಗೆ ಇರುವಷ್ಟು ಗಡಸುತನವೂ ಈ ಸಮಾಜಕ್ಕೆ ಇಲ್ಲವಾಗಿದೆ. ಸಂವಿಧಾನವು ಅವರವರ ಧಾರ್ಮಿಕ ಆಚರಣೆಗಳಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟಿರುವಾಗ ತಮ್ಮ ಹಕ್ಕನ್ನು ಚಲಾಯಿಸಲು ಯಾರೂ ಸಂಕೋಚಪಡಬೇಕಾಗಿಲ್ಲ. ಆದ್ದರಿಂದ ಪ್ರಜ್ಞಾವಂತರು ಮಹದೇಶ್ವರ ಸ್ವಾಮಿ ದೇವಾಲಯದಲ್ಲಿ ಬಲಿಪೀಠ ಇರಲು ಅವಕಾಶ ಕೊಡದೆ ಪ್ರತಿಭಟಿಸಿ ಅದನ್ನು ಧ್ಯಾನಪೀಠ ಅಥವಾ ಮೋಕ್ಷಪೀಠ ಎಂದು ಬದಲಿಸಲು ದೇವಸ್ಥಾನದ ಆಡಳಿತ ಮಂಡಳಿಯನ್ನು ಒತ್ತಾಯಿಸ ಬೇಕು.

ಮಹದೇಶ್ವರ ದರ್ಶನಮ್ ಎಂಬ ಮಾಸ ಪತ್ರಿಕೆ (ಜನವರಿ 2008) ಯ ಮೇಲೆ ಹುಲಿಯ ಮೇಲೆ ಕುಳಿತ ಮಹದೇಶ್ವರರ ಚಿತ್ರ ಮುದ್ರಣಗೊಂಡಿದೆ. ಹಣೆಯ ಮೇಲೆ 3 ಎಳೆ ತ್ರಿಪುಂಡ್ರವಿದ್ದು ಅದರ ಮೇಲೆ ದೊಡ್ಡದಾಗಿ ಕುಂಕುಮ ಇಡಲಾಗಿದೆ. ಶಾಕ್ತ ಪರಂಪರೆಯವರು ಮಾತ್ರ ರಕ್ತ ಲಾಂಛನವಾದ ಕುಂಕುಮವನ್ನು ಧರಿಸುವರೇ ವಿನಾ ಇನ್ನಿತರ ಯೋಗಿಗಳು ಧರಿಸರು. ಅದರಲ್ಲೂ ಶರಣ ಮಾರ್ಗಿಗಳು ಧರಿಸುವುದಿಲ್ಲ. ಹೀಗಿದ್ದಾಗ ಮಹದೇಶ್ವರರಿಗೆ ಕುಂಕುಮ ಧರಿಸುವುದು ತಪ್ಪು. ಇದನ್ನು ಸಹಿತ ಸರಿಪಡಿಸಲು ಪತ್ರಿಕೆಯ ಸಂಪಾದಕರಿಗೆ ತಿಳಿಸಲಾಗಿದೆ, ಶರಣ ಬಂಧುಗಳು ಸರಿಯಾಗಿ ಗಮನಿಸುತ್ತ ಶರಣರು, ಶಿವಯೋಗಿಗಳಿಗೆ ಅಪಚಾರವಾಗದಂತೆ ನೋಡಿಕೊಳ್ಳಬೇಕು ಮತ್ತು ಅಪಚಾರವಾದಾಗ ಪ್ರತಿಭಟಿಸಿಬೇಕೆಂದು ಸೂಚಿಸುತ್ತೇವೆ. 2008 ಫೆಬ್ರವರಿ 2 ಮತ್ತು 3 ರಂದು ಮೈಸೂರು ಜಿಲ್ಲೆಯ ಸುತ್ತೂರು ಗ್ರಾಮದಲ್ಲಿ ಸುತ್ತೂರು ಪರಂಪರೆಯ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವ ಜರುಗಿತು. ಆಹ್ವಾನ ಪತ್ರಿಕೆಯಲ್ಲಿ ಒಂದು ವಿಷಯ ಗಮನ ಸೆಳೆಯಿತು. ಅದೆಂದರೆ ಶ್ರೀ ನಾರಾಯಣ ಸ್ವಾಮಿ ದೇವಸ್ಥಾನ ಸಂಪ್ರೋಕ್ಷಣೆ. ಆಹ್ವಾನ ಪತ್ರಿಕೆಯ ಮೇಲ್ಭಾಗದಲ್ಲಿ ಓಂ ಶ್ರೀ ಗುರು ಬಸವಲಿಂಗಾಯ ನಮಃ ಮಂತ್ರವಿದೆ ಅದರ ಕೆಳಗೆ ಆದಿ ಜಗದ್ಗುರುಗಳ ಚಿತ್ರವಿದ್ದರೆ ಕೆಳಭಾಗದಲ್ಲಿ ನಾರಾಯಣ ಸ್ವಾಮಿಯ ಚಿತ್ರವಿದೆ. ಸುತ್ತೂರಿನಲ್ಲಿ ಇದೊಂದು ಪುರಾತನ ಗುಡಿ ಇದ್ದು ಅತ್ಯಂತ ಶಿಥಿಲಾವಸ್ಥೆಯಲ್ಲಿದ್ದ ಇದನ್ನು ಪುನರ್ ನಿರ್ಮಾಣ ಮಾಡಲಾಗಿದೆ. ಜೀರ್ಣೋದ್ಧಾರ ಮಾಡಲಾಗಿರುವ ನೂತನ ದೇವಾಲಯದ, ಮೂರ್ತಿಯ ವಿಗ್ರಹ ಶುದ್ಧಿ, ಪುಣ್ಯಾಹ ಇತ್ಯಾದಿ ಕಾರ್ಯಕ್ರಮಗಳು ಸುತ್ತೂರು ಶ್ರೀಗಳ ಸಾನ್ನಿಧ್ಯದಲ್ಲಿದೆ. ಲಿಂಗಾಯತ ಧರ್ಮವನ್ನು ಅಕ್ಷರಶಃ ವಿಕೃತಗೊಳಿಸುತ್ತಿರುವ ಕೊಟ್ಟೂರು ಸಂಗನ ಬಸವ ಸ್ವಾಮಿಗಳಿಂದ ಕಲಶಾರೋಹಣವಿದೆ. ಸುತ್ತೂರು ಶಿವರಾತ್ರೀಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಉತ್ಸವದಲ್ಲಿ ನಾರಾಯಣ ಸ್ವಾಮಿ ದೇವಾಲಯದ ಸಂಪ್ರೋಕ್ಷಣೆ ಇಡುವ ಅಗತ್ಯವೇನಿತ್ತು?

ಸುತ್ತೂರು ಶ್ರೀಗಳು ವಿದ್ಯಾಸಂಸ್ಥೆಗಳನ್ನು ತೆರೆದಿರುವುದರಿಂದ ಸರ್ಕಾರ, ಸಚಿವರು, ಸರ್ಕಾರಿ ಅಧಿಕಾರಿಗಳ ನೆರವಿನ ಹಿಡಿತದಲ್ಲಿ ಇರುವುದರಿಂದ ಕೆಲವೊಮ್ಮೆ ಒತ್ತಡಕ್ಕೆ ಬಲಿಯಾಗಬೇಕಾಗುತ್ತದೆ. ಹೀಗಾಗಿಯೇ ಹೋಮ - ಹವನಾದಿಗಳನ್ನು ಮಾಡಿಸುವ, ನಾರಾಯಣ ಸ್ವಾಮಿ ದೇವಾಲಯದ ಜೀರ್ಣೋದ್ಧಾರ - ಸಂಪ್ರೋಕ್ಷಣೆ ಮಾಡಿಸುವ ಸಂಕಷ್ಟಕ್ಕೆ ಒಳಗಾಗುತ್ತಾರೆ. ಆದರೆ ಇದು ಸ್ವಧರ್ಮ ವಿರೋಧಿ ಕಾರ್ಯವಾಗುತ್ತದೆ. ಭಗವದ್ಗೀತೆಯ ಪ್ರಕಾರ "ಸ್ವಧರ್ಮದಲ್ಲಿ ಶ್ರೇಯಸ್ಸಿದೆ, ಪರಧರ್ಮ ಭಯಸಹಿತವಾದುದು." ಯಾರೋ ಒಬ್ಬರು ಹೇಳಿದರು, ಸುತ್ತೂರು ಜಗದ್ಗುರುಗಳನ್ನು ಓರ್ವ ಶರಣ ಪಥಿಕರು "ಪೂಜ್ಯರೇ ಇಂಥವೆಲ್ಲ ಆಚರಣೆಯನ್ನು ಲಿಂಗಾಯತ ಸ್ವಾಮಿಗಳು ಮಾಡಬಹುದೆ?" ಎಂದು ಕೇಳಿದಾಗ ಅವರು ಹೇಳಿದರಂತೆ, "ನಾವೇನು ಲಿಂಗಾಯತರಲ್ಲವಲ್ಲ, ಕಾಳಾ ಮುಖ ಸಂಪ್ರದಾಯದವರು," ಎಂದು (ಸುತ್ತೂರು ಪರಂಪರೆಯ ಹಿಂದಿನ ಯಾವ ಜಗದ್ಗುರುಗಳೂ ಹೋಮಹವನಾದಿ, ಗಣಪತಿ ಪ್ರತಿಷ್ಠಾಪನೆ, ನಾರಾಯಣ ಸ್ವಾಮಿ ಮಂದಿರ ಕಟ್ಟುವ ಕೆಲಸ ಮಾಡಲಿಲ್ಲ.) ಈಗಿನ ಶ್ರೀಗಳು ಈ ದಾಟಿಯಲ್ಲಿ ಚಿಂತಿಸಬಹುದು. ಓರ್ವ ಮಹಿಳೆಯ ಕೊರಳೊಳಗಣ ತಾಳಿ ಮತ್ತು ಕಾಲುಂಗರ ಆಕೆ ಗೃಹಿಣಿ ಎಂಬುದನ್ನು ದೃಢೀಕರಿಸುವಂತೆ ಸುತ್ತೂರು ಶ್ರೀಗಳ ಕೊರಳೊಳಗಣ ಇಷ್ಟಲಿಂಗ ಅವರು ಲಿಂಗಾಯತ ಧರ್ಮೀಯರು ಎಂಬುದನ್ನು ದೃಢೀಕರಿಸುತ್ತದೆ. ವಾದಕ್ಕಾಗಿ ಕಾಳಾಮುಖ ಶೈವ ಸಂಪ್ರದಾಯದಿಂದ ಬಂದವರು ಎಂದೇ ನಂಬೋಣ. ಶೈವ ಸಂಪ್ರದಾಯದ ಪ್ರಕಾರ ಸಹ ಹೋಮ - ಹವನ - ಯಜ್ಞ ಮಾಡಬಾರದು. ಯೋಗಿರಾಜ ಶಿವನು ಯಜ್ಞ ವಿರೋಧಿ; ಹಿಂದೆ ಆರ್ಯರು ಹೋಮ - ಯಜ್ಞಗಳನ್ನು ಮಾಡುವಾಗ ವಿಭೂತಿಧಾರಕರಾದ ರಾಕ್ಷಸರು (ಅವರು ರಾಕ್ಷಸರಲ್ಲ ಶಿವಭಕ್ತರು) ಹೋಮ - ಯಜ್ಞ ಕುಂಡದಲ್ಲಿ ನೀರನ್ನು ಹಾಕುತ್ತಿದ್ದರು. ವೀರಭದ್ರ ದಕ್ಷಯಜ್ಞವನ್ನು ನಾಶಪಡಿಸಿ ದಕ್ಷ ಬ್ರಹ್ಮನನ್ನು ಶಿಕ್ಷಿಸಿದ. ಶೈವ ಸಂಪ್ರದಾಯದ ಪ್ರಕಾರ ಸಹ ಹೋಮ - ಯಜ್ಞಾದಿಗಳನ್ನು ಮಾಡಬಾರದು. ಇನ್ನು ಧರ್ಮಗುರು ಬಸವಣ್ಣನವರು ಪೂರ್ತಿ ವಿರೋಧಿಗಳು. ಮಠಾಧೀಶರು, ಗುರುಗಳೇ ನಾರಾಯಣ ಸ್ವಾಮಿ ದೇವಾಲಯದ ಜೀರ್ಣೋದ್ಧಾರ, ಸಂಪ್ರೋಕ್ಷಣೆಗೆ ಮುಂದಾದರೆ ಇನ್ನು ಸಾಮಾನ್ಯ ಲಿಂಗಾಯತರು ಯಾವ ದಾರಿ ಹಿಡಿಯಬೇಕು?

ಸರ್ಕಾರಿ ಅಧಿಕಾರಿಗಳ ಒತ್ತಡ ಬಂದರೂ ಅದನ್ನು ಉಪಾಯವಾಗಿ ತಪ್ಪಿಸಿಕೊಳ್ಳಬೇಕು. ಶರಣ ಸಂಪ್ರದಾಯದ ಸುತ್ತೂರಿನ ಜಾತ್ರಾ ಮಹೋತ್ಸವದಲ್ಲಿ ನಾರಾಯಣ ಸ್ವಾಮಿ ದೇವಾಲಯ ಸಂಪ್ರೋಕ್ಷಣೆಯ ವಿವರ ಪ್ರಕಟಿಸುವ ಬದಲು ಅದರ ಆಹ್ವಾನ ಪತ್ರ ಪ್ರತ್ಯೇಕವಾಗಿ ಪ್ರಕಟಿಸಬಹುದಿತ್ತು. ಪ್ರಶ್ನಿಸುವವರು ಯಾರೂ ಇಲ್ಲ ಎಂಬ ಅತೀವ ಆತ್ಮವಿಶ್ವಾಸ (ಅಹಂಭಾವ) ದೊಡನೆ ದೊಡ್ಡ ದೊಡ್ಡ ಮಠಾಧೀಶರು ತನ್ನ ಧರ್ಮಕ್ಕೆ ವಿರುದ್ಧವಾಗಿ ನಡೆಯುವುದು ಸೂಕ್ತವಲ್ಲ. ತತ್ತ್ವವನ್ನು ಪಾಲಿಸಲು ಆಸಕ್ತಿಯೇ ಇಲ್ಲದ ಮೇಲೆ ಇನ್ನು ಶರಣ ಸಾಹಿತ್ಯ ಪರಿಷತ್ ಸಮ್ಮೇಳನಗಳೇಕೆ? ಕೇವಲ ಕೀರ್ತಿಗಾಗಿಯೋ, ವ್ಯವಹಾರಕ್ಕಾಗಿಯೋ?!

- ಗಾಂಧೀಜಿ

18-04-2006 ಸಂಯುಕ್ತ ಕರ್ನಾಟಕ

ರಾಮ-ಕೃಷ್ಣರನ್ನು ನಂಬದವನು ಹಿಂದುವಲ್ಲ

ಗಾಂಧೀಜಿಯಲ್ಲಿ ಜನರಿಗೆ ಸಲಿಗೆ ಇದ್ದುದು ಒಂದೆಡೆ. ತಮ್ಮ ಸಂದೇಹಕ್ಕೆ ಅವರ ಖಚಿತ ಉತ್ತರ ಪಡೆಯುವ ಆಸಕ್ತಿ ಇದ್ದುದು ಒಂದೆಡೆ-ಹಾಗಾಗಿ ಅವರನ್ನು ಜನಕೇಳದ ಪ್ರಶ್ನೆಗಳಿಲ್ಲ! ಈ ಸಾರಿಯ ಪ್ರಶ್ನೆ ಒಬ್ಬ ಯುವಕ - ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದವನಿಂದ. ಅವನು ಸಾಮಾನ್ಯವಾಗಿ ಎಲ್ಲರೂ ಮಾಡುವ ಪೂಜಾ ವಿಧಾನವನ್ನು ಟೀಕಿಸುತ್ತಾ ರಾಮ-ಕೃಷ್ಣರ ಪೂಜೆ ಮಾಡುವುದನ್ನೂ ಅಲ್ಲಗಳೆಯುತ್ತಾ "ಇದೆಂಥ ಪೂಜೆ? ರಾಮ-ಕೃಷ್ಣರೇ ಆದರೂ ಕಲ್ಲಲ್ಲವೇ? ಕಲ್ಲಿನ ಮೇಲೆ ಎಂಥ ಭಕ್ತಿ ಬಂದೀತು? ನಾನು ನಿಮ್ಮನ್ನೇ ದೇವರ ಅವತಾರ ಎಂದು ಭಾವಿಸಿ ನಿಮ್ಮನ್ನೇ ಪೂಜಿಸುವಂತೆ ಹೇಳುತ್ತೇನೆ, ಆಗದೇ?" ಅಲ್ಲಿ ಸೇರಿದ್ದವರು ಸಿಟ್ಟಿಗೆದ್ದರು. ಗಾಂಧೀಜಿ ಮಾತ್ರ ಶಾಂತವಾಗಿ "ರಾಮ-ಕೃಷ್ಣರು ನನಗೆ ಆಶಾದಾಯಕ. ರಾಮ-ಕೃಷ್ಣರ ಖಂಡನೆ ಹಿಂದೂಧರ್ಮಕ್ಕೆ ಎಸಗುವ ದ್ರೋಹ, ಹಿಂಸೆ; ಯುಗಯುಗಾಂತರದ ಹಿಂದೆ ಬದುಕಿದ್ದ ರಾಮ-ಕೃಷ್ಣರನ್ನು ಪೂಜಿಸುವವರು ಮೂರ್ಖರು ಎಂದು ತಿಳಿಯಬೇಡ. ನಾನು ಪೂಜಿಸುವ ರಾಮ-ಕೃಷ್ಣ ಎಂದಿಗೂ ಇದ್ದಾರೆ. ಎಂದೆಂದಿಗೂ ಇರುವವರು. ನನ್ನ ಅಂತರಂಗದ ವಿಚಾರವೆಲ್ಲ ಅವರಿಗೆ ಗೊತ್ತು. ಸದಾ ಸನ್ಮಾರ್ಗ ತೋರಿ ನನ್ನನ್ನು ತಿದ್ದುತ್ತಲೇ ಇರುತ್ತಾರೆ. ನನ್ನ ಎಡ-ಬಲದಲ್ಲಿ ಇರುವ ರಾಮ-ಕೃಷ್ಣರ ಬಗ್ಗೆ ನನಗೆ ನಂಬಿಕೆ ಇಲ್ಲದಿದ್ದಲ್ಲಿ ನನಗೆ ಈವರೆಗೆ ಹುಚ್ಚೇ ಹಿಡಿಯುತ್ತಿತ್ತು....." ಈಗ ಅಲ್ಲಿಯೇ ಇದ್ದ ರಾಜಾಜಿ ಹೇಳಿದರು "ನೀವು ಈ ರೀತಿ ವಿವರಣೆ ಕೊಟ್ಟರೆ ಅವನು ನಿಮ್ಮನ್ನು ಅವತಾರ ಎಂದು ಇನ್ನೂ ಬಲವಾಗಿ ಭಾವಿಸುತ್ತಾನಷ್ಟೆ!" ಕೂಡಲೆ ಗಾಂಧೀಜಿ, "ನಾನು ಮಣ್ಣಿನ ಮೂರ್ತಿ. ನಾನು ಚೂರು ಚೂರಾಗುವವನು. ಎಂದಾದರೂ ಒಂದು ದಿನ ಸಾಯುವವನು. ಆಗ ನಿನ್ನ ದೇವರು ಮಾಯವಾಗುತ್ತಾನೆ ಅಲ್ಲವೇ?" ಎಂದರು ತರುಣನ ಕಡೆ ತಿರುಗಿ. "ಆದರೆ ಕ್ರೈಸ್ತರು ಪೂಜಿಸುವ ಕ್ರಿಸ್ತನೂ ಸಾಯುತ್ತಾನಲ್ಲ? ಹಾಗೆಯೇ ನೀವೂ?" ಕ್ರೈಸ್ತರು ಪೂಜಿಸುವ ಕ್ರಿಸ್ತ ಪುನರುತ್ಥಾನಗೊಂಡವನು. ಅದೇ ರೀತಿ ನಮ್ಮ ರಾಮ-ಕೃಷ್ಣರು ಆಗಲೂ ಇದ್ದರು. ಈಗಲೂ ಇದ್ದಾರೆ. ಅನಂತ ಕಾಲದವರೆಗೂ ಇರುವವರು. ಅದರಿಂದಲೇ ಅವರನ್ನು ಪೂಜಿಸುವವರು ನಿನಗಿಂತ ನನಗಿಂತಲೂ ಜೀವಂತವಾಗಿರುವ ರಾಮ-ಕೃಷ್ಣರನ್ನು ಪೂಜಿಸುತ್ತಾರೆ. ರಾಮ-ಕೃಷ್ಣರನ್ನು ದೇವರು ಎಂದು ನಂಬದವನು ಹಿಂದುವೇ ಅಲ್ಲ. ಇದು ಖಂಡಿತ..... ಶಂಬೂಕನನ್ನು ಕೊಂದ ರಾಮನನ್ನೂ, ವಿಷ್ಟೋ ಕಥೆಗಳಿಗೆ ಆಶ್ರಯನಾದ ಕೃಷ್ಣನನ್ನೂ ನಾನು ಪೂಜಿಸುತ್ತೇನೆಯೇ ಎಂದು ಕೇಳಬೇಡ. ಸತ್ಯ ಶಿವ - ಪರಿಪೂರ್ಣವಾದ ಎಲ್ಲದರ ಅವತಾರವಾದ ಸಜೀವ ರಾಮ-ಕೃಷ್ಣರನ್ನು ನಾನು ಪೂಜಿಸುತ್ತೇನೆ. ರಾಮ-ಕೃಷ್ಣ ಎಂಬ ಆದರ್ಶಗಳು ನಿನಗೆ ಅಸಹ್ಯವಾಗಿದ್ದರೆ ಅದನ್ನು ಸಮರ್ಥಿಸುವ ಯಾವ ಹಿಂದುವಿಗಾದರೂ ಹಿಂದು ಧರ್ಮವನ್ನು ಬಿಡು ಎಂದು ನೀನು ಹೇಳಿಕೊಡು."

-ಮತ್ತೂರು ಕೃಷ್ಣಮೂರ್ತಿ.

- ಮಾತಾಜಿ

4. ಲಿಂಗಾಯತರು ಹಿಂದುಗಳಲ್ಲ

ಏಕೆಂದರೆ ರಾಮ-ಕೃಷ್ಣರನ್ನು ದೇವರೆನ್ನುವುದಿಲ್ಲ.

ಮಹಾತ್ಮಾ ಗಾಂಧೀಜಿ ಜಗತ್ತು ಕಂಡ ಒಬ್ಬ ಶ್ರೇಷ್ಠ ಮಾನವ. ಆದರೆ ಪರಿಪೂರ್ಣ ಮಾನವರಲ್ಲ. ಅವರ ಕೆಲವು ವಿಚಾರಗಳು, ನಂಬಿಕೆಗಳು ಬಹಳ ಬಾಲಿಶ ಎನಿಸುತ್ತವೆ. ರಾಷ್ಟ್ರ ಪ್ರೇಮ, ಸ್ವಾತಂತ್ರ್ಯ ಹೋರಾಟ, ಸಮಾಜ ಸೇವೆ, ಮಾನವೀಯತೆ - ಈ ಎಲ್ಲ ವಿಷಯಗಳಲ್ಲಿ ಅವರು ಅಪ್ರತಿಮರು. ಆದರೆ ವರ್ಣಾಶ್ರಮ ವ್ಯವಸ್ಥೆಯಲ್ಲಿ ನಂಬಿಕೆ, ರಾಮಕೃಷ್ಣರ ಬಗ್ಗೆ ಇದ್ದ ಚಿಂತನಶೈಲಿ ಇತ್ಯಾದಿ ವಿಷಯದಲ್ಲಿ ಅವರು ಸಾಮಾನ್ಯರೇ ಸರಿ. ಇವು ಅವರ ವ್ಯಕ್ತಿತ್ವದ ದುರ್ಬಲ ಅಂಶಗಳು.

"ರಾಮ-ಕೃಷ್ಣರ ಖಂಡನೆ ಹಿಂದೂ ಧರ್ಮಕ್ಕೆ ಎಸಗುವ ದ್ರೋಹ, ರಾಮಕೃಷ್ಣರನ್ನು ನಂಬದವನು ಹಿಂದುವೇ ಅಲ್ಲ," ಎಂದು ಗಾಂಧೀಜಿ ಹೇಳುವುದಾದರೆ ಲಿಂಗಾಯತರು ಖಂಡಿತ ಹಿಂದುಗಳಲ್ಲ;

ಏಕೆಂದರೆ (1) ಹುಟ್ಟು - ಸಾವು ಹೊಂದಿದ ಯಾವುದೇ ವ್ಯಕ್ತಿಯನ್ನು ಬಸವಾದಿ ಪ್ರಮಥರು ದೇವರು ಎನ್ನುವುದಿಲ್ಲ. ರಾಮ, ಕೃಷ್ಣ, ಶಿವ - ಈ ಎಲ್ಲರೂ ಐತಿಹಾಸಿಕ ವ್ಯಕ್ತಿಗಳೇ ವಿನಾ ಸೃಷ್ಟಿಕರ್ತರಲ್ಲ. (2) ವ್ಯಕ್ತಿತ್ವ ಮತ್ತು ಆದರ್ಶಗಳ ದೃಷ್ಟಿಯಲ್ಲಿ ನೋಡಿದಾಗ ಈ ಉಭಯತರೂ ದೇವರು ಎನ್ನಿಸಿಕೊಳ್ಳುವುದಿರಲಿ ಮಹಾತ್ಮರ ವರ್ಗಕ್ಕೆ ಸಹ ಸೇರುವುದಿಲ್ಲ ಜಗತ್ತಿನ ವಿವಿಧ ಧರ್ಮಗಳವರನ್ನು ನೋಡಿದಾಗ ಸೇಶ್ವರವಾದಿ (theistic) ಧರ್ಮಗಳೆಲ್ಲವು ಸೃಷ್ಟಿಕರ್ತನನ್ನು ನಂಬಿರುವುದು ಮಾತ್ರವಲ್ಲ ಅವನು ನಿರಾಕಾರ, ನಿರ್ಗುಣ ಎಂದು ಒಪ್ಪಿವೆ. ಹಿಂದು ಧರ್ಮದ ಶಾಸ್ತ್ರಗಳಾದ ವೇದ, ಉಪನಿಷತ್ತು, ಬ್ರಹ್ಮ ಸೂತ್ರಗಳು ದೇವರು ನಿರಾಕಾರ, ಸರ್ವವ್ಯಾಪಿ, ಸರ್ವಶಕ್ತ ಎಂದೇ ಹೇಳುತ್ತದೆ. ಆದರೆ ಆಚರಣೆಯಲ್ಲಿ ಮಾತ್ರ ನೂರಾರು ದೇವತೆಗಳನ್ನು ಕಲ್ಪಿಸಿಕೊಂಡು ಪೂಜಿಸಲಾಗುತ್ತಿವೆ. ಪಂಚ ಭೂತಗಳು, ಪ್ರೇತಾತ್ಮಗಳು, ಗಿಡಮರಗಳು, ನದಿ-ನದಗಳು, ಪ್ರಾಣಿಗಳು, ಕ್ಷುದ್ರ ದೇವತೆಗಳು, ಮಹಾತ್ಮರು - ಹೀಗೆ ಲೆಕ್ಕವಿಲ್ಲದಷ್ಟು ವಸ್ತುಗಳನ್ನು ಪೂಜಿಸಲಾಗುತ್ತಿದೆ. ಸಮನ್ವಯತೆಯ ಹೆಸರಿನಲ್ಲಿ ಸಮರ್ಥಿಸಿಕೊಳ್ಳಲಾಗುತ್ತಿದೆ ಕೂಡ'. ''ಎಲ್ಲದರಲ್ಲೂ ಇಂಥ (ಮೂಢ) ಪೂಜಕರು ದೇವರನ್ನು ಕಾಣುತ್ತಾರೆ'' ಎಂದು ಸಮರ್ಥಿಸಿ ಕೊಳ್ಳಲಾಗುತ್ತದೆ. ಇಂಥ ಮೂಢ ಪೂಜಕರನ್ನು ನೋಡಿದಾಗ, ಮಾತನಾಡಿಸಿದಾಗ ಅವರು ಎಷ್ಟು ಅಜ್ಞಾನಿಗಳಿರುತ್ತಾರೆ; ಅವರಿಗೆ ದೇವರ ಸ್ವರೂಪ ಆತ್ಮಸ್ವರೂಪ ಏನೂ ತಿಳಿದಿರುವುದಿಲ್ಲ.

ಅಜ್ಞಾನಿ ಜನರು ಮೂಢ ಭಕ್ತಿಯಿಂದ ಕ್ಷುದ್ರ ದೇವತೆಗಳನ್ನು ಆರಾಧಿಸುತ್ತ ಪ್ರಾಣಿ ಬಲಿ, ಮಾಂಸಾಹಾರ ಮದ್ಯಪಾನ ಮಾಡುತ್ತಿದ್ದರೆ ಅವರನ್ನು ಆ ಸ್ಥಿತಿಯಿಂದ ಮೇಲೆತ್ತಿ ಕ್ಷುದ್ರಾಚರಣೆಗಳನ್ನು ಬಿಡಿಸಿ ಅವರಿಗೆ ಸುಸಂಸ್ಕೃತವಾದ ಅಧ್ಯಾತ್ಮ ವಿದ್ಯೆಯನ್ನು ಹೇಳಿಕೊಡಬೇಕೆಂಬ ಆಕಾಂಕ್ಷೆ ತಾಳದೆ, ''ಎಲ್ಲ ನದಿಗಳು ಸಮುದ್ರವನ್ನು ಸೇರುವಂತೆ ಎಲ್ಲ ರೀತಿಯ ಉಪಾಸನೆಯೂ ದೇವರನ್ನೇ ಸೇರುವುದು'' ಎಂದು (ಭಗವದ್ಗೀತೆ) ಹೇಳುತ್ತಾ ಬಹು ಸಂಖ್ಯಾತರನ್ನು ಅಜ್ಞಾನದಲ್ಲಿ, ಕುಸಂಸ್ಕಾರದಲ್ಲಿ ಇಡುತ್ತಾ ಬರಲಾಯಿತು. ಮಣ್ಣು ತಿನ್ನುತ್ತಿದ್ದರೆ ಆ ಮಗುವನ್ನು ಗದರಿಸಿ ಮಣ್ಣು ತಿನ್ನುವುದು ಬಿಡಿಸಿ ಹಣ್ಣು ತಿನ್ನಲು ಕಲಿಸುವುದು ತಾಯಿ ತಂದೆಯರ ಕರ್ತವ್ಯ. ಹಾಗೆ ಮಾಡದೆ ಮಗುವಿಗೆ ಸ್ವಾತಂತ್ರ್ಯ ಕೊಡಲಾಗಿದೆ; ಅದು ಮಣ್ಣನ್ನೇ ತಿಂದರೂ ಅದೂ ಆಹಾರವೇ ಎನ್ನುವುದು ಎಂಥಾ ಕ್ರೂರವಾದ ಸಂಗತಿಯಲ್ಲವೆ?

ಹಿಂದು ಸಮುದಾಯದಲ್ಲಿ ದೇವರ ಆರಾಧನೆಗಿಂತಲೂ ಅನ್ಯ ದೈವಗಳ ಉಪಾಸನೆಯೇ ಜಾಸ್ತಿ. ವಿವಿಧ ಆಕಾರಗಳನ್ನು ಕಲ್ಪಿಸಿ ಪೂಜಿಸುವ (Personification of God) ಮೂರ್ತೀಕರಣ ಒಂದು ಕಡೆಯಾದರೆ ಮಹಾತ್ಮರನ್ನು ದೈವೀಕರಿಸುವ ಪ್ರಯತ್ನ ಇನ್ನೊಂದು ಕಡೆ. ಕ್ಷುದ್ರ ದೈವಾರಾಧನೆಗಿಂತಲೂ ಮಹಾತ್ಮರ ದೈವೀಕರಣ ಸ್ವಲ್ಪ ಪರವಾಗಿಲ್ಲ. ಏಕೆಂದರೆ ಮಹಾತ್ಮರು ಕೆಲವೊಂದು ಆದರ್ಶಗಳನ್ನು ರೂಢಿಸಿ ಕೊಂಡಿರುತ್ತಾರೆ; ಜಗತ್ತಿಗೆ ಸಂದೇಶವನ್ನು ನೀಡಿರುತ್ತಾರೆ.

ಉತ್ತರ ಭಾರತದಲ್ಲಿ ಅದು ಆರ್ಯಾವರ್ತವಾದ ಕಾರಣ ವೈಷ್ಣವ ಮತದ ಪ್ರಭಾವ ಜಾಸ್ತಿ. ರಾಮಾಯಣದ ಶ್ರೀ ರಾಮ, ಮಹಾಭಾರತದ ಶ್ರೀ ಕೃಷ್ಣ ಪ್ರಧಾನ ದೇವತೆಗಳು. ರಾಮಾಯಣ - ಮಹಾಭಾರತಗಳೆರಡೂ ಐತಿಹಾಸಿಕ ಕಥಾ ಪ್ರಸಂಗಗಳು ಎಂದು ತಿಳಿಯುವುದರಲ್ಲಿ ತಪ್ಪೇನೂ ಇಲ್ಲ. ಹೀಗಾಗಿ ರಾಮ - ಕೃಷ್ಣರು ಐತಿಹಾಸಿಕ ವ್ಯಕ್ತಿಗಳು ಎಂದು ಊಹಿಸುವುದರಲ್ಲೂ ತಪ್ಪಿಲ್ಲ. ಆದರೆ ಅವರ ಜೀವನ ಎಷ್ಟರ ಮಟ್ಟಿಗೆ ಆದರ್ಶವಾಗಿವೆ? ಅನುಕರಣೀಯವಾಗಿವೆಯೆ? ಎಂದು ಚಿಂತಿಸುವುದರಲ್ಲಿ ತಪ್ಪೇನೂ ಇಲ್ಲ. ಅವರನ್ನು ದೈವತ್ವಕ್ಕೆ ಏರಿಸುವ ಮೊದಲು ಮಹಾತ್ಮರ ಪಟ್ಟವನ್ನಾದರೂ ಕೊಡಲು ಸಾಧ್ಯವೇ ಎಂಬುದನ್ನೂ ಅವಲೋಕಿಸಬೇಕು. ಹಿಂದುಗಳಿಗೆ ಅದರಲ್ಲೂ ವೈಷ್ಣವರಿಗೆ ಶ್ರೀ ರಾಮ ಮತ್ತು ಶ್ರೀ ಕೃಷ್ಣರ ಬಗ್ಗೆ ಅತೀವ ಅಭಿಮಾನ. ಹೀಗಾಗಿ ಅವರು ಉಭಯತರೂ ಅವರ ಅನುಯಾಯಿಗಳಿಗೆ ಪರಮ ಆರಾಧ್ಯರು.

ಶ್ರೀರಾಮನು ಪಿತೃವಾಕ್ಯ ಪರಿಪಾಲನೆ ಮಾಡಿದ್ದು ಒಂದು ಬಹು ದೊಡ್ಡ ಆದರ್ಶವೆಂಬಂತೆ ಬಿಂಬಿಸಲಾಗುತ್ತದೆ. ಬುದ್ಧ, ಬಸವಣ್ಣ ಮುಂತಾದವರು ತಂದೆಯ ಮಾತನ್ನು ಮೀರಿ ಹೊರನಡೆದು ಸತ್ಯ ಪ್ರತಿಪಾದನೆ ಮಾಡಿದರು. ತಂದೆಯ ಮಾತನ್ನು ಮೀರಬಾರದೆಂದು ಕುಳಿತಿದ್ದರೆ ಜಗತ್ತಿಗೆ ಎರಡು ಹೊಸ ಧರ್ಮಗಳು ಸಿಕ್ಕುತ್ತಿರಲಿಲ್ಲ. ತಾಯಿ ನಿಸ್ಸಹಾಯಕ ಪರಿಸ್ಥಿತಿಯಲ್ಲಿ ಇದ್ದರೂ ಸ್ವಾಮಿ ವಿವೇಕಾನಂದರು ಉದಾತ್ತ ಉದ್ದೇಶ ಹೊಂದಿ ಮನೆ ಬಿಟ್ಟರು. ತಾಯಿಯ ಸಮಾಧಾನಕ್ಕಾಗಿ ಅವರು ಮನೆಯಲ್ಲೇ ಉಳಿದಿದ್ದರೆ ಒಬ್ಬ ಮಹಾನ್ ತ್ಯಾಗಿಯ ಕೊರತೆ ಉಂಟಾಗುತ್ತಿತ್ತು.

ಪತ್ನಿ ನೀಲಾಂಬಿಕೆಯು, ಕಳ್ಳನ ಪ್ರಸಂಗದಲ್ಲಿ ಕಳ್ಳಾ ಎಂದು ಚೀರಿಕೊಂಡಾಗ ಭಟರು ಅವನನ್ನು ಹಿಡಿದು ತಂದಾಗ ಅವನು ಕಳ್ಳನಲ್ಲ ಪರೀಕ್ಷಿಸಲು ಬಂದ ಸಂಗಮನಾಥ ಎಂದ ಗುರುಬಸವಣ್ಣನವರು ಪತ್ನಿಗೆ ಬುದ್ಧಿ

ಹೇಳಿದರು? ಅದೇ ಜಿಂಕೆಗಾಗಿ ಪತ್ನಿ ಸೀತೆಯು ಆಸೆ ಪಟ್ಟಾಗ ಕಾಡಿನಲ್ಲಿ ಸ್ವಚ್ಛಂದವಾಗಿ ವಿಹರಿಸುವ ಅದನ್ನು ಬಯಸುವುದೇಕೆ ಎಂದು ಬುದ್ಧಿಯನ್ನು ಶ್ರೀರಾಮನು ಹೇಳಲಿಲ್ಲ. ಜಿಂಕೆ ಸಿಗದಿದ್ದಾಗ ವಾಪಸ್ಸು ಬರದೆ ಅದನ್ನು ಕೊಂದೇ ಬಿಟ್ಟನು.

ಶಂಭುಕನೆಂಬ ಶೂದ್ರನು ತಪಸ್ಸು ಮಾಡಿದ್ದರಿಂದ ಅಚಾತುರ್ಯ, ಧರ್ಮ ನಾಶ ಸಂಭವಿಸುತ್ತಿದೆ ಎಂದು ಓರ್ವ ಬ್ರಾಹ್ಮಣನು ದೂರಿದಾಗ ಶ್ರೀರಾಮನು ಹೋಗಿ ತಪಸ್ಸು ಮಾಡುತ್ತಿದ್ದ ಶಂಭುಕನನ್ನು ಬಾಣಬಿಟ್ಟು ವಧಿಸಿದ. ಗುರುಬಸವಣ್ಣನವರು ಶೂದ್ರರು, ದಲಿತರು ಮುಂತಾದ ಎಲ್ಲರಿಗೂ ಧರ್ಮಸಂಸ್ಕಾರ ನೀಡಿ ಅವರನ್ನೆಲ್ಲ ಪ್ರಾತಃ ಸ್ಮರಣೀಯರನ್ನಾಗಿ ಮಾಡಿದರು.

ಶೂರ್ಪನಖಿ - ಚಕ್ರವರ್ತಿ ರಾವಣನ ತಂಗಿಯು ಸುಂದರ ಪುರುಷರಾಗಿದ್ದ ರಾಮ, ಲಕ್ಷ್ಮಣರನ್ನು ಕಂಡು ಪ್ರೇಮಿಸಿ ವಿವಾಹವಾಗಲು ಬಯಸಿದಾಗ ತಮ್ಮ ನಿಜ ಸ್ಥಿತಿಯನ್ನು ಹೇಳಬಹುದಿತ್ತು. ಅದು ಬಿಟ್ಟು ಆ ಯುವತಿಯ ಮೊಲೆ ಮೂಗು ಕತ್ತರಿಸಿ ವಿರೂಪಗೊಳಿಸಿದುದು ಯಾವ ಧೀಮಂತ ಪುರುಷರ ಲಕ್ಷಣವಾದೀತು? ಇಂದಿನ ಕಾನೂನಿನ ಪ್ರಕಾರ ಅದು ಶಿಕ್ಷಾರ್ಹ ಅಪರಾಧವಲ್ಲವೆ? ಅದಕ್ಕಾಗಿಯೇ ಆಸಿಡ್ ಹಾಕಿ ಪ್ರೇಮಿಯು ಯಾರಾದರೂ ಯುವತಿಯನ್ನು ವಿರೂಪಗೊಳಿಸಿದರೆ ಅವನಿಗೆ ಶಿಕ್ಷೆ ನೀಡಲಾಗುವುದು.

ಶೂರ್ಪನಖಿಯನ್ನು ಅವಮಾನಗೊಳಿಸಿ, ಲಂಕಾ ಚಕ್ರಾಧಿಪತಿ ರಾವಣನನ್ನು ಕೆರಳಿಸಿ ಅವನು ಸೀತೆಯನ್ನು ಅಪಹರಿಸುವಂತೆ ಮಾಡಿ ಕಡೆಗೆ ರಾಮ ಲಕ್ಷ್ಮಣರು ಯುದ್ಧ ಮಾಡಿ ಒಂದು ಸುಂದರ ರಾಜ್ಯವನ್ನೇ ನಾಶ ಮಾಡಿದ್ದು ಯಾವ ಪುರುಷಾರ್ಥಕ್ಕೆ?! ಅಷ್ಟೆಲ್ಲ ಅನಾಹುತ ಮಾಡಿ ಬಿಡಿಸಿಕೊಂಡು ಬಂದ ಸೀತೆಯನ್ನು ತುಂಬು ಗರ್ಭಿಣಿ ಇರುವಾಗ ಯಾವನೋ ಅಜ್ಞಾನಿ ಅಗಸ ಒಂದು ಕುಹಕದ ನುಡಿ ಆಡಿದ ಎಂದು ನಿರ್ದಯೆಯಿಂದ ಕಾಡಿಗೆ ಅಟ್ಟಿದ ಶ್ರೀರಾಮನನ್ನು ಮಾನವೀಯ ಭಾವನೆಗಳಿದ್ದವರು ಕ್ಷಮಿಸಲು ಸಾಧ್ಯವೆ? ರಾಮನ ಈ ಕ್ರಿಯೆಯನ್ನು ಸಮರ್ಥಿಸಿಕೊಳ್ಳುವವರು ಹೇಳುತ್ತಾರೆ. ''ರಾಮನು ಆದರ್ಶ ರಾಜ. ಒಬ್ಬ ಸಾಮಾನ್ಯ ಪ್ರಜೆಯ ಮಾತಿಗೂ ಬೆಲೆ ಕೊಡುತ್ತಿದ್ದ.'' ಇದು ನಿಜವೇ ಆಗಿದ್ದರೆ ರಾಮನು ಕಾಡಿಗೆ ಹೋದಾಗ ಸೀತೆಯು ಹಿಂಬಾಲಿಸಿದಂತೆ, ಸೀತೆಯನ್ನು ಕಾಡಿಗೆ ಅಟ್ಟುವಾಗ ತಾನು ರಕ್ಷಕನಾಗಿ ಜೊತೆಗೆ ಹೋಗಿದ್ದರೆ ರಾಮನ ಹಿಂದಿನ ಎಲ್ಲ ತಪ್ಪುಗಳನ್ನು ಕ್ಷಮಿಸಬಹುದಿತ್ತು. ಚಿಂತನೆಗೆ ಅವಕಾಶಕೊಡದಂತೆ ರಾಮನನ್ನು ಭಗವಾನನನ್ನಾಗಿ ಮಾಡಿ ಭಜನೆ ಮಾಡಿ ಮೆರೆಸಲಾಗುತ್ತಿದೆ.

ಇಂದು ಲೌಕಿಕರು ಅನೇಕ ಮಾತುಗಳನ್ನು ಎದುರಿಸಬೇಕಾಗುತ್ತದೆ. ಕುಟುಂಬದಲ್ಲಿ, ಸಮಾಜದಲ್ಲಿ ಹಲವಾರು ನಿಂದೆಗಳು, ಚಾಡಿಗಳು, ಪಿಸುಣ ನುಡಿಗಳು ಸುಳಿಯುತ್ತವೆ. ಅವೆಲ್ಲಕ್ಕೆ ಕಿವಿಗೊಡುತ್ತಿದ್ದರೆ ನೆಮ್ಮದಿಯಿಂದ ಬಾಳುವೆ ಮಾಡಲೇ ಸಾಧ್ಯವಿಲ್ಲ. ಸೀತೆಯನ್ನು ಕರೆತರುವ ಮೊದಲು ಅಗ್ನಿ ಪರೀಕ್ಷೆಗೆ ಒಳಪಡಿಸಲಾಗಿತ್ತಲ್ಲವೆ? ಅಂದ ಬಳಿಕ ಶ್ರೀ ರಾಮನು ಪುನಃ ಅಗಸನ ಪಿಸುಣ ಮಾತಿಗೆ ಏಕೆ ಬೆಲೆ ಕೊಡಬೇಕಿತ್ತು? ಒಬ್ಬ ಸಾಮಾನ್ಯ ಗಂಡಸಿಗೂ ಗೊತ್ತಾಗುತ್ತದೆ ತನ್ನ ಹೆಂಡತಿ ತನಗೆ ಎಷ್ಟು ನಿಷ್ಠಳಾಗಿದ್ದಾಳೆ ಎಂಬುದು. ಅಂದಾಗ ಶ್ರೀ ರಾಮನಿಗೆ ಸೀತೆಯನ್ನು ಅರ್ಥಮಾಡಿಕೊಳ್ಳಲು ಆಗಲಿಲ್ಲವೆ?

ಶ್ರೀಕೃಷ್ಣನು ಓರ್ವ ಚತುರ ರಾಜಕಾರಣಿ ಎಂಬುದರಲ್ಲಿ ಎರಡು ಮಾತಿಲ್ಲ. ಎಲ್ಲ ಯುದ್ಧ ನೀತಿಯನ್ನು ಮೀರಿಯಾದರೂ ಪಾಂಡವರನ್ನು ಗೆಲ್ಲಿಸಿದನು. ಆದರೆ ಆತನಲ್ಲಿ ಮಹಾತ್ಮರ ಲಕ್ಷಣಗಳು ಏನಿವೆ ಎಂದು ಹುಡುಕಿದರೆ ಸೋಲುವುದೇ ಹೆಚ್ಚು. ಬಾಲ್ಯದಲ್ಲಿ ಏನೋ ತುಂಟ ಮಗುವಾಗಿದ್ದ, ಮಕ್ಕಳ ಬಾಲ ಲೀಲೆಗಳು ಜನರಿಗೆ ಪ್ರೀತಿ ತರುತ್ತವೆ. ಆದರೆ ಮಗುವನ್ನು ಆಡಿಸಿದ್ದು, ಅವನ ತುಂಟಾಟದಿಂದ ತೊಂದರೆ ಕೊಟ್ಟರೂ ಬೇಸತ್ತ ಇತರ ಗೋಪಿಯರು ಬಂದು ಸಾಕು ತಾಯಿ ಯಶೋಧೆಗೆ ದೂರು ಕೊಡುವುದು. ಇದನ್ನು ಪುರಂದರದಾಸರಾದಿಯಾಗಿ ಅನೇಕ ವೈಷ್ಣವರು ಹಾಡುವುದು ವಚನ ಸಾಹಿತ್ಯದಂತಹ ಪ್ರೌಢ ಸಾಹಿತ್ಯ ಓದಿದವರಿಗೆ ಬಾಲಿಶ ಎನಿಸುತ್ತದೆ. ಬಾಲ್ಯಾವಸ್ಥೆ ದಾಟಿ ಯೌವ್ವನಾವಸ್ಥೆಗೆ ಬಂದಾಗ ಸ್ನಾನ ಮಾಡುವ ಹೆಣ್ಣು ಮಕ್ಕಳ ಬಟ್ಟೆ ಮುಚ್ಚಿಡುವುದು. ಅವರು ಬಟ್ಟೆಗಾಗಿ ಗೋಗರೆಯುವುದು ಸಹ ಅಷ್ಟೇ ಅಸಹ್ಯ ಹುಟ್ಟಿಸುತ್ತದೆ. ರಾಧೆ ಓರ್ವ ವಿವಾಹಿತ ಗೃಹಿಣಿ. ಮದುವೆಯಾದ ಗಂಡನಿಗೆ ನಿದ್ದೆ ಬರುವುದನ್ನು ಕಾಯ್ದು ನಂತರ ಹೋಗಿ ಕೃಷ್ಣನ ಜೊತೆ ಸರಸವಾಡುವುದು ಎಷ್ಟು ಅಸಹ್ಯ. ಮದುವೆಯಾದ ರುಕ್ಮಿಣಿ, ಸತ್ಯಭಾಮ, ಜಾಂಬವತಿ ಮುಂತಾದವರ ಜೊತೆಗೆ ಕೃಷ್ಣನ ಹೆಸರು ಸೇರಿಸಿ ಹಾಡುವ ಬದಲು ಪ್ರೇಯಸಿ ರಾಧೆಯ ಹೆಸರಿನ ಜೊತೆ ಕೃಷ್ಣನ ಹೆಸರು ಸೇರಿಸಿ ರಾಧಾ ಗೋವಿಂದ, ರಾಧಾ ಮಾಧವ ಎಂಬ ಭಜನೆ ಮಾಡುವವರ ಭಕ್ತಿ ನೋಡಿದರೆ ನಮಗೇ ನಾಚಿಕೆ ಬರುತ್ತದೆ. ಜಯದೇವ ಕವಿಯ ಗೀತ ಗೋವಿಂದವಂತೂ ರಾಧಾ-ಕೃಷ್ಣರ ಸರಸಲ್ಲಾಪ ವಿವರಿಸುವ ಕಾವ್ಯವಾಗಿದೆ. ವೈಷ್ಣವರ ಭಕ್ತಿ ಎಷ್ಟು ಕುರುಡು ಭಕ್ತಿ ಎನ್ನಿಸದೆ

ಇರದು. ರಾಧೆ ಜೀವಾತ್ಮನ ಸಂಕೇತವಂತೆ, ಕೃಷ್ಣನು ಪರಮಾತ್ಮನ ಸಂಕೇತವಂತೆ! ಮಾನವ ದೌರ್ಬಲ್ಯಗಳನ್ನೆಲ್ಲ ಹೊತ್ತವರನ್ನು ನಿರಾಕಾರ ಪರಮಾತ್ಮ - ಜೀವಾತ್ಮರಿಗೆ ಹೋಲಿಸುವ ಬುದ್ಧಿಗೇಡಿಗಳನ್ನು ಏನೆಂದು ಕರೆಯಬೇಕು?

ಕಳೆದ ತಿಂಗಳು ಓರ್ವ ಲಿಂಗಾಯತ ವಕೀಲರ ಮನೆಗೆ ಪೂಜೆಗೆಂದು ಆಹ್ವಾನಿಸಿದ್ದರು. ಅಲ್ಲಿ ಆಳೆತ್ತರದ ರಾಧಾಕೃಷ್ಣರ ಫೋಟೋ ತೂಗು ಹಾಕಿದ್ದು ನೋಡಿ ಲಿಂಗಾಯತರು ಎಷ್ಟು ಸಂಸ್ಕೃತಿ ವಿಹೀನರಾಗಿದ್ದಾರೆನ್ನಿಸಿ ದುಃಖವೆನಿಸಿತು. ರಾಧಾ - ಕೃಷ್ಣರ ಲೀಲಾ ವಿಲಾಸವನ್ನು ಆದರ್ಶವೆನ್ನುವ ಹಿಂದುಗಳು ಇದೇ ರೀತಿ ಅವಿವಾಹಿತ ಹುಡುಗ ವಿವಾಹಿತ ಹುಡುಗಿಯೊಡನೆ ಚೆಲ್ಲಾಟವಾಡಿದರೆ ಸಹಿಸಿಕೊಳ್ಳಬಹುದೆ? ಮುಂದೆ, ಭಗವದ್ಗೀತೆಯನ್ನು ಬೋಧೆ ಮಾಡಿದುದು ಒಂದು ಮಹಾನ್ ಸಂದೇಶ ಎಂದು ಹಿಂದುಗಳು ಹೆಮ್ಮೆಯಿಂದ ಹೇಳಿಕೊಳ್ಳುವರು. ಆದರೆ ಅದರೊಳಗಣ ವಿರೋಧಾಭಾಸಗಳನ್ನು ಚರ್ಚಿಸಲು ಹೋದರೆ ಒಂದು ಬೃಹತ್ ಗ್ರಂಥವನ್ನೇ ಬರೆಯಬೇಕಾದೀತು. ಬ್ರಾಹ್ಮಣ, ಕ್ಷತ್ರಿಯರನ್ನು ಪುಣ್ಯ ಯೋನಿಜರೆಂದು, ವೈಶ್ಯರು, ಶೂದ್ರರು ಮತ್ತು ಸ್ತ್ರೀಯರನ್ನು ಪಾಪ ಯೋನಿಜರು ಎಂದು ಕರೆದ ಭಗವದ್ಗೀತೆ ಸರ್ವಮಾನ್ಯ ಹೇಗಾದೀತು? ಚತುರ್ವರ್ಣಗಳನ್ನು ಗುಣಕರ್ಮಗಳ ಆಧಾರದ ಮೇಲೆ ನಾನೇ ಸೃಷ್ಟಿಸಿದ್ದೇನೆ ಎಂದು ಹೇಳುವಲ್ಲಿ ಮಾತ್ರ ಶ್ರೀ ಕೃಷ್ಣನು ಪ್ರಾಮಾಣಿಕನಾಗಿದ್ದಾನೆ. ಆದರೆ ಅದನ್ನು ಸಮರ್ಥಿಸಿಕೊಳ್ಳುವವರು ಮಾತ್ರ ದೇವರೇ ಚತುರ್ವರ್ಣಗಳನ್ನು ಸೃಷ್ಟಿಸಿದ್ದಾನೆ ಎಂದು ಅಪ್ರಾಮಾಣಿಕತೆ ಮೆರೆಯುತ್ತಾರೆ. ಮಹಾತ್ಮರು ಎಂಥಾ ಪ್ರಸಂಗದಲ್ಲೂ ಅನ್ಯಾಯ ಮಾರ್ಗವನ್ನು ಬೋಧಿಸುವುದಿಲ್ಲ. ಕರ್ಣನನ್ನು ಕೊಲ್ಲುವಾಗ, ದುರ್ಯೋಧನನನ್ನು ಕೊಲ್ಲುವಾಗ ಯುದ್ಧನೀತಿಯನ್ನು ಉಲ್ಲಂಘಿಸಲು ಪ್ರಚೋದನೆ ನೀಡುವುದನ್ನು ಗಮನಿಸಬಹುದು. ಹದಿನಾರು ಸಾವಿರ ಕನ್ಯೆಯರು ರಾಕ್ಷಸನ ಬಂಧನದಲ್ಲಿದ್ದರು ಅವರನ್ನು ಬಿಡಿಸಿ ಅವರನ್ನು ಕೃಷ್ಣನು ವಿವಾಹವಾದ ಎಂಬ ಕಲ್ಪನೆ ಬರುತ್ತದೆ. ಅವರೆಲ್ಲ ಹಿಂದಿನ ಜನ್ಮದಲ್ಲಿ ಋಷಿಗಳು. ಆಗ ಅವರು ಕೇಳಿದ್ದ ವರದಂತೆ ಈಗ ಅವರನ್ನು ಪತ್ನಿಯರನ್ನಾಗಿ ಕೃಷ್ಣ ಸ್ವೀಕರಿಸಿದ ಎಂದೂ ಸಮರ್ಥಿಸಿಕೊಳ್ಳಲಾಗುವುದು. ಗುರು ಬಸವಣ್ಣನವರ ಜೀವನದಲ್ಲಿ ಅವರು ಹನ್ನೆರಡು ಸಾವಿರ ಪಣ್ಯಾಂಗನೆ (ವೇಶ್ಯೆ)ಯರನ್ನು ಪುಣ್ಯಾಂಗನೆ ಅಂದರೆ ಗೃಹಿಣಿಯರನ್ನಾಗಿ ಮಾಡಿದ ಪ್ರಸಂಗ ಬರುತ್ತದೆ. ಆದರೆ ಈ ಕ್ರಿಯೆಯಲ್ಲಿ ಮಾನವೀಯತೆ, ಪ್ರಗತಿಪರ ಚಿಂತನೆ ಎದ್ದು ಕಾಣುತ್ತದೆ.

ಇಂದಿನ ಪ್ರಜಾವಾಣಿಯಲ್ಲಿ (ದಿ. 24-02-2008) ಶ್ರೀ ರಾಮಾಂಜಲಿ ಎಂಬ ಕಾರ್ಯಕ್ರಮದಲ್ಲಿ ಡಾ|| ಎಸ್. ಶೇಖರ್ ಎಂಬುವವರ "ಪುರುಷೋತ್ತಮ" ಕೃತಿಯನ್ನು ಬಿಡುಗಡೆ ಮಾಡುತ್ತ ಸುಪ್ರೀಂ ಕೋರ್ಟಿನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಂ. ಎನ್. ವೆಂಕಟಾಚಲಯ್ಯ ಅವರು ಮಾತನಾಡುತ್ತ, "ರಾಮಾಯಣ ಮತ್ತು ಮಹಾಭಾರತ ಮಹಾಕಾವ್ಯಗಳು ಭಾರತದ ಸಂಸ್ಕೃತಿ ಚರಿತ್ರೆಯನ್ನು ಕುರಿತಂತೆ ಲಭ್ಯವಿರುವ ಹೆಗ್ಗುರುತುಗಳಾಗಿವೆ. ಶ್ರೀರಾಮ ಮಾನವೀಯ ಮೌಲ್ಯಗಳನ್ನು ಬಡಿದು ಎಬ್ಬಿಸಬಲ್ಲ ಒಂದು ವ್ಯಕ್ತಿತ್ವ. ಈ ಕಾರಣಕ್ಕಾಗಿಯೇ ಆತನನ್ನು ಆದರ್ಶ ಪುರುಷ ಎಂದು ಭಾರತೀಯ ಸಮಾಜ ಸ್ವೀಕರಿಸಿದೆ. ಧಾರ್ಮಿಕ ಭಾವನೆಗಳ ಆಚೆಗೂ ರಾಮ ಎಲ್ಲರಿಗೂ ಪ್ರಿಯವಾದ ವ್ಯಕ್ತಿ" ಎಂದಿದ್ದಾರೆ.

ರಾಮಾಯಣ, ಮಹಾಭಾರತಗಳು ಆ ಜನಾಂಗದ ಆಚಾರ - ವಿಚಾರ, ನಂಬಿಕೆ ಇತ್ಯಾದಿಗಳನ್ನು ಬಿಂಬಿಸುವ ಕೃತಿಗಳೇ ವಿನಾ ಆದರ್ಶ ಮತ್ತು ಅನುಕರಣೀಯ ಗ್ರಂಥಗಳಲ್ಲ. ರಾಮ - ಕೃಷ್ಣರನ್ನು ಹಿಂದುಗಳು ತಮ್ಮ ಆದರ್ಶ ಪುರುಷರೆಂದು ಭಾವಿಸಿದ ಕಾರಣ ಅವರ ಬಗ್ಗೆ ಅತೀವ ಅಭಿಮಾನವಿರಬಹುದೇ ವಿನಾ ಎಲ್ಲ ಭಾರತೀಯರಲ್ಲೂ ಇರಲು ಸಾಧ್ಯವಿಲ್ಲ ಮತ್ತು ವೈಚಾರಿಕತೆಯುಳ್ಳ ಹಿಂದುಗಳಲ್ಲಿ ಸಹ ಇಲ್ಲ. ಹೆಂಡತಿಯನ್ನು ಜೂಜಿನ ವಸ್ತುವಾಗಿ ಇಡುವುದು, ಬಹುಪತಿತ್ವ ಮುಂತಾದುವು ಆ ಬುಡಕಟ್ಟಿನ ಜನರ ನಂಬಿಕೆ ಮತ್ತು ಆಚರಣೆ. ಇದು ಎಲ್ಲ ಭಾರತೀಯರಿಗೆ ಹೇಗೆ ಆದರ್ಶ ಮತ್ತು ಅನುಕರಣೀಯ ? ಹಿಂದು ಧರ್ಮದ ಮರ್ಯಾದೆ ಕಾಪಾಡುವ ಮಹಾನ್ ವ್ಯಕ್ತಿಗಳಾಗಿ ಸ್ವಾಮಿ ವಿವೇಕಾನಂದರು, ಅರವಿಂದರು, ಸ್ವಾಮಿ ರಾಮತೀರ್ಥ, ಸ್ವಾಮಿ ಶಿವಾನಂದ ಮುಂತಾದವರು ಇದ್ದಾರೆ. ಆದರೂ ವೇದ ಧರ್ಮೀಯರಿಗೆ ರಾಮ - ಕೃಷ್ಣರೇ ಆರಾಧ್ಯರು; ಅವರ ದೋಷಗಳನ್ನು ಮುಚ್ಚಲು ವೈಭವಿಸುವ ಪ್ರಯತ್ನ ಮಾಡುತ್ತಾರೆ. ಯಾರೂ ಇದರ ವಿರುದ್ಧ ಧ್ವನಿ ಎತ್ತುವ ಧೈರ್ಯಮಾಡುವುದಿಲ್ಲ.

ಮಹಾತ್ಮಾ ಗಾಂಧೀಜಿ ಹೆಮ್ಮೆ ಪಡಬೇಕಾದ ವ್ಯಕ್ತಿ, ಸಂತರು ಅಮೆರಿಕಾದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ಬರಾಕ್ ಒಬಾಮ ಹೇಳಿದ್ದಾರೆ (24-02-2008 ಪ್ರಜಾವಾಣಿ) "ಮಹಾತ್ಮಾ ಗಾಂಧೀಜಿ ನನಗೆ ಸ್ಫೂರ್ತಿ, ಗಾಂಧೀಜಿಯವರಂಥ ಮಹಾನ್ ಚೇತನದ ಆದರ್ಶ ಮತ್ತು ಶಾಂತಿ ಮಂತ್ರವನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುವುದಕ್ಕೆ ಅವರ ಭಾವಚಿತ್ರವನ್ನು ನನ್ನ ಕಚೇರಿಯಲ್ಲಿ ಇಟ್ಟಿದ್ದೇನೆ. ಸಾಮಾನ್ಯ ಮನುಷ್ಯರೇನೇ

ಅಸಾಮಾನ್ಯ ಸಾಧನೆ ಮಾಡಬಲ್ಲರು ಎನ್ನುವ ಆ ಮಹಾನ್ ಚೇತನವನ್ನು ನನ್ನ ಬದುಕಿನುದ್ದಕ್ಕೂ ಸ್ಫೂರ್ತಿಯಾಗಿಸಿಕೊಂಡಿದ್ದೇನೆ. ಅವರು ಒಬ್ಬ ಯುಗ ಪ್ರವರ್ತಕ."

ಈ ಮಾತಿಗೆ ನಮ್ಮೆಲ್ಲರ ಸಹಮತವಿದೆ. ಆದರೆ ಮಹಾತ್ಮಾ ಗಾಂಧೀಜಿಯವರ ಕೆಲವು ನಂಬಿಕೆಗಳು ವೈಯಕ್ತಿಕ ಶ್ರದ್ಧೆಯ ಮೇಲೆ ನಿಂತಿವೆಯೇ ವಿನಾ ವೈಚಾರಿಕ ಮತ್ತು ವಸ್ತುನಿಷ್ಠವಾಗಿಲ್ಲ. ಅದೇ ಹಿನ್ನೆಲೆಯಲ್ಲಿ ಅವರು, "ರಾಮ - ಕೃಷ್ಣರನ್ನು ದೇವರು ಎಂದು ನಂಬದವನು ಹಿಂದುವೇ ಅಲ್ಲ, ಇದು ಖಂಡಿತ" ಎಂದಿದ್ದಾರೆ. ಇದೇ ಹಿನ್ನೆಲೆಯಲ್ಲಿ "ಲಿಂಗಾಯತರು ಯಾವ ಮಾನವ ದೇಹಿಗಳನ್ನು ದೇವರು ಎನ್ನುವುದಿಲ್ಲವಾದ ಕಾರಣ ಖಂಡಿತವಾಗಿಯೂ ಹಿಂದುಗಳಲ್ಲ." ಎಂದು ಹೇಳಬೇಕಾಗುತ್ತದೆ.

---

5. ಪೂಜ್ಯ ಗೌರಿ ಶಂಕರ ಸ್ವಾಮಿಗಳ ಬಿಡುಗಡೆ ಸಂತೋಷಕರ ಸುದ್ದಿ

- ಮಾತಾಜಿ

ಸಿದ್ಧಗಂಗಾ ಮಠದ ಉತ್ತರಾಧಿಕಾರಿಯಾಗಿ ನಿಯುಕ್ತರಾಗಿ ಅದ್ದೂರಿಯಾದ ಸಮಾರಂಭದ ಮೂಲಕ ಪಟ್ಟವನ್ನೇರಿದ ಪೂಜ್ಯ ಗೌರಿ ಶಂಕರ ಸ್ವಾಮಿಗಳು ಇಂಜಿನಿಯರಿಂಗ್ ಪದವೀಧರರಾಗಿ ಉಪನ್ಯಾಸಕರಾಗಿ ತಮ್ಮ ಪಾಡಿಗೆ ತಾವು ಕಾಯಕ ನಿರತರಾಗಿ ಇದ್ದರು. ಹಿರಿಯ ಸ್ವಾಮಿಗಳ ದೃಷ್ಟಿ ಬಿದ್ದು ಆಯ್ಕೆಯಾದಾಗ ಬಹಳ ಜನಕ್ಕೆ ಸಂತೋಷವೆನಿಸಿತು. ನಂತರ ಇದ್ದಕ್ಕಿದ್ದ ಹಾಗೆಯೇ ಉಭಯತರ ಮಧ್ಯೆ ಭಿನ್ನಾಭಿಪ್ರಾಯ ಮೂಡಿತು. ಪೂಜ್ಯ ಹಿರಿಯ ಸ್ವಾಮಿಗಳಿಗೆ ಶಿಷ್ಯ ಸ್ವಾಮಿಗಳು ಬೇಡವಾದರು. ಮಧ್ಯದ್ದು ದೊಡ್ಡ ಕಥೆ, ಅದರ ಪ್ರಸ್ತಾಪ ಇಲ್ಲೀಗ ಅನಗತ್ಯ. ಮೂಲಮಠದ ಅಧಿಕಾರಕ್ಕಾಗಿ ಪೂಜ್ಯ ಗೌರಿ ಶಂಕರ ಸ್ವಾಮಿಗಳಿಂದ, ಅದಕ್ಕಿಂತ ಹೆಚ್ಚು ಅವರ ಬೆಂಬಲಿಗರಿಂದ ನ್ಯಾಯಾಲಯದಲ್ಲಿ ದಾವೆ ದಾಖಲಾಯಿತು. ಆಗ ಶ್ರೀ ಗೌರಿ ಶಂಕರ ಸ್ವಾಮಿಗಳ ಮೇಲೆ ಒಂದು ಅಪವಾದ ಬಂದೆರಗಿತು. ಶಾಲಾ ಬಾಲಕನೊಬ್ಬನನ್ನು ಸಲಿಂಗ ಕಾಮಕ್ಕೆ ಬಳಸಿಕೊಂಡರು ಎಂಬುದು ಆ ಆರೋಪ. ಆ ಹುಡುಗನಿಂದ, ಅವನ ಪಾಲಕರಿಂದ ದೂರು ಕೊಡಿಸಲಾಯಿತು.

ಕೆಳಗಿನ ನ್ಯಾಯಾಲಯದಲ್ಲಿ ಶ್ರೀ ಗೌರಿ ಶಂಕರ ಸ್ವಾಮಿಗಳು ನಿರ್ದೋಷಿಗಳು ಎಂದು ತೀರ್ಪಾಯಿತು. ಆದರೆ ಹೈಕೋರ್ಟಿನಲ್ಲಿ ಆರೋಪ ನಿಜವೆಂದು ತೀರ್ಮಾಯಿತಲ್ಲದೆ ಪೂಜ್ಯ ಶ್ರೀಗಳಿಗೆ 10 ವರ್ಷಗಳ ಕಾರಾಗೃಹ ಶಿಕ್ಷೆ ಮತ್ತು 25 ಲಕ್ಷ ರೂಪಾಯಿಗಳ ದಂಡ ವಿಧಿಸಲಾಯಿತು. 2004 ರಲ್ಲಿ ಶ್ರೀಗಳು ಜೈಲು ಸೇರಬೇಕಾಯಿತು. ಎಲ್ಲ ಜನರೂ ಮಮ್ಮಲ ಮರುಗಿದರು, ಕಣ್ಣೀರು ಹಾಕಿದರು. ನ್ಯಾಯಾಂಗದಲ್ಲಿ ವಿಶ್ವಾಸ ಕಳೆದುಕೊಂಡು ಶಾಪ ಹಾಕಿದರು. ಲಕ್ಷಾಂತರ ರೂಗಳ ವಿಲೇವಾರಿಯಾಗಿ ಅನ್ಯಾಯದ ತೀರ್ಪು ಹೊರಬಂದಿದೆ ಎಂದು ಆಕ್ಷೇಪಿಸಿದರು. ಪೂಜ್ಯ ಗೌರಿ ಶಂಕರ ಶ್ರೀಗಳ ಪರವಾಗಿ ಸುಪ್ರೀಂ ಕೋರ್ಟಿಗೆ ಅಭಿಮಾನಿಗಳು ಹೋದರಾದರೂ ಸ್ವಾಮೀಜಿ ಕಾರಾಗೃಹ ಸೇರಬೇಕಾಯಿತು. ಹಣ ಬಲದ ಎದುರಿಗೆ ನ್ಯಾಯ ಸೋತಿತು ಎಂದು ಜನರು ಕಣ್ಣೀರು ಕರೆದರು. ಮೊದಲನೆಯದಾಗಿ ಓರ್ವ ಪ್ರೌಢರಾದ ಸ್ವಾಮಿಗಳು ಒಬ್ಬ ಶಾಲಾ ಬಾಲಕನನ್ನು ಬಳಸಿಕೊಳ್ಳುವ ಸಾಧ್ಯತೆ! ಏಕೋ ಇದು ಕಲ್ಪಿತ ಕಥೆ ಎಂದೇ ಎಲ್ಲರಿಗೆ ಅನ್ನಿಸಿತು. ಒಂದು ವೇಳೆ ಸತ್ಯವೆಂದೇ ಊಹಿಸಿದರೂ ಅದಕ್ಕಾಗಿ ಹೈಕೋರ್ಟ್ ವಿಧಿಸಿದ ಶಿಕ್ಷೆ 10 ವರ್ಷ ಜೈಲು, 25 ಲಕ್ಷ ರೂ ದಂಡ ಅತಿ ಎನಿಸಿತು. ಈ ತೀರ್ಪಿನ ಹಿಂದೆ ಕಾಣದ ಕೈಗಳು ಕೆಲಸ ಮಾಡಿವೆ ಎಂಬ ವದಂತಿ ಹಬ್ಬಿತು. ಜನರು ಆಡಿಕೊಂಡು ತೋಡಿಕೊಂಡು ತಮ್ಮ ಅಳಲನ್ನು ಅಭಿವ್ಯಕ್ತಗೊಳಿಸಬಹುದೇ ವಿನಾ ಅದಕ್ಕಿಂತ ಹೆಚ್ಚಾಗಿ ಏನು ಮಾಡಬಲ್ಲರು ?

ಸುಪ್ರೀಂ ಕೋರ್ಟ್ ಪೂಜ್ಯ ಗೌರಿ ಶಂಕರ ಸ್ವಾಮಿಗಳನ್ನು ನಿರ್ದೋಷಿ ಎಂದು ತೀರ್ಪು ನೀಡಿತು. ಶ್ರೀಗಳು ಜೈಲಿನಿಂದ ಬಿಡುಗಡೆಯಾದಾಗ ಅವರ ಅಭಿಮಾನಿಗಳಿಗೆ ಅಪಾರ ಸಂಭ್ರಮ. ನ್ಯಾಯಾಂಗದಲ್ಲಿ ಕಳೆದುಕೊಂಡಿದ್ದ ವಿಶ್ವಾಸ ಪುನಃ ಚಿಗುರಿತು. ಎಲ್ಲ ಜನರಿಗೂ ಸಮಾಧಾನವೆನಿಸಿತು. "ವಿರೋಧಿಗಳು ಎಸೆದ ಇಟ್ಟಂಗಿಯನ್ನು ಮನೆ ಕಟ್ಟಿಕೊಳ್ಳಲು ಬಳಸಿಕೊಳ್ಳುವವನೇ ಜಾಣ" ಎಂಬ ಓರ್ವ ತತ್ವಜ್ಞಾನಿಯ ನುಡಿಯಂತೆ ಶ್ರೀಗಳು ಜೈಲಿನ ವಾಸವನ್ನು ತಪಸ್ಸಿಗೆ ಬಳಸಿಕೊಂಡಿದ್ದಾರೆ, ವ್ಯಕ್ತಿತ್ವವನ್ನು ಪರಿಪಕ್ವಗೊಳಿಸಿಕೊಂಡಿದ್ದಾರೆ. ಜೈಲಿನ ಸಿಬ್ಬಂದಿ ಸಹಿತ ಶ್ರೀಗಳನ್ನು ಗೌರವ ಪೂರ್ಣವಾಗಿ ನಡೆಸಿಕೊಂಡಿದ್ದಾರೆ. ಕಾಕತಾಳೀಯವೆಂಬಂತೆ ಶಿವರಾತ್ರಿಯಂದೇ ಕಿರಿಯ ಶ್ರೀಗಳು ಬಿಡುಗಡೆಯಾಗಿ ಹೊರ ಬಂದುದು. ಸಿದ್ಧಗಂಗಾ ಮಠದ ಜಾತ್ರೆಯಲ್ಲಿ ತೇರು ಸಾಗಿದುದು, ಹೋಮ ಕುಂಡದಲ್ಲಿ ವೀರಶೈವ ಅರ್ಚಕರು ಹವಿಸ್ಸು ಅರ್ಪಿಸಿ ಬೆಂಕಿಯನ್ನು ಧಗಧಗ ಉರಿಸಿದುದು (?) ಒಟ್ಟಿಗೇ ಟಿ.ವಿ. ಪರದೆ ಮೇಲೆ ಬಂದಿತು. ವನವಾಸ ಮುಗಿಸಿ ಬಂದ ಪೂಜ್ಯ ಗೌರಿ ಶಂಕರ ಶ್ರೀಗಳಿಗೆ ಉಜ್ವಲ ಭವಿಷ್ಯವನ್ನು ಹಾರೈಸೋಣ. ಸತ್ಯಕ್ಕೆ ಸಾವಿಲ್ಲ ಎಂದು ಸಮಾಧಾನ ಪಡೋಣ.

6.ಬಸವ ಮಂಟಪಗಳು ಶರಣ ಸಂಸ್ಕೃತಿಯನ್ನು ಪಸರಿಸುವ ಕೇಂದ್ರಗಳಾಗಬೇಕು

ಇತ್ತೀಚೆಗೆ ರಾಷ್ಟ್ರೀಯ ಬಸವ ದಳದ ಬೃಹತ್ ಬಸವ ಮಂಟಪವಿರುವ ಒಂದು ಊರಿಗೆ ಕಾರ್ಯಕ್ರಮಕ್ಕೆ ಹೋಗಿದ್ದೆ. ಆಗ ಅಲ್ಲಿ ಓರ್ವ ಶರಣೆ ಬಂದು ಗುರು ಬಸವಣ್ಣನವರ ಸನ್ನಿಧಿಯಲ್ಲಿ ನಮ್ಮ ಮಗಳ ಕುಬುಸದ ಕಾರ್ಯಕ್ರಮ ಇಟ್ಟುಕೊಂಡು ಶರಣರಿಗೆ ಪ್ರಸಾದ ದಾಸೋಹ ಮಾಡಿಸಬೇಕೆಂದಿದ್ದೇವೆ. ಆದರೆ ಬಸವ ಮಂಟಪವನ್ನು ಕೊಡುವುದಿಲ್ಲ ಎನ್ನುತ್ತಾರೆ. ಅದಕ್ಕಾಗಿ ರಾಮ ಮಂದಿರದಲ್ಲಿ ಮಾಡಬೇಕು ಎಂದು ಕೊಂಡಿದ್ದೇವೆ. ಎಂದಾಗ ನನಗೆ ಆಘಾತವಾಯಿತು. ರಾಷ್ಟ್ರೀಯ ಬಸವ ದಳದ ಮುಖ್ಯಸ್ಥರನ್ನು ಕೇಳಿದಾಗ, ನಮ್ಮ ನಮ್ಮಲ್ಲಿ ಕೆಲವರ ಭಿನ್ನಾಭಿಪ್ರಾಯವಿದೆ. ಪ್ರಾರ್ಥನೆ ಬಿಟ್ಟು ಬಸವ ಮಂಟಪದಲ್ಲಿ ಬೇರೆ ಏನೂ ಮಾಡಬಾರದು.'' ಎನ್ನುತ್ತಾರೆ ಎಂದರು. ಕೇಳಿ ನನಗೆ ಸೋಜಿಗವಾಯಿತು.

1972ನೆಯ ಇಸವಿಯ ಡಿಸೆಂಬರ್‌ದಲ್ಲಿ ದಿ. 24ರಂದು ಬೆಂಗಳೂರಿನ ವಿಜಯ ನಗರದಲ್ಲಿ ಮೊಟ್ಟ ಮೊದಲ ಪ್ರವಚನ ಪೂಜ್ಯ ಲಿಂ|| ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳಿಂದ ಆರಂಭವಾಯಿತು. ಅದಕ್ಕೆ 3-4 ತಿಂಗಳು ಮೊದಲು ಮಿಲ್ಲರ್ಸ್ ರಸ್ತೆ (ಈಗ ಬಸವೇಶ್ವರ ರಸ್ತೆ)ಯಲ್ಲಿದ್ದ ಯೂನೈಟೆಡ್ ಥಿಯಾಲಾಜಿಕಲ್ ಕಾಲೇಜ್ ಅತಿಥಿ ಗೃಹದಲ್ಲಿ ಇದ್ದು ಕೊಂಡು ನಾನು ಅಧ್ಯಯನ ಮಾಡುತ್ತಿದ್ದೆ. ಆಗ ಕ್ರೈಸ್ತರ ಆಚಾರ-ವಿಚಾರ, ವಿಧಿ-ವಿಧಾನಗಳನ್ನು ಹತ್ತಿರದಿಂದ ನೋಡುವಂತೆ ಆಯಿತು. ಚರ್ಚ್‌ಗಳು ಅವರ ಶ್ರದ್ಧಾ ಕೇಂದ್ರಗಳು ಮಾತ್ರವಲ್ಲ ಅಲ್ಲಿ ಮಗುವಿನ ದೀಕ್ಷಾ ಸ್ನಾನ (Baptism) ನಾಮಕರಣ(Naming), ಮದುವೆ ಮುಂತಾಗಿ ನಡೆಯುತ್ತವೆ. ಪಾದ್ರಿಗಳ ನೇತೃತ್ವದಲ್ಲಿ ಧಾರ್ಮಿಕ ವಿಧಿ ವಿಧಾನ ಜರುಗುತ್ತವೆ. ನಮಗೂ ಧರ್ಮ ಮಂದಿರಗಳು ಬೇಕು ಎಂದು ಆಲೋಚಿಸಿ ಬಸವ ಮಂಟಪದ ಪರಿಕಲ್ಪನೆ ಮೂಡಿತು. ನಿವೇಶನವು ದಾನವಾಗಿ ಸಿಕ್ಕಿತು. 1975ರ ಮೇದಲ್ಲಿ ಬಸವ ಜಯಂತಿಯಂದು ಮೊಟ್ಟ ಮೊದಲನೆಯ ಬಸವ ಮಂಟಪವು ಉದ್ಘಾಟನೆಯಾಯಿತು. ನಮ್ಮ ಉದ್ದೇಶ ಈಡೇರುವಂತೆ ಇಂದು ಬಸವ ಮಂಟಪದಲ್ಲಿ ಶರಣ ಬಂಧುಗಳು ಬಸವ ಧರ್ಮದ ಪ್ರಕಾರ ದೀಕ್ಷಾ ಸಂಸ್ಕಾರ, ನಾಮಕರಣ, ತೊಟ್ಟಿಲು ಕಾರ್ಯಕ್ರಮ, ಮದುವೆ, ಲಿಂಗೈಕ್ಯ ಸಂಸ್ಮರಣೆ, ಮಕ್ಕಳ ಹುಟ್ಟುಹಬ್ಬ, ವಿವಾಹ ವಾರ್ಷಿಕೋತ್ಸವ, ನೌಕರಿ ಪ್ರಾಪ್ತಿ, ನೌಕರಿಯಲ್ಲಿ ಪದೋನ್ನತಿ-ಇಂಥ ಎಲ್ಲ ಸನ್ನಿವೇಶಗಳಲ್ಲಿ ಕಾರ್ಯಕ್ರಮ ನಡೆಸುತ್ತಾರೆ. ಇಂಥಾ ಕಾರ್ಯಕ್ರಮಗಳು ಆದಾಗ ಪ್ರಾರ್ಥನೆಗೆ ಎಂದೆಂದೂ ಬರದ ಧರ್ಮವಂತ ಲಿಂಗಾಯತರು (?) ಬಂಧು ಬಳಗದವರ ಆಹ್ವಾನಕ್ಕೆ ಮಣಿದು ಬರುತ್ತಾರೆ. ಅವರಲ್ಲಿ ಶರಣ ಸಂಸ್ಕೃತಿ-ಧರ್ಮದ ಬಗ್ಗೆ ಆಸಕ್ತಿ ಹುಟ್ಟುತ್ತದೆ. ಇಲ್ಲವಾದರೆ ಹೋಟಲ್‌ಗಳಲ್ಲಿ ಹೋಗಿ ಕೇಕ್ ಕತ್ತರಿಸಿ, ಮೋಂಬತ್ತಿ ಆರಿಸುವ ಹುಟ್ಟು ಹಬ್ಬಕ್ಕೆ ಬಲಿಯಾಗುತ್ತಾರೆ. ಆದ್ದರಿಂದ ಬಸವ ಮಂಟಪಗಳಲ್ಲಿ ಕೇವಲ ವಾರದ ಪ್ರಾರ್ಥನೆ ಮಾತ್ರ ಮಾಡಿ ಸುಮ್ಮನಿರುವ ಬದಲು ಮೇಲ್ಕಂಡ ಕಾರ್ಯಕ್ರಮ ನಡೆಯುವಂತೆ ಮಾಡಬೇಕು. ಇದರಿಂದ ಜನರಲ್ಲಿ ಬಸವ ಮಂಟಪಕ್ಕೆ ಬಂದು ಹೋಗುವ ಪ್ರವೃತ್ತಿ ಬೆಳೆಯುತ್ತದೆ. ಮತ್ತು ಹೊಸ ಜನ ಸಿಗುತ್ತಾರೆ ಸಂಸ್ಥೆಗೆ ಆದಾಯವೂ ಹೆಚ್ಚುತ್ತದೆ.

ಮತ್ತೆ ಕೆಲವರು ಬಾಡಿಗೆಗೆ ಕೊಟ್ಟರೆ ನೆಲ ಕೊಳೆಯಾಗುತ್ತೆ, ಬಣ್ಣ ಕೆಡುತ್ತೆ ಎನ್ನುತ್ತಾರೆ. ಹೊರಗಡೆ ಪರಿಸರ ಕೆಡದಂತೆ ಕಸ ಹಾಕಲು ಡ್ರಮ್ ಇಡಬೇಕು. ನೆಲವನ್ನು ತೊಳೆದು ಸ್ವಚ್ಛ ಪಡಿಸಬೇಕು. ಬಸವ ಮಂಟಪ ಕಟ್ಟಡ ಕಟ್ಟುವುದು ಕೇವಲ ಕಟ್ಟಡ ಕಟ್ಟಿಸಲಿಕ್ಕಾಗಿ ಅಲ್ಲಿ ಮನಸ್ಸುಗಳನ್ನು ಕಟ್ಟಲಿಕ್ಕೆ ಎಂಬುದನ್ನು ಮರೆಯಬಾರದು. ಇವು ಜೇನುಗೂಡಿನಂತೆ ಸದಾ ಧಾರ್ಮಿಕ ಚಟುವಟಿಕೆಯ ಕೇಂದ್ರಗಳಾಗ ಬೇಕು.

7.ಸಮಾಜ ಒಡೆಯುವ ಘಾತುಕತನ

ಪ್ರಜಾವಾಣಿಯ ದಿ. 1.3.2008ರ ಸಂಚಿಕೆಯಲ್ಲಿ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಡಾ|| ಸಿ.ಎಸ್. ದ್ವಾರಕನಾಥ ಅವರ ಭಾಷಣದ ತುಣುಕುಗಳು ಬಂದಿವೆ. ಇವರು ಮಂಜುಸುಧಾ ಚಾರಿಟಬಲ್ ಆಂಡ್ ವೆಲ್‌ಫೇರ್ ಟ್ರಸ್ಟ ಶುಕ್ರವಾರ ನಗರದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಮಾತನಾಡಿದ್ದಾರೆ.

"ಗೌರಿ ಬಿದನೂರು, ಮಧುಗಿರಿ, ಕೊರಟಗೆರೆ ಹಾಗೂ ಆಂಧ್ರ ಪ್ರದೇಶದ ಕೆಲವು ತಾಲ್ಲೋಕುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಸಾದರ ಜನಾಂಗವು ಕೃಷಿಯನ್ನೇ ನಂಬಿಕೊಂಡ ಹಿಂದುಳಿದ ಜನಾಂಗವಾಗಿದೆ.

"ಕೆಲವು ಕಡೆ ಲಿಂಗಾಯತರು, ಇನ್ನೂ ಕೆಲವು ಕಡೆ ಜೈನರು ಎಂದು ತಪ್ಪಾಗಿ ನಮೂದಾಗಿರುವ ಕಾರಣ ಸಾದರ ಜನರು ಮೀಸಲಾತಿ ಸೌಕರ್ಯಗಳಿಂದ ವಂಚಿತರಾಗಿದ್ದಾರೆ. ಇನ್ನಾದರೂ ಅವಕಾಶ ವಂಚಿತ ಸಮುದಾಯಕ್ಕೆ ನ್ಯಾಯ ಸಿಗಬೇಕಾಗಿದೆ." ಎಂದು ಅಭಿಪ್ರಾಯ ಪಟ್ಟರು.

ಶ್ರೀ ಸಿ.ಎಸ್. ದ್ವಾರಕನಾಥ್ ಇತ್ತೀಚೆಗೆ ಬಹಳ ಸುದ್ದಿ ಮಾಡುತ್ತಿದ್ದಾರೆ. ತಲಕಾವೇರಿಗೆ ಹೋದಾಗ ದೇವಾಲಯದಲ್ಲಿ ಅವರು ತೀರ್ಥವನ್ನು ತೆಗೆದು ಕೊಳ್ಳಲಿಲ್ಲವೆಂದು ಅವರು ವಸತಿ ಗೃಹದಲ್ಲಿದ್ದಾಗ ಒಂದು ಧಾರ್ಮಿಕ ಸಂಘಟನೆಯ ಸದಸ್ಯರು ಕೆಲವರು ಹೋಗಿ ಒತ್ತಾಯ ಪೂರ್ವಕವಾಗಿ ತೀರ್ಥವನ್ನು ಕೊಟ್ಟಿದ್ದಾರೆ. ಈ ಬಗ್ಗೆ ಸಾಕಷ್ಟು ಆಕ್ಷೇಪಗಳು ಬಂದವು. ನಂಬಿಕೆ ಇಲ್ಲದವರಿಗೆ ಒತ್ತಾಯ ಪೂರ್ವಕವಾಗಿ ತೀರ್ಥ-ಪ್ರಸಾದ ಕೊಡಲು ಹೋದುದು ತಪ್ಪು ಎಂದು ಅನೇಕರು ಅಭಿಪ್ರಾಯ ಪಟ್ಟರು. ಇದಕ್ಕೆ ನಮ್ಮದೂ ಸಹಮತವಿದೆ. ನಾವಾದರೂ ಬಹಿರಂಗದ ಯಾವುದೇ ಸ್ಥಾವರ ದೇವಾಲಯಗಳ ತೀರ್ಥ - ಪ್ರಸಾದಗಳನ್ನು ಸ್ವೀಕರಿಸುವುದಿಲ್ಲ. ಅವರವರ ನಂಬಿಕೆ ಅವರಿಗೆ.

ಡಾ|| ಸಿ.ಎಸ್. ದ್ವಾರಕನಾಥ ಅವರು ವಿಚಾರ ಶೀಲರು ಇರಬಹುದು ಎಂದುಕೊಂಡಿದ್ದೆವು. ವಿಚಾರ ಶೀಲತೆ ಇದೆಯೋ ಇಲ್ಲವೋ ಅವರಲ್ಲಿ ಧೂರ್ತತೆ ಮತ್ತು ಒಡೆದು ಆಳುವ ನೀತಿ ಮಾತ್ರ ಇದೆ ಎಂಬುದು ಅವರ ಭಾಷಣದಿಂದ ತಿಳಿದು ಬರುತ್ತದೆ. ಮಾನವ ಸಮಾಜ ಬುಡಕಟ್ಟುಗಳಾಗಿ ಆರಂಭಗೊಂಡು ನಂತರ ಕುಲಗೋತ್ರ ಜಾತಿಗಳಾಗಿ ಒಡೆಯಿತು. ಅನೇಕ ಧರ್ಮ ಸಂಸ್ಥಾಪಕರು ವಿವಿಧ ಧರ್ಮಗಳನ್ನು ಸಂಸ್ಥಾಪಿಸಿ ಕೊಟ್ಟಾಗ ವಿವಿಧ ಕುಲಗಳು, ಬುಡಕಟ್ಟುಗಳವರು ಆಯಾ ಧರ್ಮಗಳ ದೀಕ್ಷಾ ಸಂಸ್ಕಾರ ಹೊಂದಿ ಸಣ್ಣಪುಟ್ಟ ಹಳ್ಳಗಳ ಜೀವನದಿಯೊಂದರಲ್ಲಿ ಸೇರಿ ಪೂರ್ಣತೆಯನ್ನು ಕಂಡು ಕೊಂಡಂತೆ ಹಲವಾರು ಕುಲ ಜಾತಿ ಬುಡಕಟ್ಟುಗಳವರು ಧರ್ಮವನ್ನು ಪ್ರವೇಶಿಸುತ್ತಾರೆ. 12ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರು ಬ್ರಾಹ್ಮಣನಿಂದ ಭಂಗಿಯವರೆಗೆ ಎಲ್ಲ ವರ್ಣ, ಜಾತಿ, ವೃತ್ತಿಗಳವರಿಗೆ ಪ್ರವೇಶ ನೀಡಿದಾಗ ಅವರೆಲ್ಲರೂ ಇಷ್ಟಲಿಂಗಧಾರಣೆಯ ಮೂಲಕ ಲಿಂಗಾಯತರಾದರು. ಅದೇ ರೀತಿ ಜೈನರೂ ಆದರು. ಸಿದ್ಧರಾಮೇಶ್ವರರ ಪ್ರಭಾವದಿಂದ ನೊಳಂಬರು, ಮರುಳಸಿದ್ಧರಿಂದ ಸಾದರು, ಗುಡ್ಡಾಪುರ ದಾನಮ್ಮನಿಂದ ಪಂಚಮಸಾಲಿಯವರು, ರೇವಣಸಿದ್ಧರಿಂದ ಸಜ್ಜನರು (ಗಾಣಿಗರು), ಸಿದ್ಧಲಿಂಗೇಶ್ವರರಿಂದ (ಹಳೇ ಮೈಸೂರಿನ) ಒಕ್ಕಲಿಗರು, ಹೇಮರೆಡ್ಡಿ ಮಲ್ಲಮ್ಮನಿಂದ ರೆಡ್ಡಿ ಜನರು, ಶಿವ ದಾಸಿಮಯ್ಯನಿಂದ ಶಿವ ಸಿಂಪಿಗರು ಇತ್ಯಾದಿ ಹೀಗೆಲ್ಲ ದೀಕ್ಷಾವಂತರಾದರು. ಕೆಲವರು ದೀಕ್ಷೆ ಪಡೆಯದೆ ಹಾಗೆಯೇ ಹಿಂದು ಸಮಾಜದಲ್ಲಿ ಶೂದ್ರರಾಗಿಯೇ ಉಳಿದಿದ್ದಾರೆ. ದೀಕ್ಷೆ ಪಡೆಯದವರು ಮಾಂಸಾಹಾರಿಗಳಾಗಿದ್ದರೆ ಪಡೆದುಕೊಂಡವರು ಸಸ್ಯಾಹಾರಿಗಳಾಗಿದ್ದಾರೆ. ಒಬ್ಬ ವ್ಯಕ್ತಿ ಎಸ್.ಎಸ್. ಎಲ್.ಸಿ. ಓದಿ, ನಂತರ ಬಿ.ಎ. ಓದಿ ನಂತರ ಎಂ.ಎ ಓದಿದಾಗ ತನ್ನ ಹೆಸರಿನ ಮುಂದೆ ಎಂ.ಎ ಎಂದು ಬರೆದುಕೊಳ್ಳುವನೇ ವಿನಾ ಎಸ್.ಎಸ್.ಎಲ್.ಸಿ ಎಂದಲ್ಲ. ಹಾಗೆ ಸಾದರು ಎನ್ನುವ ಜನರು ಒಂದು ಕಾಲದಲ್ಲಿ ಜೈನರೋ ಲಿಂಗಾಯತರೋ ಆಗಿದ್ದರೆ ಅಂದಿನಿಂದ ಅವರು ಸಾದು ಜೈನ ಅಥವಾ ಸಾದು ಲಿಂಗಾಯತ ಎಂದು ಹೇಳಿಕೊಂಡು ಬಂದಿರುತ್ತಾರೆ. ಬರೀ ಸಾದರು ಎಂದರೆ ಎಸ್.ಎಸ್.ಎಲ್.ಸಿ ಓದಿದವನಂತೆ, ದೀಕ್ಷೆ ಪಡೆದ ನಂತರ ಸಾದು ಲಿಂಗಾಯತ ಎಂದು ಬರೆದುಕೊಂಡರೆ ಬಿ.ಎ. ಓದಿದವನಂತೆ, ತನ್ನ ಪೂರ್ವದ ಜಾತಿ ಕುಲ ಮರೆತು ಲಿಂಗಾಯತ ಎಂದುಕೊಂಡರೆ ಎಂ.ಎ ಓದಿದವನಂತೆ. ಅಂದಾಗ ಇಂದು ಬಿ.ಎ, ಎಂ.ಎ ಪಾಸು ಮಾಡಿರುವ ಸಾದರ ಲಿಂಗಾಯತರು ಪುನಃ ಎಸ್.ಎಸ್.ಎಲ್.ಸಿ ತರಗತಿಗೆ ಹೋಗಬೇಕೆ? ಶರಣ ತತ್ವ ಬಿಟ್ಟು ಶೂದ್ರತ್ವಕ್ಕೆ ಇಳಿಯಬೇಕೆ? ಹಿಂದುಳಿದ ವರ್ಗಗಳ ಮೀಸಲಾತಿಗಾಗಿ ಧರ್ಮವನ್ನು ತೊರೆಯಬೇಕೆಂಬ ಎಂಥಾ ಪ್ರಚೋದನೆಯನ್ನು ಈ ಆಧುನಿಕ ಸುಧಾರಕರು ಜನರಿಗೆ ಕೊಡುತ್ತಿದ್ದಾರೆ. ಎಲ್ಲ ಜನರೂ ಕಳ್ಳದಾರಿಗಳಲ್ಲಿ ಮೀಸಲಾತಿ ಪಡೆಯಲು ಧಾವಿಸುತ್ತಿರುವುದರಿಂದ ಇನ್ನು ಮೀಸಲಾತಿ ಸೌಲಭ್ಯ ಕನಸಿನ ಗಂಟಾಗುವುದು. ವಿದೇಶಿ ಕಂಪನಿಗಳು ಧಾರಾಕಾರವಾಗಿ ನುಗ್ಗುತ್ತಿರುವುದರಿಂದ ಏನಿದ್ದರೂ ಪ್ರತಿಭೆ, ವಿದ್ವತ್ತಿಗೇ ಸ್ಥಾನ. ಅಮೇರಿಕಾದ ದಾರಿಯಲ್ಲಿ ಭಾರತ ಸರ್ಕಾರಗಳು ಹೆಜ್ಜೆ ಇಡುತ್ತಿರುವುದರಿಂದ ಇನ್ನು ಖಾಸಗಿ ಕಂಪನಿಗಳ ಒಡೆತನ ಹೆಚ್ಚಾಗುತ್ತ ಹೋಗುತ್ತದೆ. ಹೀಗಿರುವಾಗ ಲಿಂಗಾಯತರಾಗಲೀ ಇನ್ನಿತರರಾಗಲಿ ಪ್ರತಿಭೆ - ಪಾಂಡಿತ್ಯಗಳನ್ನು ಬೆಳೆಸಿಕೊಳ್ಳದೆ ಮೀಸಲಾತಿ ಸೌಲಭ್ಯ ನಂಬಿದರೆ ಮೂರ್ಖರಾಗುವುದು ಖಂಡಿತ. ದ್ವಾರಕನಾಥರ ದುರುದ್ದೇಶದ ಪ್ರಚೋದನೆಗೆ ಸಾದರ ಲಿಂಗಾಯತರಾಗಲಿ ಅಥವಾ ಇನ್ನಿತರ ಒಳಪಂಗಡಗಳವರಾಗಲಿ ಬಲಿಯಾಗದೆ, ಆನೆಯ ಜರಿದು ಶ್ವಾನವನೇರುವ ದಡ್ಡತನ ಮಾಡದೆ, ವಿವೇಕಿಗಳಾಗಬೇಕೆಂದು ನಮ್ಮ ಹಾರೈಕೆ.

೮. ಹೆಸರನ್ನಿಡುವುದರಲ್ಲಿ ಶರಣ ಸಂಸ್ಕೃತಿ

ನಮ್ಮ ಶರಣರ ಪೈಕಿ ಒಂದು ವಿವಾಹದ ನಂಟಸ್ತನ ನೋಡುವುದಿತ್ತು. ಹುಡುಗನ ತಂದೆಯ ಹೆಸರು ಗೋವಿಂದ ರಾಜು ಎಂದಿತ್ತು. ಆಗ ಎಲ್ಲರಲ್ಲಿ ಸಂದೇಹ ಬಂದಿತು. ಅವರು ಲಿಂಗಾಯತರು ಹೌದೋ ಅಲ್ಲವೋ? ಹಾಗಿದ್ದರೆ ಹೀಗೆ ಹೆಸರನ್ನು ಇಡುತ್ತಿದ್ದರೆ? ಬಹುಶಃ ತಾಯಿಯು ಅಂತರ್ ಜಾತಿಯ ವಿವಾಹವಗಿರಬಹುದು. ತಾಯಿ ಲಿಂಗಾಯತರಿದ್ದು ತಂದೆ ಬೇರೆ ಯಾವುದೋ ಜಾತಿ ಇರಬಹುದು. ಹೀಗೆ ಹೆಸರು ಹಲವಾರು ಸಂದೇಹಗಳನ್ನು ಹುಟ್ಟು ಹಾಕಿತು. ನಿಜ ಸಂಗತಿ ಕೇಳಲು ಇವರಿಗೆ ಸಂಕೋಚ. ಇವರು ತಿಳಿದುಕೊಂಡರೂ ನಂತರ ಬಂಧು ಬಳಗದವರು ಕೇಳುವ ಮೊದಲ ಪ್ರಶ್ನೆ "ನಿಮ್ಮ ಹುಡುಗಿಯದು ಲವ್ ಮ್ಯಾರೇಜಾ? ಹುಡುಗನ ತಂದೆ ಹೆಸರು ಹೀಗಿದೆಯಲ್ಲಾ?!" ಬಂಧು ಬಳಗದವರಿಗೆಲ್ಲ ಉತ್ತರ ಕೊಡಲು ಸುಸ್ತಾಗುತ್ತದೆ ಎಂದು ಹುಡುಗ ಒಪ್ಪಿಗೆಯಾಗಿದ್ದರೂ ವಿವಾಹದ ಪ್ರಸ್ತಾಪವನ್ನು ಕೈ ಬಿಡಬೇಕಾಯಿತು. ಇದನ್ನು ನೋಡಿದಾಗ ಅನ್ನಿಸಿತು ಹೆಸರಿನಲ್ಲಿ ಏನಿದೆ ಎಂದು ಮೈಮರೆಯುವಂತಿಲ್ಲ ಉದಾಸೀನ ಮಾಡುವಂತಿಲ್ಲ. ಹೆಸರು ಏನೆಲ್ಲವನ್ನು ಸಂಕೇತಿಸುತ್ತದೆ.

ಮಕ್ಕಳಿಗೆ, ಮನೆಗೆ ಹೆಸರನ್ನಿಡುವುದರಲ್ಲಿ ಸದಾಶಯ, ಸಂಸ್ಕೃತಿ ಇರುತ್ತದೆ. ಲಿಂಗಾಯತಕ್ಕೆ ಒಂದು ಧಾರ್ಮಿಕ ಸಂಸ್ಕೃತಿ ಇದೆ. ಅದೇ ಶರಣ ಸಂಸ್ಕೃತಿ. ಅದನ್ನು ಪುನ ಪ್ರತಿಷ್ಠಾಪಿಸಬೇಕಾಗಿದೆ. ಶರಣ/ ಶರಣೆ ಎಂಬ ಪದ ಉದಾತ್ತವಾದುದು. ಮಹನೀಯರೆ /ಮಹಿಳೆಯರೆ ಎನ್ನುವ ಬದಲು ದೇವರಿಗೆ ಶರಣಾದ ಶರಣ ಶರಣೆಯರೆ ಎನ್ನುವುದು ಅರ್ಥಗರ್ಭಿತ. ಅದೇ ರೀತಿ ಶರಣು ಶರಣಾರ್ಥಿ. ಈ ಪದ ನಶಿಸಿಯೇ ಹೋಗಿತ್ತು, ಈಗ ಪುನಃ ಜಾಗೃತ ಶರಣ ಬಂಧುಗಳಿಂದ ಪುನರುತ್ಥಾನಗೊಳ್ಳುತ್ತಲಿದೆ. ವಚನ ಸಾಹಿತ್ಯ ಓದುವ ಮೊದಲು ಶರಣರ ಹೆಸರುಗಳನ್ನಿಡುವುದರಲ್ಲಿ ಆಸಕ್ತಿ ಇರಲಿಲ್ಲ. ಆ ಹೆಸರನ್ನು ಇಟ್ಟುಕೊಂಡವರನ್ನು ನೋಡಿದಾಗ ಹಳೆಯ ಕಾಲದ ಹೆಸರು ಎನಿಸುತ್ತಿತ್ತು ಈಗಲಾದರೋ ಬಸವಾದಿ ಪ್ರಮಥರ ಹೆಸರುಗಳನ್ನು ಇಡಲು ಸಂತೋಷವೆನಿಸುತ್ತದೆ. ಆದ್ದರಿಂದ ಮನೆಗೆ ಮಕ್ಕಳಿಗೆ ಹೆಸರುಗಳನ್ನು ಇಡುವಾಗ ಶರಣ ಸಂಸ್ಕೃತಿಯ ಕಡೆಗೆ ಲಕ್ಷ್ಯ ಕೊಡಬೇಕು.

1. ಗುರು ಬಸವಣ್ಣನವರೇ ಆದಿ ಪ್ರಮಥರಾಗಿ ಸಾಗಿ ಬಂದ ಶರಣರ ಹೆಸರುಗಳಿಗೆ ಮೊದಲನೆಯ ಆದ್ಯತೆ ಕೊಡಬೇಕು. ಆಧುನಿಕ ಕಾಲಮಾನಕ್ಕೆ ತಕ್ಕಂತೆ ಶರಣ ಹೆಸರುಗಳಿಗೆ ಆಧುನಿಕ ಸ್ಪರ್ಶ ಕೊಡಬಹುದು.
2. ಲಿಂಗಾಯತ ಧರ್ಮ -ಶರಣ ಸಂಸ್ಕೃತಿಗಳು ಶಿವ ಸಂಸ್ಕೃತಿಯ ಅಂಗವಾಗಿರುವ ಕಾರಣ ಶಿವ ಪರಂಪರೆಯ ಹೆಸರುಗಳಿಗೆ ದ್ವಿತೀಯ ಆದ್ಯತೆ.
3. ನಿಸರ್ಗ, ಋತುಮಾನ, ಗುಣ ವಿಶೇಷ ಮುಂತಾದವುಗಳಿಗೆ ನಂತರದ ಆದ್ಯತೆ ಕೊಡಬೇಕು.

ಶರಣ ಸಂಸ್ಕೃತಿಯ ಪ್ರಭಾವ ಇರುವಲ್ಲಿ ಮನೆಗೆ, ಮಕ್ಕಳಿಗೆ ಧಾರ್ಮಿಕ ಹೆಸರುಗಳನ್ನು ಇಡುತ್ತಾರೆ. ಇದು ದೂರವಾದಂತೆ ಮುಖ್ಯವಾಗಿ ಮಹಾರಾಷ್ಟ್ರದಲ್ಲಿ ಲಿಂಗಾಯತರು ರಾಮಪ್ಪ, ಕೃಷ್ಣಪ್ಪ, ಪುಂಡಲೀಕಪ್ಪ ಎಂದೆಲ್ಲ ಇಟ್ಟುಕೊಳ್ಳುವುದರಿಂದ ಕೇಳುಗರಿಗೆ ಆಶ್ಚರ್ಯ ಎನಿಸುತದೆ. ವಿಭಿನ್ನವಾಗಿ ಹರಿದು ಹಂಚಿ ಹೋಗಿರುವ ಲಿಂಗಾಯತ ಸಮಾಜದಲ್ಲಿ ಸಾಂಸ್ಕೃತಿಕ ಏಕ ರೂಪತೆ (*Uniformity*) ತರುವುದು ಎಲ್ಲ ದೃಷ್ಟಿಯಿಂದಲೂ ಅವಶ್ಯವಿದೆ.

೯. ಕಾಮುವೋ ಪ್ರೇಮುವೊ ?

ಓರ್ವ ಗೃಹಿಣಿ ದರ್ಶನಕ್ಕೆ ಬಂದಾಗ ಪ್ರಾಸಂಗಿಕವಾಗಿ ಹೇಳಿದರು. ಅವರ ಬಂಧುಗಳ ಮಗನೊಬ್ಬ ಪ್ರೇಮಿಸಿ ಕ್ರೈಸ್ತರ ಹುಡುಗಿಯೊಬ್ಬಳನ್ನು ಮದುವೆಯಾಗ ಬಯಸಿದನಂತೆ. ಧಾರ್ಮಿಕವಾಗಿ ಸಾಂಸ್ಕೃತಿಕವಾಗಿ ಹೊಂದುವುದಿಲ್ಲ ಎಂದು ಎಷ್ಟು ಹೇಳಿದರೂ ಕೇಳಲಿಲ್ಲವಂತೆ. ಇರುವ ಒಬ್ಬನೇ ಮಗನನ್ನು ಕಳೆದುಕೊಳ್ಳ ಬೇಕಾಗುವುದಲ್ಲ ಎಂದು ತಾಯಿ ತಂದೆ ಒಪ್ಪಿಗೆ ಕೊಟ್ಟರಂತೆ. ಆಕೆ ಮಾತ್ರ ಕ್ರೈಸ್ತ ಮತವನ್ನು ಬಿಡುವುದಿಲ್ಲ ಎಂದು ಪಟ್ಟು ಹಿಡಿದಳಂತೆ. ಈತ ಲಿಂಗಾಯತನಾಗಿ ಇರುವುದು; ಆಕೆ ಕ್ರೈಸ್ತಳಾಗಿದ್ದುಕೊಂಡು ಭಾನುವಾರ ಚರ್ಚಿಗೆ ಹೋಗುವುದು. ಆಕೆ ಮಾಂಸಾಹಾರವನ್ನೂ ಬಿಡುವುದಿಲ್ಲ ಎಂದು ಹಠ ಹಿಡಿದಳಂತೆ. ಆಕೆಯ ಎಲ್ಲ ಕರಾರುಗಳಿಗೆ ಮಣಿದು ಹುಡುಗ ವಿವಾಹವಾದ. ಈಗ ಮನೆಯಲ್ಲಿ ಆಕೆಯೇ ಬೇರೆಯಾಗಿ ಮಾಂಸಾಹಾರದ ಅಡಿಗೆ ಮಾಡಿಕೊಳ್ಳುತ್ತಾಳಂತೆ. ಹುಡುಗನು ಹೆಂಡತಿಯೊಡನೆ ಇದ್ದರೂ ತಾಯಿ ತಂದೆ ಜೊತೆ ಊಟ ಮಾಡುತ್ತಾನಂತೆ.

ಸಾಮಾನ್ಯವಾಗಿ ಹೆಣ್ಣು ಮಕ್ಕಳು ಗಂಡನ ಧರ್ಮವನ್ನು ಸ್ವೀಕರಿಸುತ್ತಾರೆ. ಆದರೆ ಕ್ರೈಸ್ತ, ಮುಸ್ಲಿಂ

ಸಮಾಜದ ಹುಡುಗಿಯರು ಮತ್ತು ಹುಡುಗರು ಎಂಥಾ ಪ್ರಸಂಗದಲ್ಲೂ ತಮ್ಮ ಧರ್ಮವನ್ನು ಬಿಡುವುದಿಲ್ಲ. ಮೇಲಿನ ಪ್ರಸಂಗದಲ್ಲಿ ಹೇಳಿದ ವಿವರದಂತೆ ಅವರು ತಮ್ಮದೇ ಧರ್ಮವನ್ನು ಪಾಲಿಸುತ್ತಾರೆ. ಗಂಡನು ದುರ್ಬಲನಿದ್ದರೆ ಆತನನ್ನು ಮತಾಂತರಿಸುತ್ತಾರೆ. ಆತನು ತನ್ನ ಮನೆತನದ ಸಂಸ್ಕಾರದ ಪ್ರಭಾವದಿಂದ ಮತಾಂತರಗೊಳ್ಳದಿದ್ದರೂ ಆಕೆ ಮುಂದೆ ಮಕ್ಕಳನ್ನು ಮಾತ್ರ ತನ್ನ ಧರ್ಮದಲ್ಲೇ ಬೆಳೆಸುತ್ತಾಳೆ. ಇದಕ್ಕೆ ಸೋನಿಯಾ ಗಾಂಧಿ ಕೂಡ ಒಂದು ಉದಾಹರಣೆ. ವಿವಾಹವಾಗಿ ಬಂದ ಅವರು ತನ್ನ ಧರ್ಮವನ್ನು ಬಿಡಲಿಲ್ಲ. ಸಾಮಾನ್ಯವಾಗಿ ಗಂಡನ ಧರ್ಮವನ್ನು ಹೆಂಡತಿ, ತಂದೆಯ ಧರ್ಮವನ್ನು ಮಕ್ಕಳು ಪಾಲಿಸುವುದು ಭಾರತೀಯ ಸಂಸ್ಕೃತಿ. ಆದರೆ ಸೋನಿಯಾ ತನ್ನ ಮಕ್ಕಳನ್ನು ಕ್ಯಾಥೋಲಿಕ್ ಕ್ರೈಸ್ತರು ಎಂದು ದಾಖಲಿಸಿರುವುದಾಗಿ ಕೇಳಿದ್ದೇನೆ. ಇದರರ್ಥವೇನೆಂದರೆ ಮುಸಲೀಮರು, ಕ್ರೈಸ್ತರು ಎಂಥಾ ಪ್ರಸಂಗದಲ್ಲೂ ತಮ್ಮ ಧರ್ಮವನ್ನು ಬಿಡುವುದಿಲ್ಲ. ಆದರೆ ಹಿಂದುಗಳು, ಲಿಂಗಾಯತರು ಎಷ್ಟು ಸುಲಭವಾಗಿ ಬಿಟ್ಟು ಬಿಡುತ್ತಾರೆ ಎಂಬುದು ಕಟು ಸತ್ಯ. ಒಂದು ವೇಳೆ ಹೀಗೆ ವಿವಾಹವಾದವನು/ ವಳು ಲಿಂಗಾಯತ ಅಥವಾ ಹಿಂದುವಾಗಿಯೇ ಇರುತ್ತೇನೆ ಎಂದರೆ ಕ್ರೈಸ್ತ, ಮುಸಲೀಮ್ ಸಮಾಜದವರು ಅದಕ್ಕೆ ಅವಕಾಶ ಕೊಡುವುದಿಲ್ಲ.

ಹಿಂದು ಸಮಾಜದಲ್ಲಿ ಒಳಗೆ ಬರುತ್ತೇವೆ ಎನ್ನುವವರನ್ನು ಕರೆದುಕೊಳ್ಳಲು ಅವಕಾಶವಿಲ್ಲ; ಆರ್ಯ ಸಮಾಜದವರು ಮಾತ್ರ ದೀಕ್ಷೆ ನೀಡುತ್ತಾರೆ. ಲಿಂಗಾಯತ ಸಮಾಜದಲ್ಲಿ ಹಾಗಲ್ಲ. ಎಲ್ಲ ಮಾನವರ ಉದ್ಧಾರಕ್ಕಾಗಿಯೇ ಈ ಧರ್ಮವು ಹುಟ್ಟಿರುವುದರಿಂದ ದೀಕ್ಷೆಗೆ ಅವಕಾಶವಿದೆ. ಅಂದಾಗ ವಿವಾಹವಾಗುವ ಸಮಯದಲ್ಲೇ ಲಿಂಗಾಯತ ಹುಡುಗ/ ಹುಡುಗಿಯರು ತಮ್ಮ ಸಂಗಾತಿಗೆ ದೀಕ್ಷೆ ತೆಗೆದುಕೊಳ್ಳಲು ಕರಾರು ಮಾಡಬೇಕು. ಆ ಸಮಯದಲ್ಲಿ ಅವರು ಒಪ್ಪಿಕೊಳ್ಳುವರು. ಅವರ ಹಠಕ್ಕೆ ಮಣಿದು ದೀಕ್ಷೆ ಕೊಡಿಸದೆ ಮದುವೆಯಾದರೆ ನಂತರದ ದಿನಗಳಲ್ಲಿ ಸಡಿಲ ಸಿಕ್ಕ ಅವರು ಎಂದೂ ದೀಕ್ಷೆಯನ್ನು ಪಡೆಯರು. ಸಾಮಾಜಿಕ ಅಧ್ಯಯನ ಮಾಡಿದರೆ ತಮ್ಮ ಧರ್ಮದ ವಿಷಯದಲ್ಲಿ ಕ್ರೈಸ್ತರು, ಮುಸಲೀಮ ತರುಣ/ ತರುಣಿಯರು ದೃಢವಾಗಿ ಇರುವಂತೆ ಲಿಂಗಾಯತ, ಹಿಂದು ತರುಣ/ ತರುಣಿಯರು ದೃಢ ಮನಸ್ಕರಾಗಿ ಇರುವುದಿಲ್ಲ. ಇದಕ್ಕೆ ಕಾರಣ ಇವರ ತಾಯಿ ತಂದೆ ಧರ್ಮಾಭಿಮಾನವನ್ನು ಬೆಳೆಸಿರುವುದಿಲ್ಲ. ಇನ್ನೊಂದು ಕಾರಣ, ತಮ್ಮ ಧರ್ಮದ ಘನತೆ ಇವರಿಗೇ ತಿಳಿಯದೆ ಇರುವುದರಿಂದ ಆಗಂತುಕರನ್ನು ಮನವೊಲಿಸುವ ಮಾನಸಿಕ, ಬೌದ್ಧಿಕ ಸಾಮರ್ಥ್ಯ ಇವರಿಗೆ ಇರುವುದಿಲ್ಲ. ನಮ್ಮ ಪರಿಚಿತರು ಒಬ್ಬರಲ್ಲಿ ಲಿಂಗಾಯತ ತರುಣನನ್ನು ವಿವಾಹವಾದ ಮಾಂಸಾಹಾರಿ ಜಾತಿಯಿಂದ ಬಂದ ಸೊಸೆ ಗಂಡನ ಮನೆಯಲ್ಲಿ ಮಾಂಸಾಹಾರಿ ಸಂಸ್ಕೃತಿಯನ್ನು ಅಳವಡಿಸಿ ಬಿಟ್ಟಿದ್ದಾಳೆ. ತಾನು ಬಂದು ಗಂಡನ ಧರ್ಮದ ಉದಾತ್ತ ಸಂಸ್ಕೃತಿಯನ್ನು ಅಳವಡಿಸಿಕೊಳ್ಳುವ ಬದಲಿಗೆ, ತನ್ನ ಮಾಂಸಾಹಾರಿ ಸಂಸ್ಕೃತಿಯನ್ನು ಗಂಡನ ಮನೆಯಲ್ಲಿ ಬೆಳೆಸಿಬಿಟ್ಟಿದ್ದಾಳೆ. ಪ್ರೀತಿಸಿ ವಿವಾಹವಾದವರಲ್ಲಿ ಯಾರಲ್ಲಿ ಉತ್ತಮ ಆದರ್ಶ, ಉದಾತ್ತ ಸಂಸ್ಕೃತಿ ಇರುತ್ತದೋ ಅವರನ್ನು ಇನ್ನೊಬ್ಬರು ಅನುಸರಿಸಬೇಕು. ಹುಟ್ಟಿನಿಂದ ಲಿಂಗಾಯತರಾಗಿದ್ದು ಅನ್ಯರನ್ನು ಪ್ರೇಮಿಸಿ ವಿವಾಹವಾದ ಕೆಲವು ಲಿಂಗಾಯತ ಮಹಿಳೆಯರು ಗಂಡನಿಗೂ ದೀಕ್ಷೆ ಕೊಡಿಸಿ, ಮನೆಯಲ್ಲಿ ಶರಣ ಸಂಸ್ಕೃತಿ ಬೆಳೆಸಿರುವುದು ಮಾತ್ರವಲ್ಲ ಮಕ್ಕಳನ್ನೂ ಸಾತ್ವಿಕ ದಾರಿಯಲ್ಲಿ ನಡೆಸಿದ್ದಾರೆ. ನಿಜವಾದ ಪ್ರೇಮದಲ್ಲಿ ತ್ಯಾಗ, ಪರಸ್ಪರ ಅನುಸರಣೆ ಇರುತ್ತದೆ. ಕಾಮದಲ್ಲಿ ಕೇವಲ ಸುಖಾಪೇಕ್ಷೆ ಇರುತ್ತದೆ. ಆದ್ದರಿಂದ ಕೇವಲ ದೈಹಿಕ ಆಕರ್ಷಣೆಗಾಗಿ ದಂಪತಿಗಳಾಗದೆ ಉತ್ತಮ ಸಂಸ್ಕೃತಿಯನ್ನು ಅಳವಡಿಸಿಕೊಳ್ಳಲು ಪ್ರೇಮ ವಿವಾಹ ಮಾಡಿಕೊಂಡರೆ ಅಂಥವರದು ಮಾತ್ರ ಆದರ್ಶ ದಾಂಪತ್ಯವಾಗುತ್ತದೆ. ★

ಅಘಟಿತ ಘಟಿತನೆ, ವಿಪರೀತ ಚರಿತ್ರನೆ,
ಸಾವರ ಕೈಯಲ್ಲಿ ಪೂಜೆಗೊಂಬರೆ ಲಿಂಗಯ್ಯ?
ಸಾವರ ನೋವರ ಕೈಯಲ್ಲಿ
ಪೂಜೆಗೊಂಬುದು ಲಜ್ಜೆ ಕಾಣಾ ಗುಹೇಶ್ವರ

ತಮಿಳುನಾಡಿನ ನೀಲಗಿರಿ ಜಿಲ್ಲೆಯ ಸಕಲಟ್ಟಿಯಲ್ಲಿ ಬಸವ ಮಂಟಪ ಉದ್ಘಾಟನೆ, ವಿಶ್ವಗುರು ಬಸವಣ್ಣನವರ ಅಮೃತ ಶಿಲಾ ಪುತ್ಥಳಿಯ ಪ್ರತಿಷ್ಠಾಪನೆ ಅಕ್ಕಮಹಾದೇವಿ ಜಯಂತಿ ಆಚರಣೆ ಲಿಂಗಾಯತ ಧರ್ಮದ ಮೂರನೆಯ ಸಮ್ಮೇಳನ

ತಮಿಳುನಾಡಿನ, ನೀಲಗಿರಿ ಜಿಲ್ಲೆಯ ಊಟಿ -ಕುನ್ನೂರು ಸಮೀಪದಲ್ಲಿರುವ ಸಕಲಟ್ಟಿಯಲ್ಲಿ ನೂತನವಾಗಿ ಬಸವ ಮಂಟಪವನ್ನು ನಿರ್ಮಿಸಿದ್ದು ಅದರ ಉದ್ಘಾಟನೆಯನ್ನು ಮತ್ತು ವಿಶ್ವಗುರು ಬಸವಣ್ಣನವರ ಅಮೃತ ಶಿಲಾ ಪುತ್ಥಳಿಯ ಪ್ರತಿಷ್ಠಾಪನೆಯನ್ನು ಭಾನು(ದೇವ)ವಾರ ದಿ.20-4-2008 ರಂದು ಬೆಳಿಗ್ಗೆ 10-30ಕ್ಕೆ ಏರ್ಪಡಿಸಲಾಗಿದೆ. ಕಾರ್ಯಕ್ರಮದ ನಂತರ ಭವ್ಯವಾದ ಮೆರವಣಿಗೆ ಪಥ ಸಂಚಲನ ನಡೆಯುತ್ತವೆ. ನಂತರ ಸಮಾರೋಪ ಸಮಾರಂಭ. ನೀಲಗಿರಿ ಮತ್ತು ಸುತ್ತಲಿನ ಹಟ್ಟಿ, ಜಿಲ್ಲೆಗಳಲ್ಲಿರುವ ಲಿಂಗಾಯತ ಸಮಾಜ ಬಾಂಧವರ ಸಮಾವೇಶವು ಜರುಗಲಿದೆ. ಭಾಗವಹಿಸಲು ಆಸಕ್ತಿ ಇರುವವರು ಊಟಿಯಲ್ಲಿ ವಸತಿ ಗೃಹಗಳಲ್ಲಿ ಉಳಿಯಬಹುದು. ಅಗತ್ಯವಿರುವ ವಿವರಗಳನ್ನು ಕೆಳಗೆ ಕಾಣಿಸುವ ಶರಣ ಬಂಧುಗಳಿಂದ ಪಡೆಯಬಹುದು.

ಕೇವಲ ಒಂದೇ ದಿವಸದ ಕಾರ್ಯಕ್ರಮವಾದುದರಿಂದ ಸ್ಥಳೀಯರು ಬೆಳಿಗ್ಗೆ ಬಂದು ಸಂಜೆಗೆಲ್ಲ ವಾಪಸು ಹೋಗುವರು. ಪರ ಊರಿನಿಂದ ಬರುವವರು ಸಹ ಊಟಿಗೆ ಸಾರಿಗೆ ಸಂಸ್ಥೆ ವಾಹನಗಳಲ್ಲಿ ಬಂದು ಸಂಜೆಗೆ ಹಿಂತಿರುಗಬಹುದು. ಬೇರೆ, ಸ್ವಂತ ವಾಹನಗಳಲ್ಲಿ ಬರುವವರು ಸಕಲಟ್ಟಿಗೆ ಬಂದು ಬೆಳಗಿನ ಉಪಾಹಾರ, ಮಧ್ಯಾಹ್ನದ ಪ್ರಸಾದ ಸ್ವೀಕರಿಸಿ, ಕಾರ್ಯಕ್ರಮದಲ್ಲಿ ಭಾಗಿಯಾಗಿ ಸಂಜೆಗೆ ವಾಪಸಾಗಬಹುದು. ಊಟಿ ಕುನ್ನೂರು ಮುಂತಾದ ಸ್ಥಳಗಳ ಸಂದರ್ಶನ ಮಾಡಬೇಕು ಎನ್ನುವವರು ಊಟಿಯಲ್ಲಿ ವಸತಿ ಗೃಹಗಳಲ್ಲಿ ಉಳಿದುಕೊಂಡು ತಮ್ಮ ಇಷ್ಟಾನುಸಾರ ಸ್ಥಳ ಸಂದರ್ಶನ ಮಾಡಬಹುದು. ಬೆಂಗಳೂರು ಬಸವ ಮಂಟಪದಿಂದ ಹೊರಡಬೇಕು ಎನ್ನುವವರು ಬಸವ ಮಂಟಪಕ್ಕೆ ಫೋನ್ ಮಾಡಬೇಕು. ಪ್ರತಿನಿಧಿ ಶುಲ್ಕ ರೂ.100-00(ಒಂದು ದಿನಕ್ಕೆ ಮಾತ್ರ)

ಹೋಟೆಲ್‌ಗಳಲ್ಲಿ ಮುಂಗಡ ಬುಕ್ಕಿಂಗ್

ಇಡೀ ವರ್ಷದಲ್ಲಿ ಅತ್ಯುತ್ತಮ ಸೀಸನ್ ಎಂದರೆ ಏಪ್ರಿಲ್ ಮತ್ತು ಮೇ ತಿಂಗಳು. ಹೀಗಾಗಿ ಊಟಿ, ಕುನ್ನೂರು ಮತ್ತು ಇತರೆ ಸಂದರ್ಶನೀಯ ಸ್ಥಳಗಳನ್ನು ನೋಡಲು ಪ್ರವಾಸಿಕರು ಪ್ರವಾಹದಂತೆ ಬರುತ್ತಾರೆ. ಅದಕ್ಕಾಗಿ ಆಸಕ್ತರಾದ ಶರಣ ಬಂಧುಗಳು ಮೊದಲೇ ಊಟಿಯ ವಸತಿ ಗೃಹಗಳಲ್ಲಿ ಸ್ಥಳವನ್ನು ಕಾಯ್ದಿರಿಸಬೇಕು. ಡಾರ್ಮಿಟರಿ (ಸಾಮೂಹಿಕ ವಸತಿ) ಯಲ್ಲಿ ಒಬ್ಬರಿಗೆ ಒಂದು ದಿನಕ್ಕೆ 200ರೂ.
ಡಬ್ಬಲ್ ರೂಂ(ಇಬ್ಬರಿಗೆ) ಒಂದು ದಿನಕ್ಕೆ 500ರೂ.

ಅತ್ಯಂತ ಹೆಚ್ಚಿನ ಬೆಲೆಯ ಕೋಣೆಗಳೂ ಲಭ್ಯವಿರುತ್ತವೆ. ತಡವಾದರೆ ಸಿಕ್ಕುವುದು ಕಷ್ಟ. ಬೇಗನೆ ಬ್ಯಾಂಕ್ ಡ್ರಾಫ್ಟ್ ಕಳಿಸಿ, ಕೋಣೆಗಳನ್ನು ಕಾಯಿರಿಸಿಕೊಳ್ಳಬೇಕು. ಪ್ರತಿನಿಧಿ ಶುಲ್ಕ 100ರೂ (ಒಬ್ಬರಿಗೆ) ಮತ್ತು ಕೋಣೆಯ ಬಾಡಿಗೆ ಸೇರಿಸಿ ಡಿ.ಡಿ.ತೆಗೆಸಬೇಕು.

ಡಿ.ಡಿ ತೆಗೆಸುವವರು SRI BASAVESHWARA VISHWA SHANTHI BHAVAN, COONCOR ಎಂದು ತೆಗೆಸಬೇಕು. ಆನ್ ಲೈನ್ ಮೂಲಕ ಕಳಿಸುವವರು ಮೇಲ್ಕಾಣಿಸಿದ ಹೆಸರನ್ನು ಬರೆದು ನಂತರ ಅಕೌಂಟ್ ನಂಬರ್ ಬರೆಯಬೇಕು. S.B.A/c 1542500100104601, (KARNATAKA BANK) COONOOR, DT-NILGIRIS, TAMIL NADU

ಪತ್ರ ವ್ಯವಹಾರದ ವಿಳಾಸ :
SRI BASAVESHWARA VISHWA SHANTHI BHAVAN
1-1, Somarsait Building, Cash Bazar,
Above Indian Bank, Coonoor-643102,
The Nilgiris, Tamil Nadu

ಸಂಪರ್ಕಿಸುವ ವಿಳಾಸ :
ಶರಣ. ಆರ್. ಚಂದ್ರಶೇಖರ್
ಸಕಲಟ್ಟಿ ಗ್ರಾಮ, ಸೊಗತೊರೈ ಪೋಸ್ಟ್
ಕೂನೂರು -ತಾ, ನೀಲಗಿರಿ- ಜಿಲ್ಲೆ,
ದೂ: ಆರ್. ಚಂದ್ರಶೇಖರ್ - 09787137430
ಸಂಪತ್- 09994461070

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಮಂಟಪ, 2035,
20ನೇ ಮುಖ್ಯ ರಸ್ತೆ, 2ನೇ ಬ್ಲಾಕ್
ಬೆಂಗಳೂರು-560010
ದೂ : 080 -22923736, 9972253651

☹ ಸಮಸ್ಯೆ ? - ಸಮಾಧಾನ ! ☺

ಜಯಶ್ರೀ ಬಸವರಾಜ ಶಿವಪುರ, ಹಾವೇರಿ

? ಕೂಡಲ ಸಂಗಮದಲ್ಲಿ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠವನ್ನು ಮಾಡಿದರಲ್ಲ, ಬಸವ ಧರ್ಮ ಪೀಠಕ್ಕೆ ಪ್ರತಿಸ್ಪರ್ಧಿಯಾಗಲು ಮಾಡಲಾಗಿದೆ ಎಂದು ಕೆಲವರ ಊಹೆ. ನಿಮ್ಮ ಅಭಿಪ್ರಾಯವೇನು?

★ ಆ ರೀತಿ ತಪ್ಪು ತಿಳಿಯುವ ಅಗತ್ಯವೇನಿದೆ? ಒಂದು ಶಾಲೆ ಇದ್ದಲ್ಲಿ ಇನ್ನೊಂದು ಶಾಲೆ ತೆರೆದರೆ ವಿದ್ಯಾರ್ಥಿಗಳಿಗೆ ಹೆಚ್ಚಿನ ಅವಕಾಶ ಸಿಗುವಂತೆ ಆ ಧರ್ಮ(ಜಾತಿ) ಪೀಠದ ಭಕ್ತರೂ ಕೂಡಲ ಸಂಗಮಕ್ಕೆ ಬಂದು ಹೆಚ್ಚಿನ ಜ್ಞಾನವನ್ನು ಪಡೆದುಕೊಂಡು ಹೋಗಬಹುದು. ಹೇಗೆ ಹರದ್ವಾರ, ಋಷಿಕೇಶಗಳಲ್ಲಿ ವೈದಿಕ ಹಿಂದು ಪರಂಪರೆಯ ಮಠಗಳವರೆಲ್ಲ ತಮ್ಮ ಶಾಖೆಗಳನ್ನು ಹೊಂದುವರೋ ಹಾಗೆ ಧರ್ಮ ಕ್ಷೇತ್ರ ಕೂಡಲ ಸಂಗಮದಲ್ಲಿ ಎಲ್ಲ ಲಿಂಗಾಯತ ಮಠಗಳವರೂ ತಮ್ಮ ಮಠದ ಶಾಖೆಯನ್ನು ಹೊಂದಿರಬೇಕು ಎಂಬುದು ನಮ್ಮಾಸೆ. ಅನವಶ್ಯಕವಾಗಿ ತಪ್ಪು ತಿಳಿಯುವುದೇಕೆ?

ಸೂರ್ಯಕಾಂತ, ಬ.ಹುಲಿ, ಚಂದಾಪುರ, ತಾ- ಚಿಂಚೋಳಿ

? ಓರ್ವ ಸ್ವಾಮಿಗಳು ಚಿಂಚೋಳಿಯ ಒಡೆಯರ ಸಮಾಜದ(ಕಲ್ಲುಕುಟಿಗ ಒಡ್ಡರು) ಭಕ್ತರೊಬ್ಬರ ಮನೆಗೆ ಬಂದಾಗ ಸಿದ್ಧರಾಮೇಶ್ವರರು ನಿಮ್ಮ ಜಾತಿಯಲ್ಲಿ ಹುಟ್ಟಿದವರು ಎಂದರು. ಅವನ್ನು ನಂಬಿ ಜಿಲ್ಲಾ ಒಡ್ಡರ ಸಮಾಜದ ವತಿಯಿಂದ ಸಿದ್ಧರಾಮೇಶ್ವರರ ಜಯಂತಿ ಆಚರಿಸಲಾಯಿತು. ಸಿದ್ಧರಾಮೇಶ್ವರರು ಪೂರ್ವಾಶ್ರಮದಲ್ಲಿ ಯಾವ ಜಾತಿಯವರು?

★ ಅವರು ಕುಡು ಒಕ್ಕಲಿಗ ಜನಾಂಗದಲ್ಲಿ ಜನಿಸಿದರು. ನಂತರ ಲಿಂಗಾಯತ ಧರ್ಮವನ್ನು ಸ್ವೀಕರಿಸಿದರು, ಈ ಧರ್ಮದ ಸಂವಿಧಾನ ಕರ್ತೃಗಳಲ್ಲಿ ಒಬ್ಬರು. ಅಲ್ಲಮಪ್ರಭುದೇವರು ಬಂದಾಗ ಸಿದ್ಧರಾಮರನ್ನು ವಿಡಂಬಿಸಿ ಎಲ್ಲಿ ನಿಮ್ಮ ಒಡ್ಡರಾಮ? ಎಂದು ಕೇಳುವರು. ಜಾತಿ ವಾಚಕವಾಗಿ ಇಲ್ಲಿ ಬಳಸದೆ ಕೇವಲ ಸ್ಥಾವರಗಳನ್ನು ಕಟ್ಟುವ ಕೆಲಸವನ್ನು ಮಾಡುತ್ತಿರುವೆ ಎಂದು ಛೇಡಿಸಿದ್ದಾರೆ. ಸೊಲ್ಲಾಪುರದಲ್ಲಿ ಇಂದಿಗೂ ಸಿದ್ಧರಾಮೇಶ್ವರರ ವಂಶಸ್ಥರು ಕುಡು ಒಕ್ಕಲಿಗ ಜನಾಂಗದವರಿದ್ದಾರೆ. ಪೂಜೆ ಮಾಡುವವರು ಲಿಂಗಧಾರಿಗಳೇ ಆದ ಹಂಡೆ ಕುರುಬರು.

? ಫೆಬ್ರವರಿ ಕಲ್ಯಾಣ ಕಿರಣದ ಮುಖಪುಟ ಚೆನ್ನಾಗಿದೆ. ಆದರೆ ನಾಲ್ಕನೆಯ ಪುಟ ತಮಗೆ ಪುಷ್ಪವೃಷ್ಟಿ ಮಾಡಿರುವುದರಲ್ಲಿ ಕಣ್ಣು ಮುಚ್ಚಿಕೊಂಡಿರುವುದರಿಂದ ನೋಡಿದ ತಕ್ಷಣ ಒಮ್ಮೆಲೇ ಗಾಬರಿಯಾಯಿತು. ಇಂಥಾ ಪ್ರಮಾದ ಮುಂದೆ ಆಗಗೊಡಬಾರದಾಗಿ ವಿನಂತಿ.

★ ಇದೇ ರೀತಿ ಬಹಳ ಪತ್ರಗಳು ಬಂದಿವೆ. ಪುಷ್ಪವೃಷ್ಟಿ ಮಾಡುವಾಗ ಕಣ್ಣು ಮುಚ್ಚಿಕೊಳ್ಳದೆ ಇದ್ದರೆ ಹೂವಿನೊಳಗಿರುವ ಧೂಳಿ ಕಣಗಳಿಂದ ಕಣ್ಣಿಗೆ ತೊಂದರೆಯಾಗುತ್ತದೆ. ವೃಷ್ಟಿ ಮಾಡುವವರು ಸುತ್ತ ಇದ್ದುದರಿಂದ ಬೆಳಕು ಸಹ ಸರಿಯಾಗಿ ಬಿದ್ದಿರಲಿಲ್ಲ. ಹೀಗಾಗಿ ಆ ಫೋಟೋ ವಿಲಕ್ಷಣವಾಗಿ ಬಂದಿದೆ. ಅದು ಸರಿಯಾಗದು ಎಂದು ನಾನು ಸೂಚಿಸಿದ್ದೆ. ಆದರೂ ಕೆಲವರು ಅದನ್ನು ಆಯ್ಕೆ ಮಾಡಿದ್ದಾರೆ.

ದೇವಿಕಾ ಶರಣಪ್ಪ, ಬೆಂಗಳೂರು

? ನಮ್ಮ ಒಬ್ಬರು ಪರಿಚಿತರಿಗೆ ಹೆರಿಗೆಯಾಗಿತ್ತು, ನೋಡಲು ನರ್ಸಿಂಗ್ ಹೋಂಗೆ ಹೋಗಿದ್ದೆವು. ಆಗ ಮುಸ್ಲಿಂ ಮಹಿಳೆ ಒಬ್ಬರಿಗೆ ಹೆರಿಗೆಯಾಗಿತ್ತು, ಅವರು ಮೌಲ್ವಿಯ ನಿರೀಕ್ಷೆಯಲ್ಲಿದ್ದರು. ಮೌಲ್ವಿ ಬಂದು ಅವರ ಮಂತ್ರ ಹೇಳಿ ಮಗುವಿನ ಬಾಯಿಗೆ ಒಂದೆರಡು ಹನಿ ತೀರ್ಥ ಹಾಕಿ ಆಶೀರ್ವದಿಸಿದ ಬಳಿಕ ತಾಯಿಯು ಹಾಲನ್ನು ಕುಡಿಸಿದಳು. ಇದು ಒಳ್ಳೆಯ ಪದ್ಧತಿಯಲ್ಲವೆ? ನಮ್ಮಲ್ಲೇನಿದೆ?

★ ಈ ಜಗತ್ತಿಗೆ ಹೊಸ ಜೀವವು ಬರುವುದು ದೇವರ ಕೊಡುಗೆಯೇ ಸರಿ. ಚೆನ್ನಬಸವಣ್ಣನವರ ವಚನದಲ್ಲಿ ಈ ವಿಷಯವು ಪ್ರಸ್ತಾಪಿತವಾಗಿದೆ. ಲಿಂಗಧಾರಣೆ ಇಲ್ಲದೆ ಎದೆ ಹಾಲು -ಜೇನು ತುಪ್ಪವ ಮುಟ್ಟಿಸದಿಹುದೇ 20ನೆಯ ಆಚಾರ ಎನ್ನುತ್ತಾರೆ. ತಾಯಿ ಗರ್ಭವತಿ ಇದ್ದಾಗಲೇ 7 ತಿಂಗಳು ತುಂಬಿದ ಬಳಿಕ ಗರ್ಭಲಿಂಗಧಾರಣೆ ಮಾಡಿಸಿರಬೇಕು. ತನ್ನ ಧರ್ಮವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂಬ ಶರಣರು ಮಗುವಿನ ಜನನವಾಗಿ ಅದನ್ನು ಶುಚಿಗೊಳಿಸಿದ ಮೇಲೆ ಹಣೆಗೆ ವಿಭೂತಿ ಧಾರಣೆ ಮಾಡಿ ಮೈಗೆಲ್ಲ ಹಗುರವಾಗಿ ವಿಭೂತಿ ಸವರಿ, ಗರ್ಭವತಿ ತಾಯಿಗೆ ಕಟ್ಟಿದ ಇಷ್ಟಲಿಂಗವನ್ನು ಮಗುವಿನ ಕೊರಳಲ್ಲಿ ಹಾಕಿ, ಮೂರು ಹನಿ ತೀರ್ಥವನ್ನು ಬಾಯಿಯಲ್ಲಿ ಹಾಕಬೇಕು. ತಲೆ ಮೇಲೆ ಕೈ ಇಟ್ಟು ಜಯ ಬಸವರಾಜ ಹೇಳಬೇಕು. ಆಸ್ಪತ್ರೆಯಿಂದ ಮನೆಗೆ ಹೋದ ಮೇಲೆ ಗುರುಗಳಿಂದ ಲಿಂಗಧಾರಣೆ ಮಾಡಿಸಬೇಕು. ಯಾರಾದರೂ ಪೂಜ್ಯರಿಂದ ಆಶೀರ್ವಾದ ಪೂರ್ವಕವಾಗಿ ಕರುಣೋದಕವನ್ನು ಪಡೆದುಕೊಂಡು ತಂದಿರಬೇಕು. ಇಲ್ಲವೆ ತಾವೇ ಸಿದ್ಧಪಡಿಸಿ ಮಗುವಿನ ಬಾಯಿಗೆ ಹಾಕಬೇಕು.

□ ಚಂದ್ರಶೇಖರ ಮೇಲಿನಮನೆ, ಹುಬ್ಬಳ್ಳಿ

? ಪಂಚಮು ಸಾಲಿ ಗುರು ಪೀಠ ಈಗ 3 ಆದವು ಬೆಳಗಾವಿಯಲ್ಲೊಂದು, ಪೂಜ್ಯ ಶ್ರೀ 1118 ಜಗದ್ಗುರು ಬಸವ ಪ್ರಭು ಸ್ವಾಮಿಗಳು ಅದರ ಅಧಿಕಾರಿಗಳು, ಎರಡನೆಯದು ಕೂಡಲ ಸಂಗಮದಲ್ಲಿ ಆದುದು. ಪೂಜ್ಯ ಶ್ರೀ ಬಸವ ಜಯ ಮೃತ್ಯುಂಜಯ ಸ್ವಾಮಿಗಳ ಅವರ ಅಧಿಕಾರಿಗಳು. ಮೂರನೆಯದು ಹರಿಹರದಲ್ಲಿ ಆಯಿತು. ಮೊದಲವೆರಡು ಬಸವ ಪಥದವು. ಮೂರನೆಯದು ವೀರಶೈವ ಮಾರ್ಗದ್ದು. ಸಮಾಧಾನಕರ ಸಂಗತಿ ಎಂದರೆ ಈ ಮೂವರೂ ಅಡ್ಡಪಲ್ಲಕ್ಕಿ, ಬಂಗಾರದ ಕಿರೀಟ ಬಿಟ್ಟುದು ಮತ್ತು ರುದ್ರಾಕ್ಷಿ ಮುಕುಟ ಧರಿಸಿದ್ದು.

★ ಅಡ್ಡಪಲ್ಲಕ್ಕಿ ಮತ್ತು ಬಂಗಾರದ ಕಿರೀಟಗಳು ಇಂದಿನ ದಿನ ಮಾನದಲ್ಲಿ ಅಪಹಾಸ್ಯಕ್ಕೆ ಒಳಗಾಗಿರುವ ವಸ್ತುಗಳು. ವಿರಕ್ತರು ಒಬ್ಬೊಬ್ಬರೇ ಅಡ್ಡಪಲ್ಲಕ್ಕಿ ತ್ಯಜಿಸಿ ತಮ್ಮ ಕಿರೀಟಗಳನ್ನು ತೆಗೆದು ಇಟ್ಟರು. ಅಭಿಮಾನಕ್ಕೆ ಕಟ್ಟು ಬಿದ್ದು ಪಂಚಪೀಠದವರು ತೆಗೆಯಲಾರದೆ ಒದ್ದಾಡುತ್ತಿದ್ದಾರೆ. ಕಷ್ಟ ಪಟ್ಟು ಸಮರ್ಥಿಸಿ ಕೊಳ್ಳುವ ರಾದರೂ ಅವರ ಅಂತರಾತ್ಮಕ್ಕೆ ಮನವರಿಕೆಯಗಿದೆ. ಆದರೂ ಬಿಟ್ಟು ಬಿಡಲು ಪ್ರತಿಷ್ಠೆ ಅಡ್ಡ ಬರುತ್ತಿದೆ. ಇಂಥ ಸನ್ನಿವೇಶದಲ್ಲಿ ಈ ನೂತನ ಜಗದ್ಗುರುಗಳು ಕಿರೀಟ, ಪಲ್ಲಕ್ಕಿಯ ವ್ಯಾಮೋಹಕ್ಕೆ ಸಿಕ್ಕರೆ ಪ್ರಜ್ಞಾವಂತರಿಂದ ಅಪಹಾಸ್ಯಕ್ಕೆ ಈಡಾಗಬಹುದೆಂದು ಮೊದಲೇ ಜಾಣತನ ತೋರಿ, ರುದ್ರಾಕ್ಷಿ ಮುಕುಟ ಧರಿಸಿದ್ದಾರೆ. ಪಂಚಾಚಾರ್ಯರ ನೆರಳಿನಿಂದ ಹೊರಬಂದು ಈ ಸುಧಾರಣೆ ತಂದುದಕ್ಕೆ ಅವರನ್ನು ಅಭಿನಂದಿಸೋಣ.

□ ಶರಣ. ಸೋಮಶೇಖರಯ್ಯ ತೋಟದ ಮನೆ, ಎಳನಾಡು

? ನನ್ನ ಮಗ ಸೊಲ್ಲಾಪುರಕ್ಕೆ ಹೋದಾಗ ಶ್ರೀ ಸಿದ್ಧರಾಮೇಶ್ವರ ದೇವಸ್ಥಾನದ ಪೂಜಾರಿ ಹಬ್ಬು ಮಂಡಳಿ ಪ್ರಕಟಿಸಿರುವ ಶ್ರೀ ತರ್ಕ ತೀರ್ಥ ವೇದಾಂತ ವಿಶಾರದ ಶ್ರೀ ನೀಲಕಂಠ ಶಿವಾಚಾರ್ಯ, ಹೂಲಿ ಬರೆದಿರುವ ಶ್ರೀ ರಾಘವಾಂಕ ಕವಿಯ ಶ್ರೀ ಸಿದ್ಧರಾಮೇಶ್ವರ ಚರಿತ್ರೆ ಎಂಬ ಪುಸ್ತಕದ ಪ್ರತಿಯನ್ನು ತಂದನು. ಓದಿ ಗಾಬರಿ ಮತ್ತು ಆಶ್ಚರ್ಯ ಉಂಟಾದವು. ಕನ್ನಡ ಸಾಹಿತ್ಯ ಪರಿಷತ್ತು ಬಿಡುಗಡೆ ಮಾಡಿರುವ ರಾಘವಾಂಕನ ಸಿದ್ಧರಾಮ ಚರಿತ್ರೆಯಿಂದ ಬೇರೆಯೇ ಆಗಿ, ಈ ಚರಿತ್ರೆ ಇದೆ. ಪ್ರಕಾಶಕರ ಮಾತು ಎಂಬ ಶೀರ್ಷಿಕೆಯಡಿಯಲ್ಲಿ ಹೀಗೆ ಬರೆಯಲಾಗಿದೆ. ಅಲ್ಲಮ ಪ್ರಭು - ಚನ್ನಬಸವಣ್ಣನವರಿಗೆ ಸಿದ್ಧರಾಮೇಶ್ವರರಿಂದಲೇ ದೀಕ್ಷೆಯಾಯಿತು ಎಂದು. ಇದೇನು ಈ ವಿಪರ್ಯಾಸ ?!

★ ಪಂಚ ಪೀಠದವರ ಪರಂಪರೆಯವರು ಬರೆಸಿರುವ ಹಲವಾರು ಕೃತ್ರಿಮ ಪುಸ್ತಕಗಳಲ್ಲೆಲ್ಲ ಹಾಗೆಯೇ! ಮುದ್ದೇಗೌಡ ಈ ಆಚಾರ್ಯರ ಕೈಲಿ ಸಿಕ್ಕಿ ಮುದ್ದದೇವ ಶಿವಾಚಾರ್ಯನಾಗಿದ್ದಾನೆ. ಅಲ್ಲಮಪ್ರಭು ಚನ್ನಬಸವಣ್ಣನವರಿಗೆ ಸಿದ್ಧರಾಮೇಶ್ವರರಿಂದ ದೀಕ್ಷೆಯಾಗಿದೆ. ಇಂಥ ಅಸಂಬದ್ಧ ವಿಚಾರಗಳನ್ನು ಬರೆದು ಸೇರಿಸಲಾಗಿದೆ. ಇವರು ಇಂಥ ವಿಚಾರದ ಪುಸ್ತಕ/ ಕಾವ್ಯ ಬರೆದರೆ ಜನರು ಓದುವುದಿಲ್ಲ ಎಂದು ಅಕ್ಕಿಯಲ್ಲಿ ಕಲ್ಲಿನ ಹರಳು ಸೇರಿಸಿ ಮಾರುವ ಕಳ್ಳ ವ್ಯಾಪಾರಿಗಳಂತೆ ರಾಘವಾಂಕನ ಸಿದ್ಧರಾಮ ಚರಿತ್ರೆಯಲ್ಲಿ ಕೃತ್ರಿಮ ಪದ್ಯಗಳನ್ನು ಬರೆದು ಸೇರಿಸಿದ್ದಾರೆ. ನೂರಾರು ವಚನಗಳಲ್ಲಿ, ಶ್ರೀ ಸಿದ್ಧರಾಮೇಶ್ವರರು ತಮಗೆ ದೀಕ್ಷೆಯಾದ ಪ್ರಸಂಗವನ್ನು, ಕಲ್ಯಾಣಕ್ಕೆ ಬಂದುದನ್ನು ಚನ್ನಬಸವಣ್ಣನವರು ದೀಕ್ಷಾ ಗುರು ಎಂಬುದನ್ನು ವಿವರಿಸಿದ್ದಾರೆ. ಪಂಚಪೀಠದ ಪರಂಪರೆಯವರಾದ ಹೂಲಿಯ ಮಠದ ನೀಲಕಂಠ ಶಿವಾಚಾರ್ಯರ ಕುತಂತ್ರಕ್ಕೆ ದೇವಾಲಯದ ಪೂಜಾರಿ ಮಂಡಳಿ ಬಲಿಯಾಗಿದ್ದರ ಫಲಶ್ರುತಿ ಈ ಪುಸ್ತಕ.

□ ಚಂದ್ರಕಾಂತ ಶೇಳಗಿ, ಕೊಲ್ಹಾಪುರ, ಮಹಾರಾಷ್ಟ್ರ

? ಕೊಲ್ಹಾಪುರದಲ್ಲಿ ಪ್ರಸಿದ್ಧ ಜೈನ ಮುನಿ ತರುಣ ಸಾಗರ ಮಹಾರಾಜರು ಬಂದಿದ್ದರು. ಅವರು ಹೇಳಿದರು., ಜೈನ್ ಧರ್ಮ ಸ್ವತಂತ್ರ ಧರ್ಮ ಎಂಬ ಮಾನ್ಯತೆ ಇದ್ದರೂ ಜೈನರಿಗೆ ಅಲ್ಪಸಂಖ್ಯಾತರ ಸೌಲಭ್ಯ ಸಿಕ್ಕಿಲ್ಲ. ಅದಕ್ಕಾಗಿ ಒಗಟ್ಟಿನಿಂದ ಹೋರಾಡಿರಿ ಎಂದು ಕರೆಕೊಟ್ಟರು. ನಮ್ಮ ಲ್ಲಿ ನಿಮ್ಮನ್ನು ಬಿಟ್ಟು ಒಬ್ಬ ಸ್ವಾಮಿಗಳಾದರೂ ಹೀಗೆ ಧೈರ್ಯವಾಗಿ ಹೇಳುವುದಿಲ್ಲವಲ್ಲ ?

★ ಏನು ದುರ್ದೈವವೋ; ಪ್ರಗತಿಪರ ಅವೈದಿಕ ಲಿಂಗಾಯತ ಧರ್ಮಕ್ಕೆ ವೀರಶೈವವಾದಿಗಳೆಂಬ ಕೀಡೆಗಳು ತಗುಲಿಕೊಂಡಿವೆ. ಒಗ್ಗಟ್ಟಾಗಿ ಹೋರಾಡುವ ಬದಲು ಒಳಪಂಗಡಗಳೆಂಬ ಬಿರುಕುಗಳನ್ನು ಕೆಲವು ಮಠಾಧೀಶರು ರಾಜಕೀಯ ಧುರೀಣರು ಜಾಸ್ತಿ ಮಾಡುತ್ತಿದ್ದಾರೆ. ಡಾ|| ಚಿದಾನಂದ ಮೂರ್ತಿ ಎಂಬ ಪ್ರತಿಗಾಮಿ ಚಿಂತಕ ಗಂಟುಬಿದ್ದಿದ್ದಾರೆ. ಈ ಎಲ್ಲ ಸಂಕೋಲೆಗಳನ್ನು ಬಿಡಿಸಿಕೊಂಡು ಲಿಂಗಾಯತ ಧರ್ಮ ಮಾನ್ಯತೆ ಪಡೆಯಬೇಕಾದರೆ ಬಸವಣ್ಣನವರ ಸಂದೇಶದ ಬಲದಿಂದ ಮಾತ್ರ, ಒಗ್ಗಟ್ಟಿನ ಹೋರಾಟ ಅತ್ಯಗತ್ಯವಾಗಿದೆ.

ನೀರಲ್ಲಾದ ಮುತ್ತು

- ಶರಣ ಸಚ್ಚಿದಾನಂದ ಚಟನಳ್ಳಿ

ಮುತ್ತು ನೀರಲ್ಲಾಯಿತ್ತು, ಉಪ್ಪು ನೀರಲ್ಲಾಯಿತ್ತು,
ವಾರಿಕಲ್ಲು ನೀರಲ್ಲಾಯಿತ್ತು.
ಉಪ್ಪು ಕರಗಿತ್ತು, ವಾರಿಕಲ್ಲು ಕರಗಿತ್ತು
ಮುತ್ತು ಕರಗಿದುದನಾರು ಕಂಡವರಿಲ್ಲ.ಈ
ಸಂಸಾರಿ ಮಾನವರು ಲಿಂಗವ ಮುಟ್ಟಿಯೂ ಭವ ಭಾರಿಗಳಾದರು.
ನಾ ನಿಮ್ಮ ಪೂಜಿಸಿ ಕರಿಗೊಂಡೆನಯ್ಯಾ, ಚೆನ್ನಮಲ್ಲಿಕಾರ್ಜುನಯ್ಯಾ.

-ಅಕ್ಕಮಹಾದೇವಿ

ಸಮುದ್ರದ ನೀರಿನಿಂದ ಉಪ್ಪು ತಯಾರಿಸುವುದು ನಮಗೆಲ್ಲ ಗೊತ್ತಿದೆ. ಆದರೆ ಉಪ್ಪನ್ನು ನೀರಲ್ಲಿ ಹಾಕಿದಾಗ ಸ್ವಲ್ಪ ಸಮಯದಲ್ಲಿಯೇ ಕರಗಿ ಹೋಗುತ್ತದೆ. ಕೆಲವೊಮ್ಮೆ ವಾರಿಕಲ್ಲಿನ ಮಳೆಯಾಗುತ್ತದೆ. ಆಗ ಮಳೆನೀರಿನ ಜೊತೆಗೆ ವಾರಿಕಲ್ಲುಗಳೂ ಬೀಳುತ್ತವೆ. ಆದರೆ ಕೆಲವೇ ಕ್ಷಣಗಳಲ್ಲಿಯೇ ವಾರಿಕಲ್ಲುಗಳೂ ಕರಗಿಹೋಗುತ್ತವೆ. ಆದರೆ ಮುತ್ತು ಹಾಗಲ್ಲ, ಬೀಳುವ ಸ್ವಾತಿಯ ಮಳೆಯ ನೀರಿನಿಂದ ಅಪರೂಪಕ್ಕೊಮ್ಮೆ ತಯಾರಾಗುತ್ತದೆ. ಸಮುದ್ರದ ನೀರಿನ ಮೇಲೆ ಬಾಯಿದೆರೆದು ಕುಳಿತಿರುವ ಚಿಪ್ಪಿನಲ್ಲಿ ಸ್ವಾತಿಯ ಮಳೆ ಹನಿ ಬಿದ್ದಾಗ ಆ ಚಿಪ್ಪು ಸಮುದ್ರದ ಆಳಕ್ಕೆ ಹೋಗುತ್ತದೆ. ಅಲ್ಲಿ ಹಲವಾರು ದಿನಗಳ ನಂತರ ಮುತ್ತು ತಯಾರಾಗುತ್ತದೆ. ಇಂಥ ಮುತ್ತು ಎಂದೂ ಕರಗುವುದಿಲ್ಲ, ಶಾಶ್ವತವಾಗಿ ಉಳಿಯುತ್ತದೆ.

ಅದೇ ರೀತಿ ಈ ಮರ್ತ್ಯಲೋಕದಲ್ಲಿ ಅನೇಕ ಮಾನವರು ಹುಟ್ಟುತ್ತಾರೆ ಮತ್ತು ಉಪ್ಪು ವಾರಿಕಲ್ಲುಗಳಂತೆ ಒಂದು ದಿನ(ಕರಗಿ ಹೋಗುತ್ತಾರೆ) ಇಲ್ಲವಾಗುತ್ತಾರೆ. ಆದರೆ ಮಹಾತ್ಮರು ಹಾಗಲ್ಲ, ಈ ಭೂಮಿಯ ಮೇಲೆ ಮಾನವ ಶರೀರಧಾರಿಯಾಗಿ ಜನಿಸಿದರೂ ಅವರು ಅಳಿದು ಹೋಗುವುದಿಲ್ಲ ಮುತ್ತಿನಂತೆ ಶಾಶ್ವತವಾಗಿ ಇರುತ್ತಾರೆ.

ಇಲ್ಲಿಗೆ 63 ವರ್ಷಗಳ ಹಿಂದೆ ಮನುಕುಲದ ಸಾಗರದ ಮೇಲೆ, ಅನೇಕ ಕಷ್ಟ ಕಾರ್ಪಣ್ಯಗಳು ಎನ್ನುವ ಅಲೆಗಳಿಗೆ ತುತ್ತಾಗದೆ ದೇವಾನುಗ್ರಹದ ಸ್ವಾತಿಯ ಹನಿಗಾಗಿ ಬಾಯಿದೆರೆದ ಚಿಪ್ಪೊಂದು ಚಿನ್ಮೂಲಾದ್ರಿಯಲ್ಲಿ ತಪಿಸುತ್ತಿತ್ತು. ದೇವಾನುಗ್ರಹದ ಸ್ವಾತಿಯ ಬಿಂದು ತನ್ನ ಚಿದ್ಗರ್ಭದಲ್ಲಿ ಬೀಳುತ್ತಲೇ ತನ್ನ ಸಂಪೂರ್ಣ ತಪಸ್ ಶಕ್ತಿಯನ್ನು ಧಾರೆಯೆರೆದು ಮಾತಾಜಿಯವರೆನ್ನುವ ಅಮೂಲ್ಯ ಮುತ್ತನ್ನು ಜಗತ್ತಿಗೆ ನೀಡಿದ ಆ ದಿವ್ಯ ಚಿಪ್ಪು ಶರಣೆ ತಾಯಿ ಗಂಗಮ್ಮನವರು.

ಮಾತಾಜಿಯವರು ತೋರಲು ಮಾನವ ಶರೀರಧಾರಿಯಾಗಿ ಬಂದರೂ, ಉಪ್ಪು ವಾರಿಕಲ್ಲುಗಳಂತೆ ಅವರು ಕರಗಿ ಹೋಗದೆ ಶಾಶ್ವತವಾಗಿ ಗುರುಬಸವಣ್ಣನವರ ಕೀರ್ತಿ ಮುಕುಟದಲ್ಲಿ ಶೋಭಿಸುತ್ತಾರೆ. ನೆನಪಿನಾಳದಿಂದ ಪುಸ್ತಕ ಓದಿದಾಗ ಮಾತಾಜಿಯವರು ಒಬ್ಬ ಮಹಾತ್ಮರು ಎನ್ನುವುದರಲ್ಲಿ ಯಾವುದೇ ಸಂದೇಹ ಉಳಿಯುವುದಿಲ್ಲ, ಮಾತಾಜಿಯವರ ಜೀವನವನ್ನು ಮಹಾತ್ಮ ಬುದ್ಧರ ಜೀವನದೊಂದಿಗೆ ಹೋಲಿಸಿದಾಗ, ಮಾತಾಜಿಯವರ ಬಹುಮುಖ ವ್ಯಕ್ತಿತ್ವ, ಅವರ ಚಿತ್ತ ಸಮತೆಯ ಅಗಾಧ ಶಕ್ತಿ ನಮಗೆ ಗೋಚರವಾಗುತ್ತದೆ. ರಾಜಕುಮಾರ ಸಿದ್ಧಾರ್ಥನು ಕೇವಲ ಒಂದೇ ಒಂದು ಶವ, ಒಬ್ಬನೇ ಒಬ್ಬ ರೋಗಿ, ಒಬ್ಬನೇ ಒಬ್ಬ ವಯಸ್ಸಾದ ವ್ಯಕ್ತಿಯನ್ನು ನೋಡಿ, ಜೀವನ ನಶ್ವರವೆಂದು ತಿಳಿದು ದೃಢನಿರ್ಧಾರವನ್ನು ಮಾಡಿ, ಅರಮನೆಯನ್ನು ತೊರೆದು ಕಾಡಿಗೆ ಬಂದು ತಪಸ್ಸಿಗೆ ಕುಳಿತುಕೊಳ್ಳುತ್ತಾರೆ. ಆಗ ಅವರಿಗೆ ಮಾಯೆ (ಮಾರಾ)ಕಾಡುತ್ತದೆ. ಮಾಯೆ/ಮಾರಾ ಎಂದರೆ ಮನಸ್ಸಿನಲ್ಲಾಗುವ ಹೊಯ್ದಾಟದ ಒಂದು ಸ್ಥಿತಿ. ಆ ಮಾಯೆ ಹೇಳುತ್ತದೆ "ವಿಶಾಲವಾದ ರಾಜ್ಯ, ಭವ್ಯವಾದ ಅರಮನೆ, ಸುಂದರವಾದ ಹೆಂಡತಿ, ಮುದ್ದಾದ ಮಗು ಎಲ್ಲವನ್ನೂ ಬಿಟ್ಟು ಈ ಕಾಡಿನಲ್ಲಿ ನೀನೇನು ಸಾಧಿಸಬೇಕು ಎಂದುಕೊಂಡಿರುವೆ? ಈಗಲೂ ಕಾಲ ಮಿಂಚಿಲ್ಲ, ನೀನು ಅರಮನೆಗೆ ಹಿಂದಿರುಗು" ಎಂದು ಹೇಳುತ್ತದೆ. ಸಿದ್ಧಾರ್ಥ ತಮ್ಮ ವಿವೇಕ ಪ್ರಜ್ಞೆಯನ್ನು ಜಾಗೃತ ಗೊಳಿಸಿಕೊಂಡು ಈ ಮಾಯೆಯನ್ನು ಮೆಟ್ಟಿ ಇಟ್ಟ ಹೆಜ್ಜೆ ಹಿಂದೆಗೆಯಲಾರೆ ಎಂದು ದಿಟ್ಟ ನಿಲುವನ್ನು ತಾಳುತ್ತಾರೆ.

ಮಾತಾಜಿಯವರು ಮನೆ ಬಿಟ್ಟು ಬಂದ ಪ್ರಸಂಗವು ಸಿದ್ಧಾರ್ಥ ಮನೆ ಬಿಟ್ಟ ಬಂದ ಪ್ರಸಂಗಕ್ಕೆ ಅತಿ ಹತ್ತಿರದಲ್ಲಿ ಹೋಲುತ್ತದೆ. ಮಾತಾಜಿಯವರ ಅಜ್ಜಂದಿರು ಆಗರ್ಭ ಶ್ರೀಮಂತರು; ಭವ್ಯವಾದ ಮನೆ, 300 ಎಕರೆಗೂ ಮೇಲ್ಪಟ್ಟು ಜಮೀನು. ಎಲ್ಲವನ್ನು ತೊರೆದು ಮಾತಾಜಿ ಪೂಜ್ಯ ಶ್ರೀ ಲಿಂಗಾನಂದ ಸ್ವಾಮೀಜಿಯವರಿಂದ ಜಂಗಮ ದೀಕ್ಷೆ ಪಡೆದು ಅವರ ಆಶ್ರಯಕ್ಕೆ ಬಂದರು. ಆಗ ಮಾತಾಜಿಯವರ ಮನೆಯವರು ಮಾತಾಜಿಯವರನ್ನು ಮನೆಗೆ ಕರೆದುಕೊಂಡು ಹೋಗಲು ಹುಡುಕಿಕೊಂಡು ದಾವಣಗೆರೆಗೆ ಬಂದರು. "ಆಸ್ತಿ ಮನೆಗಳು ಎಲ್ಲಾ ನಿನ್ನ ಹೆಸರಿಗೆ ಮಾಡುತ್ತೇವೆ. ಇಲ್ಲೇ ಮಠ ಕಟ್ಟು, ದೇವರ ಆಣೆಗೂ ನಿನಗೆ ಮದುವೆ ಮಾಡೋದಿಲ್ಲ, ನಿನಗೆ ಏನೇನು ಬೇಕೋ ಎಲ್ಲವನ್ನು ತಂದುಕೊಡುತ್ತೇವೆ ಮನೆಗೆ ಬಾ" ಎಂದು ಮಾತಾಜಿಯವರನ್ನು ಒಂದೇ ಸಮನೆ ಮನೆಗೆ ಹಿಂದಿರುಗಲು ಒತ್ತಾಯ ಮಾಡಿದರೂ ಮಾತಾಜಿ ತಮ್ಮ ನಿರ್ಧಾರವನ್ನು ಬದಲಿಸಲೇ ಇಲ್ಲ. ಗುರುಗಳು ಕೂಡ "ಹೋಗಮ್ಮ, ನೀನು ಒಬ್ಬಳೇ ಮಗಳು; ಅವರು ನಿನ್ನನ್ನು ಬಿಟ್ಟು ಹೋಗಲ್ಲ ಈಗ ಹೋಗು ಮುಂದೆ ನೋಡೋಣ" ಎಂದರು. ಆಗ ಮಾತಾಜಿಯವರು "ನೀವೂ ಹೀಗೆ ಹೇಳುತ್ತೀರಾ? ನನಗೆ ಮನೆಗೆ ಹೋಗಲಿಕ್ಕೆ ಇಷ್ಟವಿಲ್ಲ. ನಿಮಗೆ ಇಲ್ಲಿ ನನ್ನನ್ನು ಇಟ್ಟುಕೊಳ್ಳಲಿಕ್ಕೆ ಇಷ್ಟವಿಲ್ಲದಿದ್ದರೆ ನಾನು ಶ್ರೀಶೈಲಕ್ಕೆ ಕದಳಿ ವನಕ್ಕೆ ಹೋಗುತ್ತೇನೆ." ಎಂದರು. ಇದನ್ನು ನೋಡಿದಾಗ ಮನೆಬಿಟ್ಟು ಬಂದಾಗ ಮಾತಾಜಿಯವರ ಮನದಲ್ಲಿ ಯಾವುದೇ ಮಾಯೆ ಹುಟ್ಟಲಿಲ್ಲ ಮಾತ್ರವಲ್ಲ ಇತರರು ಒಡ್ಡಿದ ಮಾಯೆಗೂ ಮಣಿಯಲಿಲ್ಲ. ಹೀಗೆ ತಮ್ಮ ದೃಢ ನಿರ್ಧಾರವನ್ನು ಬದಲಿಸದೆ ಧೀಮಂತ ಗುರು ಪೂಜ್ಯ ಶ್ರೀ ಲಿಂಗಾನಂದ ಗುರುಗಳ ದಿಟ್ಟ ಶಿಷ್ಯರಾದರು. ಇದರಿಂದಾಗಿ ಇಂದು ಮಾತಾಜಿಯವರು ಬಸವ ತತ್ವದ ಹೊಂಬೆಳಕಾಗಿ ಕಂಗೊಳಿಸುತ್ತಿದ್ದಾರೆ. ಒಂದು ವೇಳೆ ಅಂದು ಮಾತಾಜಿಯವರು ಜನರ ನಿಂದನೆ, ಮನೆಯವರ ಕಾಟವನ್ನು ತಾಳಲಾರದೆ ತಾವಿಟ್ಟ ಹೆಜ್ಜೆ ಹಿಂದಕ್ಕೆ ತೆಗೆದುಕೊಂಡಿದ್ದರೆ, ನಾವಿಂದು ವೈದಿಕತೆಯಲ್ಲಿ ಅಜ್ಞಾನದ ಕತ್ತಲೆ ತುಂಬಿದ ಯಾವುದೋ ಒಂದು ಮೂಲೆಯಲ್ಲಿ ಅನಾಥರಾಗಿ ಶೂದ್ರರಾಗಿ ಕೊಳೆಯಬೇಕಾಗುತಿತ್ತು. ನಮ್ಮನ್ನು ವಂಶ ವಂಶ ತಪ್ಪದೇ ಅರಸಿಕೊಂಡು ಬರುತ್ತಿರುವ, ನಮ್ಮನ್ನು ಹಿಡಿದು ಹಿಡಿದು ಕೊಲ್ಲುತ್ತಿರುವ ಭವವನ್ನು ಹೊಡೆದೋಡಿಸಿ ಗುರು ಬಸವಣ್ಣನವರ ಭಕ್ತರನ್ನಾಗಿಸಿದವರು ಮಾತಾಜಿಯವರು. ಇವರ ಋಣವನ್ನು ನಾವು ಏನೇ ಮಾಡಿದರೂ ತೀರಿಸಲು ಸಾಧ್ಯವೇ ಇಲ್ಲ.

ಮನುಕುಲವೆಂಬ ಮಹಾವೃಕ್ಷವು ಮಾತಾಜಿಯವರಂಥ ದಿವ್ಯ ಸುಮಗಳನ್ನು ಮೇಲಿಂದ ಮೇಲೆ ಅರಳಿಸುತ್ತ ಬಸವ ತತ್ವದ ಪರಿಮಳವನ್ನು ಬೀರುತ್ತ ಮರ್ತ್ಯಲೋಕವನ್ನು ಸುಂದರಗೊಳಿಸಲಿ ಎಂದು ಲಿಂಗದೇವರಲ್ಲಿ ಮೊರೆಯಿಡುತ್ತೇನೆ. ಕೋಟ ಜನರ ಮುಕ್ತಿಗಾಗಿ ಮುಕ್ತಿಯ ಹಂಗನ್ನೂ ತೊರೆದು ಶ್ರಮಿಸುತ್ತಿರುವ ಮಾತಾಜಿಯವರು ಈ ಇಳೆಯಲ್ಲಿ ಬಾಳಬೇಕು ನೂರಾರು ವರ್ಷ. ಇದರಿಂದ ನಮ್ಮೆಲ್ಲರ ಬಾಳಲ್ಲಿ ತುಂಬುವುದು ಹರ್ಷ. ವೈರಾಗ್ಯಯೋಗದ ಮೇಲೆ ನಿಂದು 62 ವರ್ಷಗಳನ್ನು ಪೂರೈಸಿ 63ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಪೂಜ್ಯ ಶ್ರೀ ಮಾತಾಜಿಯವರಿಗೆ ಗುರು ಬಸವಣ್ಣನವರು ಹಾಗು ಲಿಂಗದೇವರು ಆರೋಗ್ಯಯುತವಾದ ದೀರ್ಘಾಯುಷ್ಯವನ್ನು ಕರುಣಿಸಲಿ ಎಂದು ಹೃದಯ ತುಂಬಿ ಪ್ರಾರ್ಥಿಸುತ್ತೇನೆ.

ಕಲ್ಯಾಣ ಪರ್ವ ಅಕ್ಟೋಬರದಲ್ಲಿ

ಶರಣ ಭೂಮಿ ಬಸವ ಕಲ್ಯಾಣದಲ್ಲಿ ಪ್ರತಿ ವರ್ಷದ ಮೇ 1,2 ಮತ್ತು 3ರಂದು ಕಲ್ಯಾಣ ಪರ್ವ ಎಂಬ ಧಾರ್ಮಿಕ ವಾರ್ಷಿಕ ಸಮಾವೇಶವನ್ನು ನಡೆಸಲಾಗುತಿತ್ತಷ್ಟೆ. ಆ ಸಮಯದಲ್ಲಿ ಭಯಂಕರವಾದ ಗಾಳಿ, ಮಳೆ ಬೀಳುವುದರಿಂದ 2 ವರ್ಷವೂ ಬಹಳ ತೊಂದರೆ ಉಂಟಾಯಿತು. ಆದಕ್ಕಾಗಿ ಕಲ್ಯಾಣ ಪರ್ವವನ್ನು ಅಕ್ಟೋಬರ್ ತಿಂಗಳಿಗೆ - ದಸರಾ ಸಮಯಕ್ಕೆ ಮುಂದೂಡಲಾಗಿದೆ. ಬಸವ ಧರ್ಮದ ವಿಜಯೋತ್ಸವದ ನಿಮಿತ್ತ ವಿಜಯ ದಶಮಿಯಂದು ಆರಂಭಿಸಿ 3 ದಿವಸಗಳ ಕಾರ್ಯಕ್ರಮವನ್ನು ನಡೆಸಲಾಗುವುದು.

ರಾಷ್ಟ್ರೀಯ ಬಸವ ದಳಗಳವರು ಮಹಾಮನವಮಿಯಂದು (8-10-2008) ತಮ್ಮ ಊರುಗಳಲ್ಲಿ ಹರಳಯ್ಯ - ಮಧುವರಸರ ಹುತಾತ್ಮ ದಿನಾಚರಣೆ ಆಚರಿಸಿ ಹೊಡಬೇಕು.

ದಿ. 9-10-2008ರಂದು ಉದ್ಘಾಟನೆ, ದಿ 10-10-2008 ಶರಣ ವಂದನೆ, ದಿ.11-10-2008ರಂದು ಮೆರವಣಿಗೆ, ಪಥ ಸಂಚಲನ, ನಂತರ ಪೀಠಾರೋಹಣ. ಈ ಬದಲಾವಣೆ ಗಮನಿಸಬೇಕು ಮತ್ತು ಇತರರಿಗೂ ತಿಳಿಸಬೇಕು.

ವಚನ ದುಂದುಭಿ -13

- ಶರಣ ಸಚ್ಚಿದಾನಂದ ಚಟನಳ್ಳಿ


1. ಪ್ರಸಾದಿ ಸ್ಥಲದ ಭಕ್ತನಲ್ಲಿ ಪ್ರಮುಖವಾಗಿ ಅಳವಡಬೇಕಾದ ಗುಣ ಯಾವುದು?
2. ಪರಮ ಪ್ರಸಾದಿ ಎನ್ನುವ ನಾಮ ವಿಶೇಷಣ ಯಾವ ಶರಣರಿಗೆ ಅನ್ವಯವಾಗುತ್ತದೆ?
3. ಅಕ್ಕನವರ ಪ್ರಕಾರ ಕಣ್ಣಿಗೆ, ಕಿವಿಗೆ, ಮತ್ತು ಕೈಗಳಿಗೆ ಯಾವುದು ಶೃಂಗಾರ?
4. ಉಳವಿಯ ಮಹಾಮನೆಯಲ್ಲಿ ತತ್ವವನ್ನು ಮೆರಸಿದ ಬಗೆಯನ್ನು ಜನಪದರು ಹೇಗೆ ಹೇಳಿದ್ದಾರೆ?
5. ಬೊಕ್ಕಸದ ಚಿಕ್ಕಣ್ಣನವರ ವಚನಾಂಕಿತವೇನು?
6. ಕಾಲಕಣ್ಣಿಯ ಕಾಳಮ್ಮನವರ ವಚನಾಂಕಿತವೇನು?
7. ಅನುಭವ ಮಂಟಪದ ಐತಿಹಾಸಿಕತೆ ಪುಸ್ತಕದ ಲೇಖಕರು?
8. ಏಕಾದಶ ಪ್ರಸಾದಗಳು ಯಾವುವು?
9. ಧ್ಯಾನ ಮಾಡುವಾಗ ಹೃದಯ ಕಮಲದಲ್ಲಿ ದೃಷ್ಟಿ ನಿಲ್ಲಿಸುವುದು ಹೇಗೆ?
10. ತ್ರಿಪುಟಿ ಅಳಿಯುವುದು ಎಂದರೇನು? ಮತ್ತು ಈ ಸ್ಥಿತಿ ಭಕ್ತನಿಗೆ ಯಾವಾಗ ಬರುತ್ತದೆ?
11. ತ್ರಿಪುರಗಳು ಯಾವುವು?
12. ಲೇಸ ಕಂಡು ಮನ ಬಯಸಿ ಬಯಸಿ ಆಸೆ ಮಾಡಿದರಿಲ್ಲ ಕಂಡಯ್ಯ
    ತಾಳ ಮರಕ್ಕೆ ಕೈಯ ನೀಡಿ ಮೇಲೆ ನೋಡಿ ಗೋಣು ನೊಂದುದಯ್ಯ
    ಲಿಂಗದೇವ ಕೇಳಯ್ಯ ನೀನೀವ ಕಾಲಕ್ಕಲ್ಲದಿಲ್ಲ ಕಂಡಯ್ಯಾ!
    ಇದು ಯಾವ ಸ್ಥಲದ ವಚನ?
13. ಎನ್ನ ಕರಸ್ಥಲದ ಲಿಂಗವ ಅನಿಮಿಷ ಕೊಂಡನು. ಅನಿಮಿಷನ ಕರಸ್ಥಲದ ಲಿಂಗವ ನೀವು ಕೊಂಡಿರಿ. ನಿಮ್ಮ ಕರಸ್ಥಲವೇ ಪರಸ್ಥಲವಾಯಿತ್ತು ಕುರುಹಳಿದಲ್ಲಿ ಕುರುಹ ಕೊಂಬ ಪರಿ ಎಂತಯ್ಯಾ. ಇದು ಯಾರ ವಚನ?
14. ಬಂದಹನೆಂದು ಬಟ್ಟೆಯ ನೋಡಿ, ಬಾರದಿದ್ದರೆ ಕರಗಿ ಕೊರಗಿದೆನವ್ವ! ಇದು ಯಾರ ವಚನ?
15. ಅನ್ನ ಪಾನ, ಐಶ್ವರ್ಯ ಪಾನ.......ಈ ವಚನ ಪೂರ್ತಿ ಮಾಡಿ ಮತ್ತು ಇದು ಯಾರ ವಚನ?

ವಚನ ದುಂದುಭಿ -12ರ ಸರಿ ಉತ್ತರಗಳು

1. ಶರಣ. ಬಿ.ಎಸ್.ಯಡೆಯೂರಪ್ಪನವರು
2. ಮಾತಾಜಿಯವರಿಗೆ, ಶರಣೆ. ತಾಯಿ ಗಂಗಮ್ಮ
3. ಶರಣರು ಖಂಡಿಸಿದ ಮೂಢಾಚಾರಗಳು-ಸಿದ್ರಾಮಪ್ಪ ಪಾಟೀಲ, ಲಿಂಗಾಯತರು ಹಿಂದುಗಳಲ್ಲ-ಮಾತಾಜಿ, ಕಾಯಕ ದಾಸೋಹ-ಮಾತೆ ಕಸ್ತೂರಿ, ಅನುಭಾವದೆಡೆಗೆ-ಸಚ್ಚಿದಾನಂದ, ಲಿಂಗಾಯತ ಧರ್ಮ ಮತ್ತು ಸಿಖ್ ಧರ್ಮ-ಸಚ್ಚಿದಾನಂದ
4. ಸಿದ್ಧರಾಮೇಶ್ವರರು 5. ಕಾಯಕ ಮಾಡುವ, ದಾಸೋಹಕ್ಕೆ ನೀಡುವ ಭಕ್ತ
6. ಪೂಜ್ಯ ಶ್ರೀ ಮಾತಾಜಿಯವರ ಜನ್ಮದಿನ
7. ಶರಣ. ಲಿಂ.ಡಾ|| ಬಸಪ್ಪ ಮತ್ತು ಶರಣೆ. ಗಂಗಮ್ಮ
8. ಮಾತಾಜಿಯವರು ನೀಡಿದ ಜ್ಞಾನಾಗ್ನಿ
9. ಸ್ವತಂತ್ರ ಸಿದ್ಧಲಿಂಗೇಶ್ವರ,
10. ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನ
11. ಷಣ್ಮುಖ ಶಿವಯೋಗಿಗಳು, 12. ಗುರು ಬಸವಣ್ಣನವರು ಅನುಭವ ಮಂಟಪದ ಶರಣರಿಗೆ
13. ನೀಲಾಂಬಿಕಾ ತಾಯಿಯವರು ಅಪ್ಪಣ್ಣನವರಿಗೆ ಹೇಳಿದ್ದಾರೆ.
14. ಮೊದಲನೆಯವರ ಭಕ್ತಿ ಶ್ರೇಷ್ಠ, 15. ಸರ್ವಜ್ಞ

ವಚನ ದುಂದುಭಿ -12ರ ಸರಿ ಉತ್ತರ ಕೊಟ್ಟವರು

1. ವಿಶ್ವಜ್ಯೋತಿ ಜೋಡಳ್ಳಿ, ಹುಬ್ಬಳ್ಳಿ	2. ನಿರ್ಮಲಾ ಜಯದೇವ, ಬೆಂಗಳೂರು
3. ಸರ್ವಮಂಗಳಾ ಗಂಗಾಧರ, ಬೆಂಗಳೂರು	4. ಎಚ್.ಚಂದ್ರಿಕಾ, ಭದ್ರಾವತಿ
5. ಮಮತಾ ಪ್ರವೀಣ್, ಭದ್ರಾವತಿ	6. ಶೀಲಾ ಗುಡಸ್, ಬೆಳಗಾವಿ
7. ರತ್ನಮ್ಮ ಜಯಣ್ಣ ಮೈಸೂರು	8. ಸುವರ್ಣಾ ಪಂಚಾಕ್ಷರಪ್ಪ ಭದ್ರಾವತಿ
9. ಕವಿತಾಂಬಿಕಾ ಗುಲ್ಬರ್ಗಾ	10. ಶಾರದ ಬಸವರಾಜ ಭದ್ರಾವತಿ

II ಓಂ ಶ್ರೀ ಗುರು ಬಸವ ಲಿಂಗಾಯ ನಮಃ II

866666

ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೋಕಿನ ಆಳತೆ ಗ್ರಾಮದ ಬಳಿಯ ಅಲ್ಲಮ ಪ್ರಭು ಗಿರಿಯಲ್ಲಿ 2008 ಏಪ್ರಿಲ್ 6, 7 ಮತ್ತು 8 ರಂದು ತೃತೀಯ ಲಿಂಗಾಯತ ಗಣ ಮೇಳ

ಶರಣ ಬಂಧುಗಳಲ್ಲಿ ಶರಣು ಶರಣಾರ್ಥಿ,

ವಿಶ್ವಗುರು ಬಸವಣ್ಣನವರು 12ನೆಯ ಶತಮಾನದಲ್ಲಿ ಅನುಭವ ಮಂಟಪ ಎಂಬ ಅಧ್ಯಾತ್ಮಿಕ ಸಂಸ್ಥೆಯನ್ನು ಕಟ್ಟಿ ಅದರಲ್ಲಿ ಶೂನ್ಯಪೀಠ ಎಂಬ ಧರ್ಮಪೀಠವನ್ನು ಸ್ಥಾಪಿಸಿ ಅದಕ್ಕೆ ವ್ಯೋಮಕಾಯ ಸಿದ್ಧರಾದ ಅಲ್ಲಮ ಪ್ರಭುದೇವರನ್ನು ಮೊದಲನೆಯ ಅಧಿಕಾರಿಯನ್ನಾಗಿ ಪೀಠಾರೋಹಣ ಮಾಡಿಸಿದರು. ಶ್ರೀ ಅಲ್ಲಮ ಪ್ರಭುದೇವರು ಮತ್ತು ಸೊಲ್ಲಾಪುರದ ಶ್ರೀ ಸಿದ್ಧರಾಮೇಶ್ವರರು ಧರ್ಮ ಪ್ರಚಾರಾರ್ಥ ಇಂದಿನ ಕರ್ನಾಟಕ, ಮಹಾರಾಷ್ಟ್ರದ ವಿವಿಧ ಸ್ಥಳಗಳಲ್ಲೆಲ್ಲ ಗಂಗೆ-ಯಮುನೆಯರಂತೆ ಸಂಚರಿಸಿ ಭಕ್ತರನ್ನು ಉದ್ಧರಿಸಿದ್ದಾರೆ. ಜೊತೆಗೂಡಿ ಸಂಚರಿಸಿದ ಉಭಯತರೂ ಒಂದು ವಿಶಿಷ್ಟ ಸ್ಥಳದಿಂದ ಪರಸ್ಪರ ಬೀಳ್ಕೊಟ್ಟು ಸಾಭಾರಿ ಜಂಗಮರಾದ ಶ್ರೀ ಸಿದ್ಧರಾಮೇಶ್ವರರು ಸೊಲ್ಲಾಪುರಕ್ಕೆ ಕರ್ತವ್ಯ ಮುಖಿಯಾಗಿ ವಾಪಸು ಹೊರಡುತ್ತಾರೆ. ನಿರಾಭಾರಿ ಜಂಗಮರಾದ ಶ್ರೀ ಅಲ್ಲಮ ಪ್ರಭುದೇವರು ಅಶ್ವಾರೋಹಿಯಾಗಿ ಶಿಷ್ಯರೊಡನೆ ಸಂಚಾರವನ್ನು ಮುಂದುವರಿಸುತ್ತಾರೆ. ಒಂದು ಸ್ಥಳದಲ್ಲಿ ತಪೋಮಗ್ನರಾಗಿ ತಂಗಿರುತ್ತಾರೆ. ಅದೇ ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೋಕಿನ ಆಳತೆ ಗ್ರಾಮದ ಬಳಿ ಇರುವ ಅಲ್ಲಮ ಪ್ರಭು ಗಿರಿ. ಮರಾಠಿಯಲ್ಲಿ ಅಲ್ಲಮ ಪ್ರಭು ಡೋಂಗರ್ ಎನ್ನುತ್ತಾರೆ. ಇದು ಕೊಲ್ಹಾಪುರದಿಂದ 25 ಕಿ.ಮೀಟರ್ ದೂರದಲ್ಲಿ ಕೊಲ್ಹಾಪುರ-ಸಾಂಗ್ಲಿ-ಸೊಲ್ಲಾಪುರ ಹೆದ್ದಾರಿಯ ಮೇಲಿದೆ. ಸಮೀಪದಲ್ಲಿ ಇಚಲ ಕರಂಜಿ, ಮೀರಜ್, ಸಾಂಗ್ಲಿ ಮತ್ತು ವಡಗಾಂವ ಪಟ್ಟಣಗಳು ಇವೆ. ಮೀರಜ್‌ವರೆಗೆ ರೇಲ್ವೆ ಸೌಲಭ್ಯವಿದೆ. ಪ್ಯಾಸೆಂಜರ್ ರೇಲ್ವೆ ಗಾಡಿಗಳು ಹಾತ್ ಕಣಂಗಲೆ ಮೂಲಕ ಕೊಲ್ಹಾಪುರಕ್ಕೆ ಹೋಗುತ್ತವೆ ಮತ್ತು ಹಾತ್‌ಕಣಂಗಲೆಯಲ್ಲಿ ನಿಲ್ಲುತ್ತವೆ.

ಅಲ್ಲಮ ಪ್ರಭು ನಂದಾದೀಪ

ಶ್ರೀ ಅಲ್ಲಮ ಪ್ರಭುದೇವರು ಪೂಜೆಯ ಸಮಯದಲ್ಲಿ ಹಚ್ಚಿದ ಜ್ಯೋತಿಯನ್ನು ಅಲ್ಲಮ ಪ್ರಭು ಶರಣಾಲಯದ ಪೂಜಾರಿ ವಂಶಸ್ಥರು ನಂದಾದೀಪವಾಗಿ ಕಾಯ್ದುಕೊಂಡು ಬಂದಿರುವುದು ಸ್ಥಳ ವಿಶೇಷ. ಶ್ರೀ ಸಿದ್ಧರಾಮೇಶ್ವರರ ಶರಣಾಲಯವು ಸಹ ಪಕ್ಕದಲ್ಲೇ ಇದ್ದು ಕೆಲವು ಕಾಲ ಅವರು ಸಹ ಈ ಗಿರಿಯಲ್ಲಿ ತಂಗಿದ್ದಾರೆ. ಈ ಉಭಯತರೂ ಪೂಜೆ-ಧ್ಯಾನಗಳಿಗೆ ಬಳಸುತ್ತಿದ್ದ ಗವಿಯು ಶ್ರೀಸಿದ್ಧರಾಮೇಶ್ವರ ಶರಣಾಲಯದ ಕೆಳಗೆ ಇದೆ. ಅಲ್ಲಮ ಪ್ರಭುಗಿರಿಗೆ ಸುಮಾರು 4 ಕಿ.ಮೀ ದೂರದಲ್ಲಿ ಸಿದ್ಧರಾಮೇಶ್ವರ ಗಿರಿ (ಸಿದ್ದೋಬಾ ಡೋಂಗರ್) ಇದ್ದು ಎತ್ತರವಾದ ಆ ಗುಡ್ಡದ ಮೇಲೆ ಸಹ ಸಿದ್ಧರಾಮೇಶ್ವರ ಶರಣಾಲಯವಿದೆ. ಈ ಜಂಗಮ ಕ್ಷೇತ್ರಗಳು ಹೆಚ್ಚಿನ ಪ್ರಚಾರವನ್ನು ಪಡೆಯದೆ ಇರುವುದು ಮತ್ತು ಯಾವುದೇ ವಿಶೇಷ ಅಭಿವೃದ್ಧಿ ಹೊಂದದಿರುವುದು ವಿಷಾದನೀಯ ಸಂಗತಿಯಾಗಿದೆ.

ಬಸವ ಧರ್ಮ ಪೀಠದ ಧ್ಯೇಯೋದ್ದೇಶ

ಕೂಡಲ ಸಂಗಮದ ಬಸವ ಧರ್ಮ ಪೀಠ ಟ್ರಸ್ಟ್ ಶರಣರ ಸ್ಥಾನಗಳನ್ನು ಅಭಿವೃದ್ಧಿ ಪಡಿಸುವ ಆಶಯವನ್ನು ಹೊಂದಿದ್ದು ಅಲ್ಲಮ ಪ್ರಭು ಗಿರಿ(ಡೋಂಗರ್)ಯಲ್ಲಿ ಜಗದ್ಗುರು ಅಲ್ಲಮಪ್ರಭು ಶರಣಾಲಯಕ್ಕೆ ಹತ್ತಿರದಲ್ಲಿ 14 ಎಕರೆಯಷ್ಟು ಜಮೀನನ್ನು ಖರೀದಿಸಿದೆ. ಬೋರ್ ವೆಲ್, ನೀರಿನ ತೊಟ್ಟಿ ಕಾರ್ಯಾಲಯ (Office) ಮತ್ತು ವಾಸಕ್ಕೆ 2 ಕೊಠಡಿ, ಒಂದು ಹಾಲ್ ಸಹ ಕಟ್ಟಿಸಲಾಗಿದೆ. ಮುಂದೆ ವಿಸ್ತಾರವಾದ ಕಾರ್ಯ ಯೋಜನೆಯ ಮಾಸ್ಟರ್ ಪ್ಲಾನ್ ಪ್ರಕಟಿಸ-ಲಾಗುವುದು. ಮತ್ತು ಕಟ್ಟಡ ನಿಧಿಗೆ, ದಾಸೋಹ ನಿಧಿಗೆ ದೇಣಿಗೆಯನ್ನು ಸಂಗ್ರಹಿಸಲಾಗುವುದು.

ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮಿಗಳಿಂದ ಅಲ್ಲಮಪ್ರಭು ಯೋಗ ಪೀಠಾರೋಹಣ ಸಂಜೆ 5ಕ್ಕೆ

ಶೂನ್ಯ ಪೀಠಾಧೀಶ ಅಲ್ಲಮ ಪ್ರಭುದೇವರು ಮತ್ತು ಕಾಯಕಯೋಗಿ ಸಿದ್ಧರಾಮೇಶ್ವರರು

ಪಾದವಿಟ್ಟ ಈ ಜಂಗಮ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಬೇಕೆಂದು, ಲಿಂಗಾಯತ ಸಮಾಜದ ಸಂಘಟನೆಯ ದೃಷ್ಟಿಯಿಂದ ಮಹಾರಾಷ್ಟ್ರದಲ್ಲಿ ಬಸವ ಧರ್ಮಪೀಠದ ಶಾಖೆಯೊಂದನ್ನು ಹೊಂದುವುದು ತೀರಾ ಅತ್ಯಗತ್ಯ ಎಂಬ ಮಹಾರಾಷ್ಟ್ರ ಶರಣ ಬಂಧುಗಳ ಬೇಡಿಕೆಯಂತೆ 2006ನೇ ಇಸವಿಯ ಚೈತ್ರ ಶುದ್ಧ ಪ್ರತಿಪದೆ ಯುಗಾದಿಯ ಅಲ್ಲಮಪ್ರಭು ಪೀಠಾರೋಹಣ ಸಂಸ್ಮರಣ ದಿನಕ್ಕೆ ಹೊಂದಿಕೊಂಡು ಮಾರ್ಚ್ ತಿಂಗಳಿನ 29 ಮತ್ತು 30ನೆಯ ದಿನಾಂಕಗಳಂದು ಪ್ರಥಮ ಲಿಂಗಾಯತ ಗಣ ಮೇಳವನ್ನು ಏರ್ಪಡಿಸಲಾಯಿತು.

ಕೂಡಲ ಸಂಗಮದ ಬಸವ ಧರ್ಮಪೀಠ, ಮಹಾರಾಷ್ಟ್ರ ರಾಷ್ಟ್ರೀಯ ಬಸವ ದಳಗಳ ಒಕ್ಕೂಟದ ಸಂಯುಕ್ತ ಆಶ್ರಯದಲ್ಲಿ ಅಲ್ಲಮ ಪ್ರಭು ಗಿರಿಯಲ್ಲಿ ಲಿಂಗಾಯತ ಗಣಮೇಳವನ್ನು ನಡೆಸಲಾಗುವುದು. ದಿ.6-4-2008 ಬೆಳಿಗ್ಗೆ -ಉದ್ಘಾಟನೆ, ಮಧ್ಯಾಹ್ನ - ಚಿಂತನಗೋಷ್ಠಿ, ಸಂಜೆ -ಪ್ರವಚನ, ಸಾಮೂಹಿಕ ಕೀರ್ತನ(ಭಜನೆ), ಯುಗಾದಿ ಪಾಡ್ಯದ ದಿವಸ ಸುಪ್ರಭಾತದಲ್ಲಿ ಇಷ್ಟಲಿಂಗಾರ್ಚನೆ, ಬೆಳಿಗ್ಗೆ 10-30ರಿಂದ ಸಮುದಾಯ ಪ್ರಾರ್ಥನೆ-ಅಲ್ಲಮ ಪ್ರಭು ತೊಟ್ಟಿಲು ಕಾರ್ಯಕ್ರಮ, ಸಿದ್ಧರಾಮೇಶ್ವರ ಗಿರಿಯಿಂದ ಜ್ಯೋತಿಯನ್ನು ತಂದು ತಿರುಗುತ್ತಿಯಿಂದ ಮೆರವಣಿಗೆ ಮೂಲಕ ಗುಡಿಗೆ ಹೋಗಲಾಗುವುದು. ದಿ.7-4-ಸಂಜೆ 5-30ರಿಂದ ಅಲ್ಲಮ ಪ್ರಭು ಯೋಗ ಪೀಠಾರೋಹಣ ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮಿಗಳಿಂದ. ದಿ. 8-4-2008ರಂದು ಬೆಳಿಗ್ಗೆ 10-30ಕ್ಕೆ ಲಿಂಗಾಯತ ಗಣ ಮೇಳದ ಸಮಾರೋಪ ಸಮಾರಂಭ.

ಸ್ಥಳದ ಹೆಸರು : ಅಲ್ಲಮ ಪ್ರಭು ಗಿರಿ(ಡೋಂಗರ್), ಗ್ರಾಮ: ಆಳತೆ; ಇದು ಕೊಲ್ಹಾಪುರದಿಂದ ಸಾಂಗ್ಲಿಗೆ ಹೋಗುವ ದಾರಿಯ ಮೇಲೆ ಕೇವಲ 25 ಕಿ.ಮೀಟರ್ ದೂರದಲ್ಲಿ ಇದೆ. ಸುಪ್ರಸಿದ್ಧ ಕೈಗಾರಿಕಾ ನಗರ ಇಚಲ ಕರಂಜಿಯಿಂದಲೂ 20 ಕಿ.ಮೀಟರ್ ದೂರದಲ್ಲಿದೆ. ಈ ಸ್ಥಳದಿಂದ ಸ್ವಲ್ಪ ದೂರದಲ್ಲಿ ಜೈನರ ಸುಪ್ರಸಿದ್ಧ ಯಾತ್ರಾಸ್ಥಳಗಳಾದ ಕುಂತಗಿರಿ ಮತ್ತು ಬಾಹುಬಲಿ ಬೆಟ್ಟವಿದೆ. ವಡಗಾಂವ ನಗರವೂ ಸಮೀಪದಲ್ಲಿದೆ. ಅಲ್ಲಮ ಪ್ರಭು ಗಿರಿ ಇರುವ ಆಳತೆ ಗ್ರಾಮವು ಹಾತ್‌ಕಣಂಗಲೆ ತಾಲ್ಲೋಕಿನಲ್ಲಿದ್ದು ಹಾತ್‌ಕಣಂಗಲೆಯವರೆಗೆ ರೇಲ್ವೆ ಲೈನ್ ಸೌಲಭ್ಯವಿದೆ. ಹಾತ್‌ಕಣಂಗಲೇ ಬಸ್‌ಸ್ಟಾಂಡ್ ಎದುರಿಗೆ ಉತ್ಸವ ಸಮಿತಿಯ ಕಾರ್ಯಾಲಯ ತೆರೆದಿದ್ದು ಊರಿಂದ ಬಂದವರು ಇಲ್ಲಿ ವಿಶ್ರಮಿಸಿಕೊಂಡು ಅಲ್ಲಮಗಿರಿಗೆ ಬರಬಹುದಾಗಿರುತ್ತದೆ.

ಕಾರ್ಯಕ್ರಮದ ಸಮಯದಲ್ಲಿ ಬೆಟ್ಟದ ಮೇಲ ವಸತಿ ವ್ಯವಸ್ಥೆಯನ್ನು ತಾತ್ಕಾಲಿಕ ಶಾಮಿಯಾನಾ ಟೆಂಟ್‌ಗಳಿಂದಲೇ ಮಾಡಬೇಕು. ಕೋಣೆಗಳ ವ್ಯವಸ್ಥೆ ಬೇಕಾದವರಿಗೆ ಇಚಲ ಕರಂಜಿ - 20 ಕಿ.ಮೀ ಮತ್ತು ಕೊಲ್ಹಾಪುರ 25 ಕಿ.ಮೀಟರ್ ದೂರದಲ್ಲಿರುವ ನಗರಗಳು. ಅಲ್ಲಿಂದ ಬರಲು ಹೋಗಲು ಬಸ್ ವ್ಯವಸ್ಥೆ ಇರುತ್ತದೆ. ಟೆಂಪೋ ಸಹ ಸಿಗುತ್ತವೆ. ದೂರದ ಊರುಗಳಿಂದ ಬರುವವರು ದಿ. 5 ರ ಸಂಜೆಯೊಳಗೆ ಬರಬೇಕೆಂದು, ಹತ್ತಿರದ ಸ್ಥಳಗಳಿಂದ ಬರುವವರು ಬೆಳಿಗ್ಗೆ 10-30ಕ್ಕೆ ನಡೆಯುವ ಉದ್ಘಾಟನಾ ಕಾರ್ಯಕ್ರಮಕ್ಕೆ ತಪ್ಪದೆ ಹಾಜರಾಗಬೇಕೆಂದು ವಿನಂತಿಸುತ್ತೇವೆ.

ಧನ ಸಹಾಯಕ್ಕೆ ಮನವಿ

2008ರ ಏಪ್ರಿಲ್ 6, 7 ಮತ್ತು 8ರಂದು ನಡೆಯುವ ತೃತೀಯ ಲಿಂಗಾಯತ ಗಣ ಮೇಳಕ್ಕೆ ಧನ ಸಹಾಯ ಮಾಡುವವರಿಗೆ ಕೆಳಗಿನಂತೆ ಅವಕಾಶವಿದೆ.

ಮಹಾಪೋಷಕರು	: 10000ರೂ ಮತ್ತು ಮೇಲೆ ಕೊಟ್ಟವರು	ಹಿತೈಷಿಗಳು	500 ರೂ
ಪೋಷಕರು	: 5000ರೂ ಮತ್ತು ಮೇಲೆ ಕೊಟ್ಟವರು	ಉತ್ಸವ ಸಮಿತಿ ಸದಸ್ಯರು	250 ರೂ
ದಾನಿಗಳು	: 1000ರೂ ಮತ್ತು ಮೇಲೆ ಕೊಟ್ಟವರು	ಪ್ರತಿನಿಧಿ ಶುಲ್ಕ	100 ರೂ

ಸ್ವಯಂ ಪ್ರೇರಣೆಯಿಂದ ಅವರವರ ಶಕ್ತ್ಯಾನುಸಾರ ಎಷ್ಟು ಬೇಕಾದರೂ ಕೊಡಬಹುದು. ಚೆಕ್ / ಡಿ.ಡಿ ಕಳಿಸುವವರು ಲಿಂಗಾಯತ ಗಣ ಮೇಳ ಉತ್ಸವ ಸಮಿತಿ, ಇಚಲ ಕರಂಜಿ ಶಾಖೆ ಎಂದು ಬರೆಸಬಹುದು. ಅಥವಾ ಬಸವ ಮಹಾಮನೆ ಚಾರಿಟಬಲ್. ಎಂದಾದರೂ ಬರೆಸಬಹುದು.

ಲಿಂಗಾಯತ ಗಣ ಮೇಳಾವ ಉತ್ಸವ ಸಮಿತಿ
ಅಲ್ಲಮ ಪ್ರಭು ಗಿರಿ
ಆಳತೆ ಗ್ರಾಮ, ತಾ -ಹಾತ್‌ಕಣಂಗಲೆ
ಜಿ-ಕೊಲ್ಹಾಪುರ, ಮಹಾರಾಷ್ಟ್ರ ರಾಜ್ಯ
ದೂರವಾಣಿ : (0)9822720714,
(0) 9850982877, (0)9420585881

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಬಸವ ಮಂಟಪ
2035, 20ನೆಯ ಮುಖ್ಯ ರಸ್ತೆ
ಕಾರ್ಡ್ ರಸ್ತೆ, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010
ಕರ್ನಾಟಕ ರಾಜ್ಯ, ಭಾರತ
ದೂರವಾಣಿ : 080-23325335/23322790

ಎಲ್ಲೂ ಕಾಣೆನವ್ವ ನಾನಿಂಥ ಗುರುವನ್ನು

ಎಲ್ಲೂ ಕಾಣೆನವ್ವ ನಾನಿಂಥ ಗುರುವನ್ನು
ಗುರು ಮಾತಾಜಿಯಂಥ ಅಮೂಲ್ಯ ನಿಧಿಯನ್ನು ॥ ಪ ॥

ಚಿತ್ರದುರ್ಗ ಜಿಲ್ಲೆಯ ಸಾಸಲಹಟ್ಟೀಲಿ
ಬಸಪ್ಪ-ಗಂಗಮ್ಮರ ಒಡಲಿನಲ್ಲಿ
ರತ್ನಳೆಂಬ ನಾಮದಿಂದ ಜನಿಸಿ ಬಂದರು
ಸ್ತ್ರೀಕುಲ ಶಿರೋಮಣಿ ಇವರು ಆಗಿಹರು ॥ 1 ॥

ಓದಿನಲ್ಲಿ ಪದವಿ ಹೊಂದಿ ಮುಂದೆ ಬಂದರು
ತತ್ವಜ್ಞಾನದಲ್ಲಿ ಅಗ್ರಗಣ್ಯರಾದರು
ಗುರು ಲಿಂಗಾನಂದರಿಂದ ದೀಕ್ಷೆ ಪಡೆದು
ಮಾತೆ ಮಹಾದೇವಿಯೆಂಬ ನಾಮ ತಳೆದರು ॥ 2 ॥

ಭಕ್ತಿ - ಜ್ಞಾನ - ವಿರಕ್ತಿಗಳ ಸಂಗಮವಾಗಿ
ವೈರಾಗ್ಯದ ಶಿಖರ ಏರಿನಿಂತರು
ಅಕ್ಕನ ನಿಲುವನ್ನು ತಾವು ಪಡೆದು
ವೈರಾಗ್ಯ ನಿಧಿಯಾಗಿ ಬೆಳಗುತಿಹರು ॥ 3 ॥

ಲಿಂಗಾಯತ ಧರ್ಮದ ಪುನರುದ್ಧಾರಕರು
ಬಸವ ತತ್ವಕ್ಕಾಗಿ ಮೀಸಲಿವರು
ವೀರ ಮಾತೆ ಅಕ್ಕನಾಗಮ್ಮನ ತೆರದಿ
ಬಸವ ತತ್ವಕ್ಕಾಗಿ ಕಾಯ ಸವೆಸುತ್ತಿಹರು ॥ 4 ॥

ಎಡರು ತೊಡರು ಏನೇ ಬರಲಿ ಜಗ್ಗದವರು
ಸ್ತುತಿ ನಿಂದೆಗಳೇನೆ ಇರಲಿ ಬಗ್ಗದವರು
ಬಸವ ಸಾಕ್ಷಿಯಂತೆ ತಾವು ನಡೆಯುವವರು
ದಿಟ್ಟನಿಲುವಿನ ಧೀರ ಯೋಗಿಣಿ ಇವರು ॥ 5 ॥

ಜನರಲ್ಲಿರುವ ಮೂಢನಂಬಿಕೆ ಅಳಿಸಿ ಬಿಡಲು
ಪ್ರವಚನ ಕಾಯಕ ಕೈಗೊಂಡರು
ನುಡಿದಂತೆ ನಡೆಯುತಿಹ ಮಹಾ ಶರಣರು
ಸಚ್ಚಿದಾನಂದ ಪ್ರಿಯೆ ಮಾತೆ ಇವರು ॥ 6 ॥

- ಶರಣೆ. ಶಾರದಾ ಬಸವರಾಜ್
ಭದ್ರಾವತಿ

ಮಹಾರಾಷ್ಟ್ರದಲ್ಲಿ ಬಂಧು ಮಿತ್ರರಿರುವವರು ಗಮನಿಸಿರಿ

ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೋಕಿನ ಅಳತೆ ಗ್ರಾಮ ವ್ಯಾಪ್ತಿಯಲ್ಲಿ ಬರುವ ಅಲ್ಲಮ ಗಿರಿಯಲ್ಲಿ ಇದೇ 2008ರ ಏಪ್ರಿಲ್ 6,7,8ರಂದು ಮೂರನೆಯ ಲಿಂಗಾಯತ ಗಣ ಮೇಳಾವ ನಡೆಯುವುದಷ್ಟೆ. ಇದರ ವಿವರಗಳನ್ನು ತಿಳಿಸಲು, ಆಹ್ವಾನ ನೀಡಲು ಬಯಸಿದ್ದೇವೆ. ಆದ್ದರಿಂದ ಮಹಾರಾಷ್ಟ್ರದ ವಿವಿಧ ಭಾಗಗಳಲ್ಲಿ ನೆಲೆಸಿರುವ ನಿಮ್ಮ ಬಂಧು -ಮಿತ್ರರ ವಿಳಾಸವನ್ನು ಬೆಂಗಳೂರು ಬಸವ ಮಂಟಪದ ವಿಳಾಸಕ್ಕೆ ಕಳಿಸಿರಿ. ಅವರಿಗೆ ಆಹ್ವಾನ ಕಳಿಸಲಾಗುವುದು.

- ಪೂಜ್ಯ ಶ್ರೀ ಮಾತೆ ಜ್ಞಾನೇಶ್ವರಿ

ಮನುಕುಲ ಮರೆಯದ ಮಾಣಿಕ್ಯ ಪೂಜ್ಯ ಮಾತಾಜಿ

(ದಿನಾಂಕ 13-03-2008ರಂದು ಪೂಜ್ಯ ಮಾತಾಜಿಯವರ 63ನೇ ಹುಟ್ಟುಹಬ್ಬ; ತನ್ನಿಮಿತ್ತ ವಿಶೇಷ ಲೇಖನ.)

ಆಚಾರಕ್ಕರಸಾಗು । ನೀತಿಗೆ ಪ್ರಭುವಾಗು
ಮಾತಿನಲಿ ಚೂಡಾಮಣಿಯಾಗು । ನನ್ನ ಕಂದ
ಜ್ಯೋತಿಯೇ ಆಗು ಜಗಕೆಲ್ಲ

ಎಂಬ ಹೆತ್ತ ಕರುಳಿನ ಹೃದಯಾಂತರಾಳದ ಹಾರೈಕೆ ಫಲಿಸಿ ಅಕ್ಷರಶಃ ಜಗಕ್ಕೆಲ್ಲ ಜ್ಯೋತಿಯೇ ಆದವರು ಪೂಜ್ಯ ಮಾತಾಜಿಯವರು.

ಪುಷ್ಪಾಲಂಕೃತ ಎತ್ತಿ ಕಟ್ಟಿದ ಮುಡಿ; ನೊಸಲ ಮೇಲೆ ನಸು ನಗುವ ವಿಭೂತಿ, ಕೊರಳು- ಕೈ -ಕರ್ಣಗಳಲ್ಲಿ ಶೋಭಿಸುವ ರುದ್ರಾಕ್ಷಿ, ದರ್ಶಿಸಿದಾಕ್ಷಣ ಭಕ್ತಿಭಾವ ಹೊಮ್ಮಿಸುವ ದೈವೀ ತೇಜಸ್ಸಿನಿಂದ ಕಂಗೊಳಿಸುವ ಪೂಜ್ಯ ಮಾತಾಜಿ ನಾಡಿನ ಅಧ್ಯಾತ್ಮಿಕ, ಸಾಹಿತ್ಯಿಕ ಕ್ಷೇತ್ರಗಳ ಪ್ರವರ್ಧಮಾನಕ್ಕೆ ಸೃಷ್ಟಿಕರ್ತನೇ ಕಳುಹಿಸಿದ ವಿಶೇಷ ಪ್ರತಿನಿಧಿ.

ಐತಿಹಾಸಿಕ ನಗರ ಚಿತ್ರದುರ್ಗದಲ್ಲಿ ಶರಣ ಲಿಂ॥ ಡಾ॥ ಎಸ್. ಆರ್. ಬಸಪ್ಪ-ಶರಣೆ ಗಂಗಮ್ಮನವರ ಪ್ರಥಮ ಪುತ್ರಿ "ರತ್ನ" ಜನಿಸಿದ್ದು 1946ರ ಮಾರ್ಚ 13ರಂದು. ತಂದೆ ತಾಯಿಯರ ಮಮತೆಯ ರತ್ನವಾಗಿ ಬೆಳೆದು ಬಾಲ್ಯದಲ್ಲಿಯೇ ಅಧ್ಯಾತ್ಮ ಪಥದತ್ತ ಒಲವು ಬೆಳೆಸಿಕೊಂಡವರು. ತಮ್ಮ 14ನೆಯ ವಯಸ್ಸಿನಲ್ಲಿ ತಂದೆ ಡಾ. ಬಸಪ್ಪನವರನ್ನು ಕಳೆದುಕೊಂಡು ನಂತರ ತಾತಂದಿರ ಆಶ್ರಯ – ಆರೈಕೆಯಲ್ಲಿ ಬೆಳೆದು ವೈದ್ಯಕೀಯ ಪದವಿ ಅಧ್ಯಯನದ ಅವಕಾಶ ದೊರೆತರೂ ಸಂಪ್ರದಾಯಸ್ಥ ತಾತಂದಿರು ಅನುಮತಿ ಕೊಡದ ಕಾರಣ ವಿಜ್ಞಾನದಲ್ಲಿ ಪದವೀಧರೆಯಾದರು.

ಆ ಕಾಲದಲ್ಲಿ 'ಅಭಿನವ ವಿವೇಕಾನಂದ' ಎಂದೇ ಕೀರ್ತಿ ಪಡೆದಿದ್ದ 'ಪ್ರವಚನ ಪಿತಾಮಹ' ಪೂಜ್ಯ ಶ್ರೀ ಲಿಂಗಾನಂದ ಮಹಾಸ್ವಾಮಿಗಳ ಉಪನ್ಯಾಸವನ್ನು ಚಿತ್ರದುರ್ಗದಲ್ಲಿ ಆಲಿಸಿದಾಗ ಸಂಪೂರ್ಣ ಮಾನಸಾಂತರ ಹೊಂದಿ ಲೌಕಿಕ ಬಂಧನದಿಂದ ಬಿಡಿಸಿಕೊಂಡು ವೈರಾಗ್ಯ ಜೀವನದತ್ತ ಗಂಭೀರ ಹೆಜ್ಜೆಗಳನ್ನಿಟ್ಟರು. ಕೌಟುಂಬಿಕ ವಲಯದಿಂದ ಬಂದ ಭಿನ್ನಾಭಿಪ್ರಾಯಕ್ಕೆ ಕಿವಿಗೊಡದೆ ದೃಢ ಸಂಕಲ್ಪದೊಂದಿಗೆ ವಿರಕ್ತ ಜೀವನಕ್ಕೆ ಪಾದಾರ್ಪಣೆಗೈದ 'ರತ್ನ' ನಂತರ ಸದ್ಗುರು ಲಿಂಗಾನಂದ ಸ್ವಾಮಿಗಳಿಂದ ದಿ: 21-8-1965ರಂದು ದೀಕ್ಷೆ ಪಡೆದು ಶ್ರೀ ಮಾತೆ ಮಹಾದೇವಿ ಎಂಬ ಅಭಿಧಾನ ತಾಳಿದರು.ಜ್ಯೋತಿ ಮುಟ್ಟಿ ಜ್ಯೋತಿಯಾಗುವಂತೆ ಶ್ರೀ ಗುರುವಿನ ಕಾರುಣ್ಯದಿಂದ ಗುರುವಾದ ಮಾತೆಯವರನ್ನು ಪೂಜಾಪೀಠದ ಮೇಲೆ ಕುಳ್ಳಿರಿಸಿ ಸದ್ಗುರು ಲಿಂಗಾನಂದ ಸ್ವಾಮಿಗಳು ಪಾದ ಪೂಜೆಯನ್ನು ಮಾಡಿ ಪಾದೋದಕ ಪ್ರಸಾದ ಸ್ವೀಕರಿಸಿದರು.

1968ರಲ್ಲಿ ಶ್ರೀ ಗುರು ಬಸವೇಶ್ವರರ ಕಾರ್ಯಕ್ಷೇತ್ರ ಬಸವಕಲ್ಯಾಣದಲ್ಲಿ ಜರುಗಿದ ಶ್ರೀ ಬಸವೇಶ್ವರ ಅಷ್ಟ ಶತಮಾನೋತ್ಸವ ಸಂದರ್ಭದಲ್ಲಿ ಪೂಜ್ಯ ಮಾತಾಜಿಯವರು ಸ್ತ್ರೀ ಜಗದ್ಗುರು ಪೀಠಸ್ಥಾಪನೆಯ ಘೋಷಣೆ ಮಾಡಿದರು. ಸಂಪ್ರದಾಯವಾದಿಗಳ ತೀವ್ರ ವಿರೋಧವನ್ನು ಎದುರಿಸಿದರೂ ಇದಕ್ಕೆಲ್ಲ ಅಂಜದೆ 1970ರಲ್ಲಿ ಧಾರವಾಡದಲ್ಲಿ "ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ"ವನ್ನು ಪೂಜ್ಯ ಲಿಂಗಾನಂದ ಸ್ವಾಮೀಜಿ ಸಂಸ್ಥಾಪಿಸಿದರು. ಸದ್ಗುರು ಸಂಕಲ್ಪದಂತೆ ಪೂಜ್ಯ ಮಾತಾಜಿ ಪ್ರಥಮ ಪೀಠಾಧೀಶರಾಗಿ ಪೀಠಾರೋಹಣಗೈದರು. ಚಿನ್ಮಯಜ್ಞಾನಿ ಚನ್ನಬಸವೇಶ್ವರರು ವಚನಸಾಹಿತ್ಯ ಸಂರಕ್ಷಣೆಗೈಯುವ ಮಹೋನ್ನತ ಹಂಬಲದೊಂದಿಗೆ 1000 ಜಂಗಮರೊಂದಿಗೆ ಆಗಮಿಸಿ ತಂಗಿದ್ದ ಉತ್ತರ ಕರ್ನಾಟಕದ ಶೈಕ್ಷಣಿಕ ಕೇಂದ್ರ -ಸಾಂಸ್ಕೃತಿಕ ರಾಜಧಾನಿ ಧಾರವಾಡದಲ್ಲಿ ರೂಪುಗೊಂಡ ಮಹಿಳಾ ಗುರುಪೀಠಕ್ಕೆ ಪ್ರಥಮ ಗುರುವಾದ ಪೂಜ್ಯ ಮಾತಾಜಿ ಅಂದಿನಿಂದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರೆಂದು ನಾಮಾಂಕಿತರಾದರು. 1976ರಲ್ಲಿ ಇಂಗ್ಲೆಂಡ್, 1981 ಮತ್ತು 2006ರಲ್ಲಿ ಅಮೇರಿಕಾ, ಕೆನಡಾ ದೇಶಗಳಲ್ಲಿ ಸಂಚರಿಸಿ ಬಸವಧರ್ಮ ಪ್ರಚಾರಗೈದರು.

ಸತತಾಭ್ಯಾಸಿಗಳಾದ ಪೂಜ್ಯ ಮಾತಾಜಿ ತಮ್ಮ 16ನೇ ವಯಸ್ಸಿಗಾಗಲೇ 500 ಗ್ರಂಥಗಳನ್ನು ಓದಿದ್ದರು ಎಂದರೆ ಅವರ ಜ್ಞಾನ ತೃಷೆಯನ್ನು ಅರಿಯಬಹುದು. 100ಕ್ಕೂ ಅಧಿಕ ಗ್ರಂಥಗಳು ಪೂಜ್ಯ ಮಾತಾಜಿಯವರ ಲೇಖನಿಯಿಂದ ಹೊರಹೊಮ್ಮಿವೆ. ಅವರ ಕಲ್ಪನೆಯಲ್ಲಿಯೇ ರೂಪುಗೊಂಡ ವಿಶ್ವಕಲ್ಯಾಣಮಿಶನ್ ಟ್ರಸ್ಟ, ಬಸವ ಮಹಾಮನೆ ಚಾರಿಟೆಬಲ್ ಟ್ರಸ್ಟ್, ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ ಟ್ರಸ್ಟ್, ಬಸವ ಧರ್ಮ ಪೀಠ ಟ್ರಸ್ಟ್‌ಗಳ ಮೂಲಕ ಸಾಧಿಸಿದ ಸಾಧನೆಗಳು ಅಪಾರ.

ಗುರು ಬಸವಣ್ಣನವರ ಲಿಂಗೈಕ್ಯ ಕ್ಷೇತ್ರ ಕೂಡಲ ಸಂಗಮ ಜಾಗತಿಕ ನಕ್ಷೆಯಲ್ಲಿ ಗುರುತಿಸಲ್ಪಡಬೇಕು ಎಂಬ ಉದಾತ್ತ ಹಂಬಲದೊಂದಿಗೆ 1987ರಲ್ಲಿ ಅಲ್ಲಿ ಜಾಗ ಖರೀದಿಸಿ ಬಸವ ಧರ್ಮ ಪೀಠ ಟ್ರಸ್ಟ್ ಸ್ಥಾಪಿಸಿ ಕೈಗೊಂಡ ಅಭಿವೃದ್ಧಿ ಕಾರ್ಯ ಎಲ್ಲರಿಗೂ ತಿಳಿದಿದೆ. 1992ರ ಜನವರಿ 13 ರಂದು ಅಲ್ಲಿ ಬಸವ ಧರ್ಮದ ಮಹಾಜಗದ್ಗುರು ಪೀಠ ಸ್ಥಾಪಿಸಿದ್ದು ಲಿಂಗಾಯತ ಧರ್ಮದಲ್ಲಿ ಐತಿಹಾಸಿಕ ಘಟನೆ. 1995ರಲ್ಲಿ ಪ್ರಥಮ ಪೀಠಾಧ್ಯಕ್ಷರಾಗಿದ್ದ ಮಹಾಜಗದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳು ಲಿಂಗೈಕ್ಯರಾದ ಬಳಿಕ ದ್ವಿತೀಯ ಪೀಠಾಧ್ಯಕ್ಷರಾಗಿ ಪೂಜ್ಯ ಮಾತಾಜಿಯವರು ಕಾರ್ಯಗೈಯುತ್ತಿದ್ದಾರೆ. 1988 ರಿಂದ ಪ್ರತಿ ವರ್ಷವೂ ಜನವರಿ 11 ರಿಂದ 15 ವರೆಗೆ ಕೂಡಲಸಂಗಮದಲ್ಲಿ ಆಯೋಜಿಸಲ್ಪಡುತ್ತಿರುವ "ಶರಣಮೇಳ"ದ ಕೀರ್ತಿ ದೆಸೆದೆಸೆಗೂ ವಿಸ್ತರಿಸುತ್ತಿರುವುದು ಎಲ್ಲರೂ ಗಮನಿಸಿರುವ ಸಂಗತಿ. 2002ರಿಂದ ಬಸವಕಲ್ಯಾಣದಲ್ಲಿ ಪ್ರಾರಂಭಿಸಿರುವ 'ಕಲ್ಯಾಣ ಪರ್ವ' ಹಾಗೂ ಅಲ್ಲಿ ಶ್ರೀ ಜಗದ್ಗುರು ಅಲ್ಲಮ ಪ್ರಭು ಶೂನ್ಯಪೀಠ ಸ್ಥಾಪನೆ, 2006 ರಿಂದ ಮಹಾರಾಷ್ಟ್ರದ ಅಲ್ಲಮಗಿರಿಯಲ್ಲಿ "ಲಿಂಗಾಯತ ಗಣ ಮೇಳಾವಾ"ದ ಹಾಗೂ ಶ್ರೀ ಅಲ್ಲಮ ಪ್ರಭು ಯೋಗ ಪೀಠ ಸ್ಥಾಪನೆ, ಬೆಂಗಳೂರಿನಲ್ಲಿ ಪ್ರತಿ ವರ್ಷ ಬಸವ ಪಂಚಮಿ ಆಚರಣೆ, 2006ರ ಡಿಸೆಂಬರ್ 24 ರಂದು ರಾಷ್ಟ್ರದ ರಾಜಧಾನಿ ನವದೆಹಲಿಯಲ್ಲಿ "ಬಸವ ಮಂಟಪ" ಸ್ಥಾಪಿಸಿರುವುದು ಮಾತ್ರವಲ್ಲ ಅಲ್ಲಿ 1996 ರಿಂದ ಈ ವರೆಗೆ 3 ಧರ್ಮ ಸಮ್ಮೇಳನಗಳನ್ನು ನಡೆಸಿರುವುದು ಪೂಜ್ಯ ಮಾತಾಜಿಯವರ ರಚನಾತ್ಮಕ ಕ್ರಿಯಾಶೀಲತೆಗೆ ಸಾಕ್ಷಿ.

ಜನರನ್ನು ಅಧ್ಯಾತ್ಮಿಕ ಪಥದತ್ತ ಮುನ್ನಡೆಸುತ್ತಿರುವ ಪೂಜ್ಯ ಮಾತಾಜಿ ರಾಷ್ಟ್ರೀಯ ಬಸವ ದಳ, ರಾಷ್ಟ್ರಕಲ್ಯಾಣ ವಿದ್ಯಾರ್ಥಿಗಣ ಸಂಘಟನೆಯ ಮೂಲಕ ಆದರ್ಶ ಸಮಾಜ ರೂಪಿಸಿದ್ದಾರೆ. ಭಕ್ತಿ, ಜ್ಞಾನ ವೈರಾಗ್ಯಗಳ ತ್ರಿವೇಣಿ ಸಂಗಮವಾಗಿರುವ ಪೂಜ್ಯ ಮಾತಾಜಿಯವರ ಬರುವು ಮತ್ತು ಇರುವು ಲಿಂಗಾಯತ ಧರ್ಮದ ಚರಿತ್ರೆಯಲ್ಲೊಂದು ಸುವರ್ಣ ಅಧ್ಯಾಯ. ಕರ್ನಾಟಕ ಮಾತ್ರವಲ್ಲದೇ ಆಂಧ್ರಪ್ರದೇಶ, ತಮಿಳನಾಡು, ಮಹಾರಾಷ್ಟ್ರ, ನವದೆಹಲಿಗಳಲ್ಲಿ ಕ್ರಿಯಾಶೀಲವಾಗಿರುವ ರಾಷ್ಟ್ರೀಯ ಬಸವ ದಳಗಳ ಮೂಲಕ ಲಿಂಗಾಯತ ಧರ್ಮವನ್ನು ಯಶಸ್ವಿಯಾಗಿ ಪ್ರಚಾರಗೈಯುತ್ತಿದ್ದಾರೆ.

1996ರಲ್ಲಿ ಅಭಯ ಹಸ್ತದ ಗುರು ಬಸವಣ್ಣನವರ ಭಾವಚಿತ್ರವನ್ನು ಪ್ರಥಮ ಬಾರಿಗೆ ಜಾರಿಗೆ ತಂದ ಪೂಜ್ಯ ಮಾತಾಜಿಯವರು ಅದನ್ನು ರಾಷ್ಟ್ರನಾಯಕ ಎಸ್. ನಿಜಲಿಂಗಪ್ಪನವರಿಗೆ ತಲುಪಿಸಿ ಬರಲು ನನ್ನನ್ನು ಕಳುಹಿಸಿದ್ದರು. ಆ ಭಾವಚಿತ್ರವನ್ನು ಒಯ್ದು ಚಿತ್ರದುರ್ಗದ ಅವರ ಮನೆಯ ಆವರಣದಲ್ಲಿ ಹಿರಿಯ ರಾಜಕೀಯ ಮುತ್ಸದ್ದಿಗಳೊಂದಿಗೆ ಮಾತನಾಡುತ್ತ ಕುಳಿತಿದ್ದ ನಿಜಲಿಂಗಪ್ಪನವರಿಗೆ ತಲುಪಿಸಿದಾಗ ಭಾವಚಿತ್ರವನ್ನೇ ಪದೇ ಪದೇ ದಿಟ್ಟಿಸಿದ ಆ ಹಿರಿಯ ಚೇತನ "ಬಹಳ ಸಂತೋಷವಾಯಿತು, ಬಹಳ ಸಂತೋಷವಾಯಿತು. ಬಹಳ ಸಂತೋಷವಾಯಿತು" ಎಂದು ಮೂರು ಬಾರಿ ಉದ್ಗರಿಸಿ "ನನ್ನ ಬಯಕೆಯನ್ನು ಮಾತಾಜಿಯವರು ಸಾಕಾರಗೊಳಿಸಿದ್ದಾರೆ. ಅವರಿಗೆ ನನ್ನ ಸಹಸ್ರ ಸಹಸ್ರ ಪ್ರಣಾಮಗಳನ್ನು ತಿಳಿಸಿರಿ." ಎಂದು ಹೇಳಿದ್ದು ನನ್ನ ಜೀವನದಲ್ಲಿ ಅವಿಸ್ಮರಣೀಯ ಘಟನೆಯಾಗಿ ಉಳಿದಿದೆ.

ಬಹುತೇಕ ಧಾರ್ಮಿಕ ನೇತಾರರು ಅಧಿಕ ಆದಾಯ ಬರುವ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವಲ್ಲಿ ನಿರತರಾಗಿದ್ದರೆ ಪೂಜ್ಯ ಮಾತಾಜಿಯವರು ಅನಾಥಾಲಯಗಳನ್ನು ನಡೆಸುತ್ತಿರುವುದು ಅದೂ ಸಹ ಸರ್ಕಾರದ ಯಾವುದೇ ನೆರವಿಲ್ಲದೆ ತಮ್ಮ ಸಂಸ್ಥೆಯ ಜಂಗಮ ಮೂರ್ತಿಗಳು ಪ್ರವಚನಮಾಡಿ ಗಳಿಸಿದ ಕಾಣಿಕೆಯಿಂದಲೇ ನಡೆಸುತ್ತಿರುವುದು ಅವರ ಹೃದಯ ವೈಶಾಲ್ಯಕ್ಕೆ ಸಾಕ್ಷಿ. ಕೂಡಲ ಸಂಗಮ, ಬಸವಕಲ್ಯಾಣ, ಧಾರವಾಡ

ಮತ್ತು ಬಸವ ಗಂಗೋತ್ರಿಗಳಲ್ಲಿ ಅಭ್ಯಸಿಸುವ ಅನಾಥಾಲಯದ ಮಕ್ಕಳು ತಮ್ಮ ಶಾಲೆಗಳ ಪರೀಕ್ಷೆಗಳಲ್ಲಿಯೂ ಹೆಚ್ಚಿನ ಅಂಕ ಪಡೆದುಕೊಳ್ಳುತ್ತಿರುವುದು ಅವರಿಗೆ ಪೂಜ್ಯ ಮಾತಾಜಿಯವರು ಕೊಡುತ್ತಿರುವ ಪ್ರೋತ್ಸಾಹಕ್ಕೆ ಸಾಕ್ಷಿಯಾಗಿದೆ.

ಚಿನ್ಮಯ ಜ್ಞಾನಿ ಚನ್ನಬಸವಣ್ಣನವರ ಲಿಂಗೈಕ್ಯ ಕ್ಷೇತ್ರ ಉಳವಿಯನ್ನು ಅಂತ ರಾಷ್ಟ್ರೀಯ ಪ್ರವಾಸಿ ಕೇಂದ್ರವಾಗಿ ಅಭಿವೃದ್ಧಿ ಪಡಿಸಬೇಕೆಂದು ಸರ್ಕಾರಕ್ಕೆ ಮಾತಾಜಿಯವರು ತೀವ್ರ ಒತ್ತಡ ತಂದಿದ್ದರ ಫಲವಾಗಿ ಈ ಯೋಜನೆಯ ಮೊದಲ ಹೆಜ್ಜೆಯಾಗಿ ಯಲ್ಲಾಪುರ, ಉಳವಿ ಮಧ್ಯೆ ಕಾಳಿನದಿಗೆ ತೂಗು ಸೇತುವೆ ನಿರ್ಮಿಸಲು ಸರ್ಕಾರ ಮುಂದಾಗಿರುವುದು ಇವರ ಪ್ರಯತ್ನಕ್ಕೆ ಸಾಕ್ಷಿ.

ಲಿಂಗಾಯತರಲ್ಲಿ ಒಳಪಂಗಡಗಳ ಸಂಘಟನೆ, ಅವುಗಳಿಗೆ ಮೀಸಲಾತಿ ಕೇಳುತ್ತಿರುವ ಸಂಕುಚಿತ ದೃಷ್ಟಿ ಹೊಂದಿದ ಜನರೇ ಅಧಿಕವಿರುವಾಗ ಅಖಂಡ ಲಿಂಗಾಯತ ಸಮಾಜಕ್ಕೆ ಭಾರತೀಯ ಸಂವಿಧಾನದನ್ವಯ ಸ್ವತಂತ್ರ ಧರ್ಮದ ಮಾನ್ಯತೆ ದೊರೆತು ಒಟ್ಟು ಸಮಾಜವನ್ನು ಧಾರ್ಮಿಕ ಅಲ್ಪ ಸಂಖ್ಯಾತರೆಂದು ಪರಿಗಣಿಸುವುದು ಮಾತ್ರವಲ್ಲ ಈ ಧರ್ಮವನ್ನು ಜೈನ, ಸಿಖ್, ಬೌದ್ಧ, ಕ್ರೈಸ್ತ, ಇಸ್ಲಾಮ ಧರ್ಮಗಳಂತೆ ಜಾಗತಿಕ ಧರ್ಮಗಳ ಸಾಲಿನಲ್ಲಿ ನಿಲ್ಲಿಸಬೇಕೆಂಬುದು ಪೂಜ್ಯ ಮಾತಾಜಿಯವರ ಅದಮ್ಯ ಹಂಬಲ. ಇದಕ್ಕಾಗಿ ಪ್ರಪ್ರಥಮ ಬಾರಿಗೆ ಕಾನೂನಾತ್ಮಕ ಹೋರಾಟವನ್ನು ಕೈಗೊಂಡಿರುವ ಏಕೈಕ ಮಠಾಧಿಪತಿಯಾಗಿದ್ದಾರೆ. ಅವರ ಯೋಜನೆಗಳು, ಚಿಂತನೆಗಳು ಸಮಾಜದ ಭವಿಷ್ಯದ ದೃಷ್ಟಿಯಿಂದ ಅತ್ಯಗತ್ಯ. ಅವರ ಸಾಧನೆಗಳ ಬಗ್ಗೆ ಎಷ್ಟು ಬರೆದರೂ ಕಡಿಮೆಯೇ ಬಹುಶಃ ನಾಲ್ಕು ಪಿಎಚ್.ಡಿ ಪ್ರಬಂಧಗಳಿಗೆ ಆಗುವಷ್ಟು ಬರಹವನ್ನು ಅವರೊಬ್ಬರ ಸಾಧನೆಯ ಬಗ್ಗೆ ಬರೆದರೆ ಅತಿಶಯೋಕ್ತಿಯಲ್ಲ. ಒಂದು ಮಾತಂತೂ ಸತ್ಯ. ಲಿಂಗಾಯತ ಸಮಾಜದಲ್ಲಿ ಪೂಜ್ಯ ಮಾತಾಜಿ ಮುಂದಿನ ಶತಮಾನದ ದಂತಕಥೆಯಾಗಿ ಕಂಡುಬಂದರೂ ಆಶ್ಚರ್ಯಪಡಬೇಕಾಗಿಲ್ಲ. 62 ವರ್ಷಗಳನ್ನು ಪೂರೈಸುತ್ತಿರುವ ಮನುಕುಲ ಮರೆಯದ ಮಾಣಿಕ್ಯವಾಗಿರುವ ಪೂಜ್ಯ ಮಾತಾಜಿಯವರಿಗೆ ಸೃಷ್ಟಿಕರ್ತ ಲಿಂಗದೇವ, ಧರ್ಮಕರ್ತ ಬಸವಣ್ಣನವರು ಇನ್ನೂ ಅಧಿಕ ಆಯುಷ್ಯ ಆರೋಗ್ಯವನ್ನು ಕರುಣಿಸಲೆಂದು ನಾವು ಹೃದಯಾರೆ ಪ್ರಾರ್ಥಿಸುತ್ತೇವೆ.

– ಕೆ. ಎಸ್. ಕೋರಿಶೆಟ್ಟರ

ಆಲಸ್ಯದ ದುಷ್ಪರಿಣಾಮ

ಮಹತ್ವವನ್ನು ಅರಿತ ಮೇಲೆ, ಈಗ ಕಾಯಕ, ದುಡಿಮೆ, ಇಲ್ಲದ ಸೋಮಾರಿತನ ತುಂಬಿದ ವ್ಯಕ್ತಿ, ಸಮಾಜ, ದೇಶಗಳ ಲಕ್ಷಣವನ್ನು ಕೆಲವು ವಚನಗಳಲ್ಲಿ ನೋಡೋಣ.

ಕಾಯಕಾರದ ಮೈಸೊಂಬತನದಿಂದ ಬೇರೆ
ಕೂಳ ಗಳಿಸಲಾರದೆ ಹಸಿದಿಪ್ಪರಯ್ಯಾ !
ಒಡಲ ಸೀರೆಯ ಗಳಿಸಲಾರದೆ
ಕಚ್ಚುಟವ ಕಟ್ಟಿಕೊಂಡಿಪ್ಪರಯ್ಯಾ
ಮೀಯಲು ಎಣ್ಣೆಯ ಗಳಿಸಲಾರದೆ
ಮಂಡೆ ಬೋಳಾಗಿಪ್ಪರಯ್ಯಾ
ದಿಟದಿಂದ ಬಿಡಿಸಲರಿಯದೆ ಸಂಸಾರದ
ಶಠೆಯನವಧರಿಸಿಕೊಂಡಿಪ್ಪವರಿಗೆ
ನಾನಂಜುವೆನಯ್ಯಾ ಸಕಲೇಶ್ವರ !

- ಸಕಲೇಶ ಮಾದರಸ

ದೇವರು, ಧರ್ಮ, ಅಧ್ಯಾತ್ಮದ ಹೆಸರಿನಲ್ಲಿ ಕೆಲವು ಭಕ್ತಿಯೋಗಿಗಳು ಕೇವಲ ಭಜನೆ ಮಾಡುತ್ತಾ, ಹಾಡುತ್ತಾ ತಾವು ಮತ್ತು ತಮ್ಮನ್ನು ನಂಬಿದ ಪತ್ನಿ -ಮಕ್ಕಳನ್ನು ಉಪವಾಸ ಒಣಗಿಸುವರು. ದುಡಿಮೆಯ ಬದುಕನ್ನು ಉಪಾಧಿಯೆಂದು ತಿಳಿದು, ಕರ್ಮವೆಂದು ಭಾವಿಸುವರು. ಆದರೆ ಶರಣರು ಸತ್ಯ ಶುದ್ಧವಾದ ದುಡಿಮೆಯಿಂದಲೂ ದೇವರನ್ನು ಒಲಿಸಲು ಸಾಧ್ಯ ಎಂದು ಸಾಧಿಸಿ ತೋರಿಸಿದರು.

ಮೇಲಿನ ವಚನ ದುಡಿಯದೆ ಬದುಕುವ ಕೆಲವು ಜನರ ಲಕ್ಷಣವನ್ನು ನಮ್ಮ ಮುಂದೆ ಇರಿಸುತ್ತಿದೆ. ಇತರರನ್ನು ಸಾಕದಿದ್ದರೆ ಹೋಗಲಿ ತನ್ನ ಸ್ವಂತ ಶರೀರವನ್ನು ಸದೃಢವಾಗಿ, ಆರೋಗ್ಯವಾಗಿ, ಇನ್ನೊಬ್ಬರಿಗೆ ಹೊರೆಯಾಗದಂತೆ ಪೋಷಿಸಲಿಕ್ಕಾದರೂ ಅಗತ್ಯವಾದ ಆಹಾರವನ್ನು ಸಹ ಗಳಿಸಲಾರದೆ

ಸೋಮಾರಿಯಾಗಿ ಬದುಕುವ ಪರಾವಲಂಬಿಗಳನ್ನು ಕಂಡು ಈ ವಚನಕ್ಕೆ ಬಹಳ ಆಶ್ಚರ್ಯವಾಗುತ್ತಿದೆ ! ಸೋಜಿಗಪಡುತ್ತಿದೆ.

ಬುದ್ಧಿ ಭ್ರಮೆಯಿಂದಲೋ, ಅಂಗಾಂಗಗಳನ್ನು ಪ್ರದರ್ಶಿಸುವ ಹುಚ್ಚು ಹಂಬಲದಿಂದಲೋ ಅತಿ ಕಡಿಮೆ ವಸ್ತ್ರಧರಿಸುವವರನ್ನು ಕಂಡು ವಸ್ತ್ರಗಳಿಸಲಾರದ ಆಲಸಿಗಳು ಎಂದು ವ್ಯಾಖ್ಯಾನಿಸುತ್ತಿದೆ. ತಲೆ ತುಂಬಾ ನಿಸರ್ಗದತ್ತವಾದ ಸೊಂಪಾದ ಕೂದಲಿದ್ದರೂ, ಅದನ್ನು ಎಣ್ಣೆ ಹಚ್ಚಿ, ಸ್ನಾನ ಮಾಡಿ, ಸಂಸ್ಕರಿಸಿ, ಪೋಷಿಸಿ, ಆರೋಗ್ಯವಾಗಿಡಲು ಶ್ರಮಿಸಲು ಇಷ್ಟವಿಲ್ಲದೆ, ತಲೆಬೋಳಿಸಿಕೊಂಡು ಓಡಾಡುವವರನ್ನು ಕಂಡು ಮೀಯಲು ಎಣ್ಣೆಗಳಿಸಲಾರದ ಮೈಗಳ್ಳರು ಎಂದು ಜರಿಯುತ್ತಿದೆ !

ಇಂಥವರ ಜೀವನ ಶೈಲಿಗೆ ಕಾರಣವೇನೇ ಇರಲಿ ಹುಟ್ಟು - ಸಾವಿನ ಭವ ಬಂಧನಕ್ಕೆ ಒಳಗಾಗುವ ಶರೀರದ ದಂದುಗವನ್ನು ಸತ್ಯ-ಸದಾಚಾರ-ಸುಜ್ಞಾನ-ಸನ್ಮಾರ್ಗದಿಂದ ಬಿಡಿಸಲು ಶ್ರಮಿಸದೆ, ಗೆಲ್ಲಲು ಅರಿಯದೆ ಏಕಕಾಲದಲ್ಲಿ ದೇವರನ್ನು - ಪ್ರಪಂಚವನ್ನು ತನ್ನಾತ್ಮವನ್ನು ವಂಚಿಸುತ್ತಾ ಬದುಕುವ ಮೋಸಗಾರರು, ವಂಚಕರು ಎಂದು ಕರೆದು ಅಂಥವರಿಂದ ದೂರವಿರಲು ಹೇಳುತ್ತಿದೆ. ಸಮಾಜದ ಒಳಹೊಕ್ಕು ನೋಡಿ ಅನಾಚಾರ, ಅಜ್ಞಾನ,ಬಡತನದ ಕಾರಣದಿಂದ ಕಾಯವಿಕಾರದ ಒಂದು ಲಕ್ಷಣವಾದ ಮೈಗಳ್ಳತನದ ನೆಪದಿಂದ ಸೊರಗಿದ ಶರೀರ, ಬೋಳುತಲೆ, ಅರೆಬೆತ್ತಲೆಯವರನ್ನು ತೋರಿಸಿ ನಂಬಿ ಮೋಸ ಹೋಗದಿರಿ ಎಂದು ಎಚ್ಚರಿಸುತ್ತಿದೆ. ಇವರು ಇಹಕ್ಕೂ ಪರಕ್ಕೂ ಉಪಯೋಗವಿಲ್ಲದವರು ಎಂದು ವಿಡಂಬಿಸುತ್ತದೆ.

ಸೋಮಾರಿಗಳ ದುಃಸ್ಥಿತಿಯನ್ನು ಸರ್ವಜ್ಞ ಕವಿ ಹೀಗೆ ವರ್ಣಿಸುತ್ತಾನೆ.

ಕಾಯಕವು ಉಳ್ಳನಕ । ನಾಯಕನು ಎನಿಸಿಪ್ಪ
ಕಾಯಕವು ತೀರ್ದ ಮರುದಿನವೆ । ಸುಡುಗಾಡ
ನಾಯಕನು ಎನಿಪ ಸರ್ವಜ್ಞ ॥

ಕಾಯಕದ ಭಕ್ತನ ಆಯತವ ನೋಡಿರೋ
ಕಾಯಕ ಬಿಟ್ಟ ಮರುದಿನ । ಕಪ್ಪರದ
ಕಾಯಕವೇ ಬಕ್ಕು ಸರ್ವಜ್ಞ ॥

ಒಬ್ಬ ವ್ಯಕ್ತಿ ಎಲ್ಲಿಯವರೆಗೆ ಕಾಯಕ ನಿರತನಾಗಿರುತ್ತಾನೋ ಅಲ್ಲಿಯವರೆಗೂ ಎಲ್ಲರಿಂದಲೂ ಗೌರವಿಸಲ್ಪಡುತ್ತಾನೆ. ಆದರೆ ಕಾಯಕವನ್ನು ಬಿಟ್ಟು ಮನೆಯಲ್ಲೇ ಕುಳಿತ ಕ್ಷಣದಿಂದಲೇ, ದಿನದಿಂದಲೇ ಆ ವ್ಯಕ್ತಿಯನ್ನು ಎಲ್ಲರೂ ಕಡೆಗಣಿಸುತ್ತಾರೆ. ಅಂದಿನಿಂದ ಮನೆ, ಮಠ ಎಲ್ಲವೂ ಹಾಳಾಗಲು, ಕರಗಲು, ಪ್ರಾರಂಭವಾಗುತ್ತದೆ. ಶ್ರಮಜೀವಿಗಳು ವಾಸ ಮಾಡುವ ಮನೆ, ನಾಡು, ಊರು ಎಲ್ಲವೂ ದಿನೇ ದಿನೇ ಸಂಪದಭಿವೃದ್ಧಿಯಿಂದ ತುಂಬಿ ತುಳುಕುತ್ತವೆ.

ಅದೇ ರೀತಿ ಕಾಯಕ ನಿಷ್ಠೆಯಿಂದ ದುಡಿಯುವವನು ಲಕ್ಷಾಧಿಪತಿಯಾಗಿ ಮೆರೆಯುತ್ತಾನೆ. ಕಾಯಕ ಮಾಡದೆ ದುಡಿಯದೆ, ಗಳಿಸಿದ ಸಂಪತ್ತೆಲ್ಲ ಕರಗಿ ಹೋಗಿ ಮಣ್ಣಿನ ಪಾತ್ರೆಯೊಂದಿಗೆ ಭಿಕ್ಷಾಧಿಪತಿಯಾಗಲು ಬಹಳ ದಿನ ಬೇಕಿಲ್ಲ ಎಂದು ಕಾಯಕ ಜೀವಿಗಳಿಗೂ, ಸೋಮಾರಿಗಳಿಗೂ ಇರುವ ವ್ಯತ್ಯಾಸವನ್ನು ಸರ್ವಜ್ಞ ಕವಿ ಮೂರು ಸಾಲುಗಳಲ್ಲಿ ಮಾರ್ಮಿಕವಾಗಿ ಹೇಳಿದ್ದಾನೆ.

ಮತ್ತೊಂದು ಬಗೆಯ ಆಲಸಿಗಳನ್ನು ಶರಣರಾದ ಆಯ್ದಕ್ಕಿ ಮಾರಯ್ಯನವರು ಈ ವಚನದಲ್ಲಿ ನಮಗೆ ತೋರಿಸುತ್ತಿದ್ದಾರೆ.

ನೇಮವ ಮಾಡಿಕೊಂಡು ಭಕ್ತರ ಭವನಂಗಳಂ ಹೊಕ್ಕು
ಕಾಯಕ ಸತು ಹಣ, ಹೊನ್ನು ಬೇಡಿಹೆನೆಂಬುದು
ಕಷ್ಟವಲ್ಲವೆ ಸದ್ಭಕ್ತರಿಗೆ ?
ಆ ಗುಣ ಅಮರೇಶ್ವರ ಲಿಂಗಕ್ಕೆ ದೂರ
(-1180, ಆಯ್ದಕ್ಕಿ ಮಾರಯ್ಯನವರು)

ಕೇವಲ ಹೊಟ್ಟೆಪಾಡಿಗಾಗಿ ಧಾರ್ಮಿಕ ಲಾಂಛನಗಳನ್ನು ಧರಿಸಿಕೊಂಡು, ಭಕ್ತರಂತೆ ನಟಿಸುತ್ತಾ, ಮನೆ ಮನೆಗಳನ್ನು, ಮಠ ಮಂದಿರಗಳನ್ನು ಹೊಕ್ಕು ದುಡಿಯದೆ ಹಣ, ಊಟ ಮುಂತಾದ ಜೀವನಕ್ಕೆ ಅಗತ್ಯವಾದ ವಸ್ತುಗಳನ್ನು ಕಾಡಿ, ಬೇಡಿ,ಯಾಚಿಸುತ್ತಾ ಬದುಕುವವರನ್ನು ಕಂಡು ಈ ವಚನದಲ್ಲಿ ಆಯ್ದಕ್ಕಿ ಮಾರಯ್ಯನವರು ವಿಡಂಬಿಸುತ್ತಿದ್ದಾರೆ. ಸನ್ಮಾರ್ಗದಿಂದ ಕಷ್ಟಪಟ್ಟು ದುಡಿದು ಸಮಾಜದಲ್ಲಿ ಆತ್ಮಗೌರವದಿಂದ ಬಾಳುವುದು ಇವರಿಗೆ ಸೇರದು. ಧರ್ಮ -ಸಮಾಜಗಳ ಋಣ ತೀರಿಸಬೇಕೆಂಬ ಪ್ರಜ್ಞೆ ಇಂಥವರಿಗೆ ಬರುವುದಿಲ್ಲ. ಬದಲಿಗೆ ಯಾವ ಜವಾಬ್ದಾರಿ, ಕರ್ತವ್ಯಗಳಿಲ್ಲದ ಅಲೆಮಾರಿ ಜೀವನ ಶೈಲಿಯನ್ನು ರೂಢಿಸಿ

ಕೊಂಡು ಅನ್ನ, ಹಣವನ್ನು ಬೇಡುತ್ತಾ, ಸಂಪೂರ್ಣವಾಗಿ ಸ್ವಾಭಿಮಾನವನ್ನು ಮರೆತು, ಆಯುಷ್ಯ ಇರುವವರೆಗೂ ದಿನಗಳನ್ನು ತಳ್ಳುತ್ತಾ ಕ್ಷಣಗಳನ್ನು ಉರುಳಿಸುವುದನ್ನೇ ಗುರಿಯಾಗಿ ಮಾಡಿಕೊಡು ಅಲೆಯುವ ಆಲಸಿಗಳು ಇಂದಿಗೂ ಸಮಾಜದಲ್ಲಿ ಕಂಡುಬರುತ್ತಿರುವುದು ಶರಣರ ದೂರದೃಷ್ಟಿಗೆ ಸಾಕ್ಷಿಯಾಗಿದೆ. ಇಂಥ ಜಡಭಕ್ತರಿಂದ ಪರಮಾತ್ಮನು ದೂರ ಸರಿಯುತ್ತಾನೆ. ಅವರನ್ನು ತನ್ನ ಸಮೀಪ ಬಿಟ್ಟುಕೊಳ್ಳುವುದಿಲ್ಲ ಮಾತ್ರವಲ್ಲ ಇಂಥವರನ್ನು ದೇವರಿಂದಲೂ ಪರಿವರ್ತಿಸಲು ಅಸಾಧ್ಯ ಎಂದು ಪರೋಕ್ಷವಾಗಿ ಹೇಳುತ್ತಿದ್ದಾರೆ.

ಕಾಯವಿಡಿದಿಹನ್ನಬರ ಶಿವಭಕ್ತಂಗೆ ಕಾಯಕವೇ ಕೈಲಾಸ
ಕಾಯಕವಿಲ್ಲದವನ ಅರಿವು ಮಾಯವಾಯಿತ್ತು.
ಅಡುಗೂಲಿಯ ಮನೆಯಂತೆ ಗಡಿಗೆಯ ಗಂಜಿಯಾಸೆ ಬೇಡ
ಕೊಡುವರೆಂದೊಬ್ಬರ ಮನೆಗೆ ಅಡಿಗಡಿಗೆ ಹೋಗಬೇಡ
ಇಂತಿವರಡಿಯ ಕಾಂಬುದಕ್ಕೆ ಮೊದಲೆ ಅಡಗಿದೆಯಲ್ಲಾ
ಮನಸಂದಿತ್ತು ಮಾರೇಶ್ವರಾ ॥
- ಮನಸಂದ ಮಾರಿತಂದೆಯವರು

ಬಸವಾದಿ ಶರಣರ ಸಮಕಾಲೀನರಾದ ಶರಣ ಮನಸಂದ ಮಾರಿ ತಂದೆಯವರು ತಮ್ಮ ಈ ವಚನದಲ್ಲಿ ಆಲಸಿಗಳ ಕೀಳು ಮನಸ್ಸಿನ ಹೀನಸ್ಥಿತಿಯನ್ನು ಮನಂಬುಗುವಂತೆ ಇಲ್ಲಿ ವಚಿಸಿದ್ದಾರೆ.

ಶರೀರಧಾರಿಯಾಗಿ, ಪರಮಾತ್ಮನನ್ನು ಸದೃಢವಾಗಿ ನಂಬಿದ ಭಕ್ತನ ಕಾಯವು ದೇವರನ್ನು ಒಲಿಸಲು ಸಾಧನವಾಗುವುದು ಮಾತ್ರವಲ್ಲ ಜತೆಗೆ ದಿನನಿತ್ಯ ಮಾಡುವ ಕಾಯಕಕ್ಕೂ ಸಾಧನವಾಗಬೇಕೆಂಬುದೇ ಶರಣರ ಅಭಿಮತ. ಅಲ್ಲದೆ ಭಕ್ತನು ಕಾಯ ಧಾರಿಯಾಗಿ ಈ ಭೂಮಿಯ ಮೇಲಿರುವವರೆಗೂ ಕಾಯಕ ಮಾಡಬೇಕು. ಏಕೆಂದರೆ ಸಾಯುವ ಕೊನೆ ಕ್ಷಣದವರೆಗೂ ಕಾಯಕದಲ್ಲಿ ನಿರತನಾಗಿರಬೇಕಾದುದು ಶರಣನ ಒಂದು ಲಕ್ಷಣ ಎಂಬುದನ್ನು ಮರೆಯಬಾರದು. ಆದರೆ ಕಾಯಕ ಮಾಡದೆ ಆಲಸಿಯಾಗಿ ದಿನ, ಕ್ಷಣ, ಆಯುಷ್ಯವನ್ನು ಉರುಳಿಸುವುದನ್ನೇ ಜೀವನದ ಗುರಿಯಾಗಿರಿಸಿ ಕೊಂಡವರಿಗೆ ಇಂಥ ಅಮೂಲ್ಯವಾದ ಜ್ಞಾನ, ಅರಿವನ್ನು ಅಳವಡಿಸಿಕೊಳ್ಳಲು ಎಂದಿಗೂ ಸಾಧ್ಯವಾಗದು. ಅರಿವಾದ ನಂತರ ಆಲಸ್ಯದ ಬದುಕು ಅಸಾಧ್ಯ ಎಂಬುದನ್ನು ಮನಗಾಣಬೇಕು.

ಅಡುಗೂಲಿಯ ಮನೆಯ ಅಂದರೆ ಶ್ರೀಮಂತರ ಮನೆಯಲ್ಲಿ ಅಡುಗೆ ಮಾಡಿಕೊಂಡು ಕೂಲಿ ಪಡೆದು ಜೀವನ ಸಾಗಿಸುವವರ ಮನೆ ಎಂದರ್ಥ. ಇಂಥವರ ಮನೆಯಲ್ಲಿ ಸದಾ ಊಟ ಇರುತ್ತದೆ/ ಸಿಗುತ್ತದೆ ಎಂದು ನಂಬುವಂತಿಲ್ಲ. ಏಕೆಂದರೆ ತನ್ನ ವೈಯಕ್ತಿಕ ಊಟ ಯಜಮಾನನ ಮನೆಯಲ್ಲಿ ಆಗಿದ್ದರೂ, ನಂಬಿದ ಹೆಂಡತಿ ಮಕ್ಕಳಿಗೂ ಅಂಥದ್ದೆ ಊಟ ಕೊಡಲು ಅವನಿಗೆ ಕಷ್ಟವಾಗುತ್ತದೆ. ಅಂದರೆ ಉಳಿದರೆ ಮಾತ್ರ ಮನೆಗೆ ತರುತ್ತಾನೆ ; ಇಲ್ಲದಿದ್ದರೆ ಇಲ್ಲ. ಹೀಗಿರುವಾಗ ಸುಲಭವಾಗಿ, ಶೀಘ್ರವಾಗಿ ತಯಾರಾಗುವ ಗಂಜಿಯಿಂದಲೇ ತೃಪ್ತಿಪಡಬೇಕಾದ ಉಭಯ ಸಂಕಟ ಪ್ರಾಪ್ತಿಯಾಗುತ್ತದೆ. ಇನ್ನು ಮನೆಗೆ ಬಂದವರಿಗೂ ಸಂತೃಪ್ತವಾಗಿ ಊಟ ನೀಡುತ್ತಾರೆ ಎಂಬ ಆಸೆಯಿಟ್ಟುಕೊಂಡು ಹೋಗುವುದು ಬೇಡ ಎಂದು ಹೇಳುವುದನ್ನು ನೋಡಿದರೆ ಮತ್ತೊಬ್ಬರ ಹಂಗಿನಲ್ಲಿ ಬದುಕುತ್ತಿರುವವರ ಹೀನ ಸ್ಥಿತಿ ಅರ್ಥವಾಗುತ್ತದೆ.

ಯಾರಿಗಾದರೂ ಕೊಡುವ ಗುಣವಿದೆ, ದಾನಶೂರರು, ಕೊಡುಗೈದಾನಿಗಳು ಎಂದು ತಿಳಿದ ಕೂಡಲೇ ಅಂಥವರ ಬಳಿಗೆ ಪದೇ ಪದೇ ಹೋಗಿ ಕಾಡಿ ಬೇಡಿ ತೊಂದರೆ ಕೊಡುವ ಮೂಲಕ ಕೀಳು ಮಟ್ಟದ ಯಾಚಕನಾಗಬಾರದು. ದೀನನಾಗಿ ಬೇಡುತ್ತಾ ಬದುಕುವ ಬದಲಿಗೆ ದುಡಿದು ಬಾಳುವುದನ್ನು ಕಲಿಯಬೇಕು. ಕಾಯಕದ ಅರಿವು- ಆಚಾರವಿಲ್ಲದ ಇಂಥ ಆಲಸಿ, ಜಡರುಗಳನ್ನು ಕಾಣುವ ಮೊದಲೇ ಪರಮಾತ್ಮನ ನೆನಪಿನಲ್ಲಿ ಲೀನವಾಗು ಎಂದು ಶರಣ ಮಾರಿತಂದೆಯವರು ತಿರಸ್ಕಾರದೊಂದಿಗೆ ಮನಸ್ಸಿಗೆ, ತನ್ಮೂಲಕ ಸಮಾಜ ಬಂಧುಗಳಿಗೆ ಆಲಸಿಗಳ ಸಂಗದಿಂದ ಸರ್ವವಿಧದಿಂದಲೂ ದೂರವಿರಲು ಬೋಧಿಸುತ್ತಾರೆ.

ಆದ್ದರಿಂದಲೇ ಸೋಮಾರಿಗಳ ಬಗ್ಗೆ "ಕುಳಿತು ಉಣ್ಣುವವನಿಗೆ ಕುಡಿಕೆ ಹಣ ಸಾಲದು. ದುಡಿಯದೆ ಕೊಳೆಯುವುದಕ್ಕಿಂತ ದುಡಿದು ಸವೆಯುವುದು ಲೇಸು" ಎಂಬ ಗಾದೆ ಮಾತುಗಳು ಹುಟ್ಟಿಕೊಂಡಿರುವುದು. ಹೇಡಿಯೂ, ಸೋಮಾರಿಯೂ ಆದವನನ್ನು ಹೆಂಡತಿ, ಮಕ್ಕಳೂ ದೂರ ಮಾಡುತ್ತಾರೆ, ಎನ್ನುತ್ತದೆ ಚಾಣಕ್ಯನ ಅರ್ಥ ನೀತಿ. ಕಾಯಕ ಯೋಗಿಯೂ, ಶ್ರಮಜೀವಿಯೂ, ಶೂರನೂ, ಆದವನು ಎಲ್ಲರ ಮನ್ನಣೆಗೆ ಪಾತ್ರನಾಗುತ್ತಾನೆ ಎಂಬುದು ನಿಸ್ಸಂದೇಹ. ★

ಅಂಗಕ್ಕೆ ಆಚಾರವೆ ಚೆಲುವು ಮನಕ್ಕೆ ಮಹಾನುಭಾವವೇ ಚೆಲುವು
ಅಖಂಡೇಶ್ವರನೆಂಬ ನಿಜವಂಬುಗೊಂಡವಂಗೆ ಶರಣರ ಸಂಗವೇ ಚೆಲುವು

ಕಲ್ಯಾಣ ಕಿರಣ ಪತ್ರಿಕೆಯ ಒಡೆತನ ಮುತ್ತಿತರ ವಿವರಗಳ ಪ್ರಕಟಣೆ

ಪ್ರಾರೂಪ 4 (ವಿಧಿ 8)

1.	ಪ್ರಕಟಣೆಯ ಸ್ಥಳ	ಬೆಂಗಳೂರು
2.	ಪ್ರಕಟಣೆಯ ನಿಯತಕಾಲಿಕತೆ	ಮಾಸಿಕ
3.	ಮುದ್ರಕರ ಹೆಸರು	ಶ್ರೀಮತಿ ಕಮಲಮ್ಮ
	ಭಾರತದ ಪ್ರಜೆಯೆ?	ಹೌದು
	ವಿಳಾಸ	ಪದ್ಮಶ್ರೀ ಪ್ರಿಂಟರ್ಸ್, ರಾಜಾಜಿನಗರ, ಬೆಂಗಳೂರು
4.	ಪ್ರಕಾಶಕರ ಹೆಸರು	ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ
	ಭಾರತದ ಪ್ರಜೆಯೆ ?	ಹೌದು
	ವಿಳಾಸ	ಕಲ್ಯಾಣ ಕಿರಣ ಕಾರ್ಯಾಲಯ, ಬಸವ ಮಂಟಪ, ರಾಜಾಜಿನಗರ, ಬೆಂಗಳೂರು - 560010
5.	ಸಂಪಾದಕರ ಹೆಸರು	ಪೂಜ್ಯ ಶ್ರೀಮಾತೆ ಕಸ್ತೂರಿದೇವಿ
	ಭಾರತದ ಪ್ರಜೆಯೆ?	ಹೌದು
	ವಿಳಾಸ	ಬಸವ ಮಂಟಪ, ರಾಜಾಜಿ ನಗರ, ಬೆಂಗಳೂರು - 560010
6.	ಪತ್ರಿಕೆ ಒಡೆತನ ವಹಿಸಿರುವ ವ್ಯಕ್ತಿಯ ಮತ್ತು ಪಾಲುದಾರರ ಅಥವಾ ಒಟ್ಟು ಬಂಡವಾಳ	ವಿಶ್ವಕಲ್ಯಾಣ ಮಿಷನ್ (ರಿಜಿಸ್ಟರ್ಡ್ ರಿಲಿಜಿಯಸ್ ಚಾರಿಟಬಲ್ ಟ್ರಸ್ಟ್)
	ಶೇ.1.ಕಿಂತ ಹೆಚ್ಚು ಭಾಗಕ್ಕೆ ಪಾಲುದಾರರ ಹೆಸರು ಮತ್ತು ವಿಳಾಸ	ಬಸವ ಮಂಟಪ, ರಾಜಾಜಿ ನಗರ, ಬೆಂಗಳೂರು-560010

ಮೇಲೆ ಕೊಟ್ಟಿರುವ ವಿವರಗಳು ನನಗೆ ತಿಳಿದ ಮಟ್ಟಿಗೆ ಮತ್ತು ನಂಬಿಕೆಯಂತೆ ನಿಜವೆಂದು ನಾನು ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ ಘೋಷಿಸುತ್ತೇನೆ.

ಕಲ್ಯಾಣ ಕಿರಣ, ದಿ.16-3-2008

ಪ್ರಕಾಶಕರು
ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ
ಬೆಂಗಳೂರು -560010



ಮಹಾ ಶಿವರಾತ್ರಿ ಶರಣ ಗಣ ಮೇಳದ ಉದ್ಘಾಟನೆ- ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರಿಂದ









ಸರ್ವ ಶರಣರ ದಿನಾಚರಣೆಯಂದು ಪ್ರಾಸ್ತಾವಿಕ ಭಾಷಣ ಮಾಡುತ್ತಿರುವ ಪೂಜ್ಯ ಮಾತಾಜಿಯವರು

